ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಲಾಲ್ ಸಲಾಂ ಕಾಮ್ರೇಡ್ ಕಾಂತಿ ಬಿಸ್ವಾಸ್



ಸಂಪುಟ 10 | ಸಂಚಿಕೆ 19 | ಪುಟ 16 | ಮೇ 8, 2016 | ರೂ. 10/-

web: www.janashakthi.co.in e-mail : js_weekly@yahoo.com



ಕರ್ನಾಟಕದ ಮೊದಲ ಮೇ ದಿನ



'ಡಬ್ಬಲ್' ಪಿ.ಎಫ್. ಕಸಿಯಲು ಬಿಡೆವು



'ಬೋಲೋ ಮಜದೂರ್ ಬಹನ್ ಕೀ ಜೈ'



ಸಿಗರನಹಳ್ಳಿ ದಲಿತರ ಚಾರಿತ್ರಿಕ ವಿಜಯ





ಬರ ನೀಗಲು ರೇಗಾ

ಜೆ.ಎನ್.ಯು. : ಉಪವಾಸ ಸತ್ಯಾಗ್ರಹ

ನೌಕರರ ಭವಿಷ್ಯ ನಿಧಿಯ ಮೇಲೆ ಮೋದಿ ಸರಕಾರದ ಮತ್ತೊಂದು ದಾಳಿ
ಎಪ್ರಿಲ್ 29ರಂದು ಕಾರ್ಮಿಕ ಸಂಘಟನೆಗಳ ಮತ್ತೊಂದು ಪ್ರತಿಭಟನೆ

ಕೇಂದ್ರ ಸರಕಾರ ಮತ್ತೆ ನೌಕರರ ಭವಿಷ್ಯನಿಧಿಯ ಮೇಲೆ ದಾಳಿ ಮಾಡಿದೆ. ಕಳೆದೆರಡು ತಿಂಗಳಲ್ಲಿ, ಮೊದಲು ತೆರಿಗೆ ವಿಧಿಸುವ ಪ್ರಯತ್ನ, ನಂತರ ತಮ್ಮದೇ ಹಣವನ್ನು ಹಿಂದಕ್ಕೆ ಪಡೆಯುವುದರ ಮೇಲೆ ನಿಷೇಧ ಹೇರುವ ಪ್ರಯತ್ನ ವಿಫಲವಾದ ಮೇಲೆ ಈಗ ಇಪಿಎಫ್‌ಒ, ಅಂದರೆ ನೌಕರರ ಭವಿಷ್ಯ ನಿಧಿ ಸಂಘಟನೆಯ ಕೇಂದ್ರ ಟ್ರಸ್ಟಿ ಮಂಡಳಿ ನಿರ್ಧರಿಸಿದ ಮಧ್ಯಂತರ ಬಡ್ಡಿದರವನ್ನು ಕಡಿತ ಮಾಡಿದೆ.

ಫೆಬ್ರುವರಿ 16ರಂದು ಸ್ವತಃ ಇದೇ ಸರಕಾರದ ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದ್ಯಕ್ಕೆ 8.8ಶೇ. ನಿಗದಿ ಮಾಡೋಣ, ನಿಧಿಯಲ್ಲಿ ಸಾಕಷ್ಟು ಸಂಗ್ರಹ ಇರುವುದರಿಂದ ಅದನ್ನು ಮತ್ತಷ್ಟು ಹೆಚ್ಚಿಸಬಹುದು ಎಂದು ಆ ಸಭೆಯಲ್ಲಿ ಸರ್ವಾನುಮತದಿಂದ ಶಿಫಾರಸು ಮಾಡಲಾಗಿತ್ತು. ಆದರೆ ಈಗ ಹಣಕಾಸು ಮಂತ್ರಾಲಯ ಅದನ್ನು 8.7ಶೇ.ಕ್ಕೆ ಇಳಿಸುವ ತನ್ನ ನಿರ್ಧಾರವನ್ನು ಇಪಿಎಫ್‌ಒ ಮೇಲೆ ಹೇರಿದೆ.

ಇದು ಭವಿಷ್ಯ ನಿಧಿಯ ಮೇಲೆ ಸರಕಾರದ ದಾಳಿಯ ಅವಿಭಾಜ್ಯ ಅಂಗವಾಗಿದೆ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

ಸಿಐಟಿಯು ಮಾತ್ರವಲ್ಲ, ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್ ಬಿಟ್ಟು ಇತರ ಎಲ್ಲ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಇದನ್ನು ಬಲವಾಗಿ ಖಂಡಿಸುತ್ತ ಎಪ್ರಿಲ್ 29ರಂದು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿವೆ. ಬಿಎಂಎಸ್‌ಗೆ ಕೂಡ ಇದನ್ನು ಅರಗಿಸಿಕೊಳ್ಳಲಾಗದೆ ತಮ್ಮ ಪರಿವಾರದ ಕಾರ್ಮಿಕ ಮಂತ್ರಿಗಳ ಬಳಿ ತನ್ನ ಮುನಿಸನ್ನು ವ್ಯಕ್ತಪಡಿಸಿದೆ.

8.8ಶೇ. ಬಡ್ಡಿ ಕೊಟ್ಟರೆ ಭವಿಷ್ಯ ನಿಧಿಯಲ್ಲಿ ಮಿಗುತಾಯ ಬಹಳ ಕಡಿಮೆಯಾಗುತ್ತದೆ ಎಂಬುದು ಹಣಕಾಸು ಮಂತ್ರಾಲಯದ ಒಂದು ಸಬೂಬು. ಆದರೆ ಇದನ್ನು ಭವಿಷ್ಯನಿಧಿಯ ಕೇಂದ್ರೀಯ ಟ್ರಸ್ಟ್ ಮಂಡಳಿ ಒಪ್ಪುವುದಿಲ್ಲ. ಸಾಕಷ್ಟು ಮಿಗುತಾಯ ಇರಬೇಕೆನ್ನುವ ಲೆಕ್ಕಾಚಾರದ ಮೇಲೆಯೇ 8.8ಶೇ. ಬಡ್ಡಿದರವನ್ನು ನಿರ್ಧರಿಸಲಾಗಿದೆ, ಮತ್ತು ಇದನ್ನು ಇನ್ನಷ್ಟು ಹೆಚ್ಚಿಸುವ ಅವಕಾಶ ಇದೆ ಎಂದು ಸೂಚಿಸಲಾಗಿದೆ ಎಂದು ಟ್ರಸ್ಟಿ ಮಂಡಳಿಯ ಸದಸ್ಯರು ಹೇಳುತ್ತಿದ್ದಾರೆ. ಈ ಟ್ರಸ್ಟಿಗಳ ಮಂಡಳಿಯಲ್ಲಿ ಹಣಕಾಸು ಇಲಾಖೆಯ ಪ್ರತಿನಿಧಿಗಳೂ ಇದ್ದಾರೆ, ಅವರೂ ಇದನ್ನು ಒಪ್ಪಿದ್ದರು ಎಂದು ಮಂಡಳಿಯ ಒಬ್ಬ ಸದಸ್ಯರಾದ ಸಿಐಟಿಯು ಅಧ್ಯಕ್ಷ ಎ.ಕೆ.ಪದ್ಮನಾಭನ್ ನೆನಪಿಸಿದ್ದಾರೆ.

ಹಣಕಾಸು ಮಂತ್ರಾಲಯ ಕೊಟ್ಟಿರುವ ಇನ್ನೊಂದು ಕಾರಣ, 2.89 ಕೋಟಿ ಪಿಎಫ್ ಖಾತೆಗಳು ಪೂರ್ಣವಾಗಿ ಅಪ್‌ಡೇಟ್ ಆಗಿಲ್ಲ, ಆದ್ದರಿಂದ ಹೆಚ್ಚಿನ ಬಡ್ಡಿದರ ನಿರ್ಧರಿಸಿದರೆ, ಮಿಗುತೆ ಬಹಳ ಕಡಿಮೆ ಮಟ್ಟಕ್ಕೆ ಬರಬಹುದು ಎಂಬುದು. ಇದನ್ನೂ ಇಪಿಎಫ್‌ಒ ಅಲ್ಲಗಳೆದಿದೆ. ಕೇವಲ 3ಲಕ್ಷ ಖಾತೆಗಳು ಮಾತ್ರವೇ ಅಪ್‌ಡೇಟ್ ಮಾಡಲು ಬಾಕಿಯಿದೆ ಎಂದು ಅದು ಹೇಳಿದೆ. ಹಣಕಾಸು ಇಲಾಖೆಗೆ ಆ ಸಂಖ್ಯೆ ಯಾರು ಕೊಟ್ಟರೋ ಗೊತ್ತಿಲ್ಲ.

ವಾಸ್ತವವಾಗಿ ಇವೆರಡೂ ನಿಜವಾದ ಕಾರಣಗಳಲ್ಲ ಎಂಬುದು ಅದು ಕೊಟ್ಟಿರುವ ಮೂರನೇ ಕಾರಣದಿಂದ ಸ್ಪಷ್ಟವಾಗುತ್ತದೆ. ಇತ್ತೀಚೆಗಷ್ಟೇ ಈ ಸರಕಾರ ಎಲ್ಲ ಸಣ್ಣ ಉಳಿತಾಯಗಳ ಬಡ್ಡಿ ದರಗಳನ್ನು ಇಳಿಸಿದೆ, ನೌಕರರ ಭವಿಷ್ಯ ನಿಧಿಯ ಬಡ್ಡಿದರವೂ ಅದಕ್ಕೆ ಅನುಗುಣವಾಗಿ ಇರಬೇಕು ಎಂಬುದು ಅದರ ತರ್ಕ.

ನೌಕರರ ಭವಿಷ್ಯನಿಧಿಯಲ್ಲಿ ಸರಕಾರದ ವಂತಿಗೆ ಏನೂ ಇರುವುದಿಲ್ಲ, ಆದರೂ ವಾಸ್ತವವಾಗಿ ವಂತಿಗೆ ಕೊಡುವವರು ಈ ಎಲ್ಲ ಅಂಶಗಳನ್ನೂ ಗಮನಕ್ಕೆ ತಗೊಂಡು ಕೈಗೊಂಡ ನಿರ್ಧಾರದಲ್ಲಿ ಸರಕಾರದ ಹಸ್ತಕ್ಷೇಪ ಏಕೆ ಎಂದು ಕಾರ್ಮಿಕರು ಕೇಳುತ್ತಿರುವ ಪ್ರಶ್ನೆ. ಬಡ್ಡಿದರಗಳನ್ನು ಇಳಿಸಬೇಕೆಂಬ ಕಾರ್ಪೋರೇಟ್ ವಲಯದ ಒತ್ತಡಗಳ ಹಿನ್ನೆಲೆಯಲ್ಲಿ ಮೋದಿ ಸರಕಾರದ ಈ ಮೂರನೇ ತರ್ಕವನ್ನು ಕಾಣಬೇಕಾಗಿದೆ ಎನ್ನುತ್ತವೆ ಕಾರ್ಮಿಕ ಸಂಘಗಳು. ಇದೀಗ ಈ ಸರಕಾರದ ಕಾರ್ಪೋರೇಟ್ ಪರ ಒಲವನ್ನು ಸಾಬೀತು ಮಾಡುವ ಮತ್ತೊಂದು ಉದಾಹರಣೆ ಎಂದು ಬೇರೆ ಹೇಳಬೇಕಾಗಿಲ್ಲ.

ಆದ್ದರಿಂದಲೇ ಕಾರ್ಮಿಕ ಸಂಘಟನೆಗಳು ಸರಕಾರದ ಈ ಕ್ರಮ ಕಾರ್ಮಿಕ-ವಿರೋಧಿ ಎನ್ನುತ್ತಿರುವುದು, ಸರಕಾರದ ಪರವಾಗಿರುವ ಬಿಎಂಎಸ್ ಕೂಡ ಇದನ್ನು ವಿರೋಧಿಸಬೇಕಾಗಿ ಬಂದಿರುವುದು ಇದು ಮೂಲತಃ ಕಾರ್ಮಿಕ-ವಿರೋಧಿ ಸರಕಾರ ಎನ್ನುವುದನ್ನು ಮತ್ತೊಮ್ಮೆ ಸಾಬೀತು ಪಡಿಸುತ್ತದೆ.



ಕಾಂತಿ ಬಿಸ್ವಾಸ್ ನಿಧನ

ಪಶ್ಚಿಮ ಬಂಗಾಲದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಪಶ್ಚಿಮ ಬಂಗಾಲದ ಎಡರಂಗ ಸರಕಾರದಲ್ಲಿ 1982ರಿಂದ 2006ದ ವರೆಗೆ ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿದ್ದು, ದೇಶದಲ್ಲೇ ಅತಿ ದೀರ್ಘಕಾಲ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದವರು ಎಂಬ ಹೆಗ್ಗಳಿಕೆ ಹೊಂದಿದ್ದ ಕಾಂತಿ ಬಿಸ್ವಾಸ್ ಎಪ್ರಿಲ್ 27 ರಂದು ನಿಧನರಾಗಿದ್ದಾರೆ. ಅವರಿಗೆ 84 ವರ್ಷವಾಗಿತ್ತು.

ಅವಿಭಜಿತ ಬಂಗಾಲದ ಫರೀದ್‌ಪುರ್‌ನಲ್ಲಿ ಬಡ ರೈತ ಕುಟುಂಬದಲ್ಲಿ ಹುಟ್ಟಿದ ಬಿಸ್ವಾಸ್ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, ನಂತರ ಆಗಿನ ಪೂರ್ವ ಪಾಕಿಸ್ತಾನದ ಕಾಲೇಜೊಂದರಲ್ಲಿ ಅಧ್ಯಾಪಕರಾದರು. ಅಲ್ಲಿನ ಕಮ್ಯುನಿಸ್ಟರೊಂದಿಗೆ ಕೆಲಸ ಮಾಡುತ್ತಿದ್ದ ಅವರ ವಿರುದ್ಧ ಪೋಲಿಸ್ ವಾರಂಟ್ ಹೊರಡಿಸಲಾಯಿತು. 1960ರಲ್ಲಿ ಅವರು ಭಾರತಕ್ಕೆ ಬಂದು 24 ಪರಗಣ ಪ್ರದೇಶದ ಶಾಲೆಯೊಂದರಲ್ಲಿ ಅಧ್ಯಾಪಕರಾಗಿ ಸೇರಿದರು, 1967ರಲ್ಲಿ ಸಿಪಿಐ(ಎಂ) ಸದಸ್ಯತ್ವ ಗಳಿಸಿದರು. ಕಿಸಾನ್ ಸಭಾ ಮತ್ತು ಡಿವೈಎಫ್‌ಐ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದ ಕಾಂತಿ ಬಿಸ್ವಾಸ್ 1977ರಲ್ಲಿ ಪಶ್ಚಿಮ ಬಂಗಾಲ ವಿಧಾನಸಭೆಗೆ ಆರಿಸಲ್ಪಟ್ಟರು. ಆಗ ರಚನೆಗೊಂಡ ಮೊದಲ ಎಡರಂಗ ಸರಕಾರದಲ್ಲಿ ಅವರು ಯುವಜನ ಸೇವೆಗಳ ಮಂತ್ರಿಯಾಗಿ ನೇಮಿಸಲ್ಪಟ್ಟರು. ಮುಂದೆ 1982ರಿಂದ 2006ರ ವರೆಗೆ ಎಡರಂಗ ಸರಕಾರಗಳಲ್ಲಿ ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

1981ರಲ್ಲಿ ಅವರು ಸಿಪಿಐ(ಎಂ)ನ ಪಶ್ಚಿಮ ಬಂಗಾಲ ರಾಜ್ಯ ಸಮಿತಿಗೆ ಆಯ್ಕೆಯಾದರು. 2012ರಿಂದ ನಿಧನದ ವರೆಗೆ ಅವರು ಪಕ್ಷದ ರಾಜ್ಯ ಹತೋಟಿ ಆಯೋಗದ ಅಧ್ಯಕ್ಷರಾಗಿ ಜವಾಬ್ದಾರಿಗಳನ್ನು ನಿರ್ವಹಿಸಿದರು.

ಕಾಂತಿ ಬಿಸ್ವಾಸ್ ದಲಿತರು ಮತ್ತು ಹಿಂದುಳಿದವರ ಸಂಘಟನೆಗಳಲ್ಲಿ ದುಡಿದವರು, ಪಶ್ಚಿಮ ಬಂಗಾಲದ ಸಾಮಾಜಿಕ ನ್ಯಾಯ ಮಂಚ್‌ನ ಅಧ್ಯಕ್ಷರಾಗಿದ್ದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕಾಂತಿ ಬಿಸ್ವಾಸ್‌ರವರ ಸೇವೆಗಳನ್ನು ಸ್ಮರಿಸಿಕೊಳ್ಳುತ್ತ ಅವರ ಪುತ್ರ ಮತ್ತು ಪುತ್ರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಜೆಎನ್‌ಯು ಆಡಳಿತಗಾರರ ಮತ್ತೊಂದು ಪ್ರಹಸನ: ವಿದ್ಯಾರ್ಥಿ ಮುಖಂಡರ ವಿರುದ್ಧ ಶಿಸ್ತುಕ್ರಮಗಳ ಪ್ರಕಟಣೆ



'ಆಝಾದಿ ಚೌಕ್'ನಲ್ಲಿ ತನಿಖಾ ವರದಿಯನ್ನು ಸುಟ್ಟು ಹಾಕುತ್ತಿರುವ ಜೆಎನ್‌ಯು ವಿದ್ಯಾರ್ಥಿಗಳು

ದಿಲ್ಲಿಯ ಜವಹರಲಾಲ್ ವಿಶ್ವವಿದ್ಯಾಲಯದ ಆಡಳಿತ ಪಾಟ ಕಲಿಯುವಂತೆ ಕಾಣುತ್ತಿಲ್ಲ. ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್ ಮತ್ತಿತರ ಮುಖಂಡರನ್ನು ದಂಡಿಸುವ ಕ್ರಮಗಳನ್ನು ಅದೀಗ ಪ್ರಕಟಿಸಿದೆ. ಇದೊಂದು ಪ್ರಹಸನ ಎಂದು ವಿದ್ಯಾರ್ಥಿ ಸಂಘ ಅವನ್ನು ತಿರಸ್ಕರಿಸಿದೆ.

ಈ ವಿದ್ಯಾರ್ಥಿಗಳ ಮೇಲೆ ದಿಲ್ಲಿ ಪೋಲೀಸರು ಫೆಬ್ರುವರಿ 11ರಂದು ರಾಜದ್ರೋಹದ ಕೇಸ್ ಹಾಕಿದಾಗ ಭುಗಿಲೆದ್ದ ಆಕ್ರೋಶದ ಹಿನ್ನೆಲೆಯಲ್ಲಿ ಜೆಎನ್‌ಯು ಆಡಳಿತ ತನಿಖೆಯ ನಾಟಕ ನಡೆಸಲು ಉನ್ನತ ಮಟ್ಟದ ತನಿಖಾ ಸಮಿತಿಯನ್ನು ನೇಮಿಸಿತ್ತು. ಇದರ ನೇಮಕವೇ ನಿಯಮ ಬಾಹಿರ, ಅದನ್ನು ಸರಿಪಡಿಸಬೇಕು ಎಂದು ವಿದ್ಯಾರ್ಥಿ ಸಂಘದ ಒತ್ತಾಯವನ್ನು ಕಿವಿಗೆ ಹಾಕಿಕೊಳ್ಳದೆ ಇವರ ತನಿಖೆ ಮುಂದುವರೆಯಿತು. ವಿದ್ಯಾರ್ಥಿಗಳು ಅದನ್ನು ಬಹಿಷ್ಕರಿಸಿದರು. ಮಾರ್ಚ್ ತಿಂಗಳಲ್ಲಿ ಈ ಸಮಿತಿ ತನ್ನ ವರದಿ/ಶಿಫಾರಸುಗಳನ್ನು ಸಲ್ಲಿಸಿತು. ಈ ನಡುವೆ ಯಾವ ವೀಡಿಯೋಗಳ ಆಧಾರದಲ್ಲಿ ದಿಲ್ಲಿ ಪೋಲೀಸರು ಕೇಸ್ ಹಾಕಿದ್ದರೋ ಅವೇ ಹುಸಿಗೊಳಿಸಿದವುಗಳು ಎಂದು ಬೆಳಕಿಗೆ ಬಂತು. ಸಾಮಾನ್ಯವಾಗಿ ಇಂತಹ ಕೇಸಿನಲ್ಲಿ ಸಿಗದ ಜಾಮೀನು ಆಪಾದಿತರೆಲ್ಲರಿಗೂ ಸಿಕ್ಕಿತು.

ಈಗ 'ಶಿಫಾರಸುಗಳು' ಕೈಸೇರಿದ ಒಂದು ತಿಂಗಳ ನಂತರ 'ಶಿಸ್ತುಕ್ರಮ'ಗಳನ್ನು ಪ್ರಕಟಿಸಲಾಗಿದೆ. ಕನ್ಹೈಯ ಕುಮಾರ್‌ಗೆ 10,000 ರೂ. ದಂಡ, ಉಮರ್ ಖಾಲಿದ್, ಅನಿರ್ಬನ್ ಭಟ್ಟಾಚಾರ್ಯ ಮತ್ತು ಕಾಶ್ಮೀರಿ ವಿದ್ಯಾರ್ಥಿ ಮುಜಿಬ್ ಮಟ್ಟು ಅವರನ್ನು ಅಮಾನತು ಮಾಡಲಾಗಿದೆ, ಇವರೆಲ್ಲ ನಿರ್ದಿಷ್ಟ ದಿನಾಂಕದೊಳಗೆ ತಮ್ಮ ಹಾಸ್ಟೆಲ್‌ಗಳನ್ನು ಖಾಲಿ ಮಾಡಬೇಕೆಂದೂ ಆದೇಶಿಸಲಾಗಿದೆ. ಜೆಎನ್‌ಯು ಉಪಕುಲಪತಿಗಳು ಕೊನೆಗೂ ಧೈರ್ಯ ತುಂಬಿಕೊಂಡು, ವಿದ್ಯಾರ್ಥಿಗಳೆಲ್ಲರೂ ಪರೀಕ್ಷೆಗಳಿಗೆ ಸಿದ್ಧವಾಗುತ್ತಿರುವ ಸಮಯಕ್ಕೆ ಕಾದುಕೊಂಡು ಮೋದಿ ಸರಕಾರದ ಪ್ರೀತ್ಯರ್ಥ ವಿದ್ಯಾರ್ಥಿಗಳ ವಿರುದ್ಧ ಈ ಕಠಿಣ ಕ್ರಮಗಳನ್ನು ಪ್ರಕಟಿಸಿದ್ದಾರೆ ಎಂದು ಈ ಕ್ರಮಗಳನ್ನು ಖಂಡಿಸಿರುವ ಜೆಎನ್‌ಯು ವಿದ್ಯಾರ್ಥಿ ಸಂಘ ಇದನ್ನು ತಾವು ಮಾನ್ಯ ಮಾಡುವುದಿಲ್ಲ ಎಂದು ಸಾರಿದೆ.

ಎಪ್ರಿಲ್ 26 ರಂದು ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ 'ಉನ್ನತ ಮಟ್ಟದ ತನಿಖಾ ಸಮಿತಿ'ಯ ವರದಿಯನ್ನು ಈಗ 'ಆಝಾದಿ ಚೌಕ್' ಎಂದು ಹೆಸರಾಗಿರುವ ವಿವಿಯ ಆಡಳಿತ ಕಚೇರಿಯ ಎದುರೇ ವಿದ್ಯಾರ್ಥಿಗಳು ಸುಟ್ಟು ಹಾಕಿದ್ದಾರೆ. ಜನವರಿ 27ರಂದು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್ ನೇತೃತ್ವದಲ್ಲಿ 19 ವಿದ್ಯಾರ್ಥಿಗಳು ಆಮರಣಾಂತ ಉಪವಾಸ ಮುಷ್ಕರ ಆರಂಭಿಸಿದ್ದಾರೆ.


ಸಂಸತ್ತಿನಲ್ಲೂ ಈ ವಿಷಯದ ಪ್ರಸ್ತಾಪವಾಗಿದೆ. ಎಡಪಕ್ಷಗಳು ವಿವಿಯದ್ದು 'ಸೇಡು ತೀರಿಸಿಕೊಳ್ಳುವ ಕ್ರಮ' ಎಂದು ಬಣ್ಣಿಸಿ ಈ ಬಗ್ಗೆ ರಾಜ್ಯಸಭೆಯಲ್ಲಿ ಚರ್ಚೆಗೆ ಆಗ್ರಹಿಸಿವೆ.

ಇದಕ್ಕೆ ಮೊದಲು ಕನ್ಹೈಯ ಕುಮಾರ್ ಅವರ ಮುಂಬೈ ಮತ್ತು ಪುಣೆ ಭೇಟಿಗಳನ್ನು ತಡೆಯಲು ಸಂಘಿಗಳು ಪೋಲೀಸರ ನೆರವಿನಿಂದ ಎಷ್ಟೇ ಪ್ರಯತ್ನಿಸಿದರೂ ಸಫಲರಾಗಲಿಲ್ಲ, ಈ ಎರಡೂ ನಗರಗಳಲ್ಲಿಯೂ 'ಆಝಾದಿ' ಘೋಷಣೆಗಳು ಮಾರ್ದನಿ ಗೊಂಡವು. ○

ªÀiÁvÉAzÀgÉ EzÀÄ

ಜಗತ್ತಿನ ಶ್ರಮಿಕರೇ ಒಂದಾಗಿ !
ನಿಮ್ಮನ್ನು ಬಿಗಿದಿರುವ ಸರಪಳಿಗಳನ್ನು ಬಿಟ್ಟು
ನೀವು ಕಳೆದುಕೊಳ್ಳಲು ಬೇರೇನೂ ಇಲ್ಲ.
ಆದರೆ ಗೆಲ್ಲಲು ಒಂದು ಜಗತ್ತೇ ಇದೆ.


– ಕಾರ್ಲ್ ಮಾರ್ಕ್ಸ್ (ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ)



ಟಿಎಂಸಿ ರಾಜ್ಯಸಭಾ ಮುಖಂಡನ ಹತಾಶ ಸೈಬರ್ ಕ್ರೈಮ್

ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸಿನ ಮುಖಂಡ ಡೆರಿಕ್ ಒಬ್ರಿಯನ್ ಕಳೆದ ವಾರ ದಿಲ್ಲಿಯಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ತನ್ನ 'ಪ್ರಿಯ' ಫೋಟೋ ಎಂದು ಒಂದು ಫೋಟೋವನ್ನು ಸಂಭ್ರಮದಿಂದ 'ಬಿಡುಗಡೆ' ಮಾಡಿದರು. ಅದರಲ್ಲಿ ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್ ಸಿಪಿಐ(ಎಂ)ನ ಹಿರಿಯ ಮುಖಂಡ ಪ್ರಕಾಶ ಕಾರಟ್ ಅವರಿಗೆ ಲಾಡು ತಿನ್ನಿಸುವಂತೆ ತೋರಿಸಲಾಗಿದೆ. ಆದರೆ ಇದು ವಾಸ್ತವವಾಗಿ ಮೋಸದ ಚಿತ್ರ, ರಾಜನಾಥ್ ಸಿಂಗ್ ಅವರು ಪ್ರಧಾನಿಗಳಿಗೆ ಲಾಡು ತಿನ್ನಿಸುವ ಚಿತ್ರದಲ್ಲಿ ಪ್ರಧಾನಿಗಳ ಬದಲಾಗಿ ಕಾರಟ್ ಅವರ ಚಿತ್ರವನ್ನು ಸೇರಿಸಿ ಮಾಡಿದ ಮೋಸದ ಚಿತ್ರ ಎಂದು ಬೇಗನೇ ಬಯಲಾಯಿತು.

ಸಿಪಿಐ(ಎಂ)ನ ಮತ್ತು ಪ್ರಕಾಶ ಕಾರಟ್‌ರವರ



ಹೆಸರುಗೆಡಿಸುವ ಹತಾಶ ಪ್ರಯತ್ನ ಇದು ಎಂಬದು ಸ್ವಯಂವೇದ್ಯ.

ಈಗ ಈತ ಸಾಮಾಜಿಕ ಮಾಧ್ಯಮದಲ್ಲಿ 'ಡೆರಿಕ್ ಓಹ್ ಬ್ರೈನ್'(ಓಹ್, ಎಂತಾ ತಲೆ!) ಎಂದೇ ಕುಖ್ಯಾತನಾಗಿದ್ದಾರಂತೆ.

ದಿಲ್ಲಿಯ ಮಂದಿರ್‌ಮಾರ್ಗ್ ಡಿಸಿಪಿಗೆ ಈ ಭಾರೀ 'ತಲೆ'ಯ ವಿರುದ್ಧ ದೂರು ದಾಖಲಿಸಲಾಗಿದೆ, ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಬರಗಾಲ ಎಂದರೆ ಎಲ್ಲರಿಗೂ ಇಷ್ಟ?!

ಸಂಪಾದಕೀಯ

'ಬರಗಾಲ ಎಂದರೆ ಎಲ್ಲರಿಗೂ ಇಷ್ಟ' ಇದು ಪ್ರಸಿದ್ಧ ಜನಪರ ಪತ್ರಕರ್ತ ಪಿ ಸಾಯಿನಾಥ ಅವರ ಪ್ರಸಿದ್ಧ ಪುಸ್ತಕದ ತಲೆಬರಹ. ಇದು ತಮಾಷೆಯ ವಿಷಯ ಅಲ್ಲ. ನೋವಿನ ಆತಂಕದ ವಿಷಯ. ಬರಗಾಲ ಬಂದಾಗಲೆಲ್ಲ ಪ್ರಜ್ಞಾವಂತರನ್ನು ಕಾಡುವ ವಿಷಯ. ಬರಗಾಲ ಎಂದರೆ ಕಂಟ್ರಾಕ್ಟರುಗಳಿಗೆ, ಬಡ್ಡಿ ವ್ಯಾಪಾರಿಗಳಿಗೆ, ಟ್ಯಾಂಕರು ಮಾಫಿಯಾಗಳಿಗೆ, ಗ್ರಾಮೀಣ ಭೂಮಾಲಕರಿಗ, ರಾಜಕಾರಣಗಳಿಗೆ ಇಷ್ಟ.

ಬರಗಾಲ ಯಾವಾಗಲೂ ಪ್ರಾಕೃತಿಕ ಕಾರಣಗಳಿಂದಾಗಿ ಬರುವಂತಹದಲ್ಲ. ಬರಗಾಲ ಇಷ್ಟ ಇರುವಂಥಹವರು ಸೃಷ್ಟಿ ಮಾಡುವಂತಹದ್ದು. ಬರಗಾಲಕ್ಕೆ ಕಾರಣವಾಗುವ 'ಪ್ರಾಕೃತಿಕ ಕಾರಣ'ಗಳೂ ಹೆಚ್ಚಾಗಿ ಇವರ ಕೃತ್ಯಗಳ ಸೃಷ್ಟಿಯೇ. ಈ ಬಾರಿಯ ಬರ ರಾಜ್ಯದಲ್ಲಿ ಮುಂಗಾರು ಹಾಗೂ ಹಿಂಗಾರು ಮಳೆಯ ವೈಫಲ್ಯದಿಂದಾಗಿ ಬಂದಿದ್ದು. ರಾಜ್ಯದ ಒಟ್ಟು ಸಾಗುವಳಿ ಭೂಪ್ರದೇಶದ ಮುಂಗಾರಿನಲ್ಲಿ ಶೇ. 65ರಷ್ಟು ಮತ್ತು ಹಿಂಗಾರಿನಲ್ಲಿ ಶೇ 90 ರಷ್ಟು ಭೂ ಪ್ರದೇಶ ಬೆಳೆಯನ್ನು ಕಾಣಲಿಲ್ಲ ನಗರ ತಾಲೂಕುಗಳನ್ನು ಹೊರತು ಪಡಿಸಿದರೇ ಉಳಿದೆಲ್ಲಾ 137 ತಾಲೂಕುಗಳು ಬರ ಪೀಡಿತವೇ ಆಗಿವೆ. ಕುಡಿಯಲು, ದನ–ಕರುಗಳಿಗೆ ಮೇವಿಗೆ, ಬೇಸಾಯಕ್ಕೆ ನೀರಿನ ತೀವ್ರ ಅಭಾವವಿದೆ. ಇದು ಏಕಾಏಕಿ ಬಂದ ಸ್ಥಿತಿ ಏನಲ್ಲ. ಆದರೂ ಸರಕಾರ ಯಾವುದೇ ರೀತಿಯಲ್ಲಿ ಇದಕ್ಕಾಗಿ ಮುನ್ನೆಚ್ಚರಿಕೆ ವಹಿಸಿಲ್ಲ. ಈ ಸ್ಥಿತಿ ಬಂದ ಮೇಲೂ ಮುತುವರ್ಜಿಯಿಂದ ಬರ ಪರಿಹಾರ ಕ್ರಮಗಳನ್ನು ಕೈಗೊಂಡಿಲ್ಲ.

ಬದಲಾಗಿ ಬರ ಕಾಂಗ್ರೆಸ್–ಬಿಜೆಪಿಗಳ ರಾಜಕೀಯ ಮೇಲಾಟಕ್ಕೆ ಬಲಿ ಆಗಿದೆ. ಮುಖ್ಯಮಂತ್ರಿಗಳು ಕಾಂಗ್ರೆಸ್ ಕೇಂದ್ರ ಸರಕಾರದಿಂದ ಬರಬೇಕಾದ ಅನುದಾನ ಸಾಲದು ಎಂದು ಕೇಂದ್ರ ಸರಕಾರವನ್ನು ದೂರುತ್ತಾ ತಿರುಗುತ್ತಿದ್ದಾರೆ. ಈಗ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರುಗಳು ಬರ ಪೀಡಿತ ಪ್ರದೇಶಗಳ ಪ್ರವಾಸ ಕೈಗೊಂಡಿದ್ದು ಕೆಲವು ಕಡೆ ಅಧಿಕಾರಿಗಳ ಮೇಲೆ ಹರಿ ಹಾಯುವುದು, ಕೆಲವು ತೀವ್ರ ಕ್ರಮಗಳ ಗಿಮಿಕ್ ಮಾಡುವುದು, ಕಾಟಾಚರಕ್ಕೆ ಕೆಲವು ಗಂಟೆ ಭೇಟಿ ಕೊಟ್ಟು ಜನರ ಅಹವಾಲು ಕೇಳುವುದು, ಅಷ್ಟು ಕೋಟಿ ಇದಕ್ಕೆ ಇಷ್ಟು ಕೋಟಿ ಅದಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಹೇಳಿಕೆ ಕೊಡುವುದು ಬಿಟ್ಟರೆ ಗಂಭೀರ ತುರ್ತು ಕ್ರಮಗಳೂ ಇನ್ನೂ ಕಾಣುತ್ತಿಲ್ಲ. ಬಿಜೆಪಿ ನೂತನ ಅಧ್ಯಕ್ಷ ಯೆಡಿಯೂರಪ್ಪ ಸರಕಾರ ವಿಫಲವಾಗಿದೆ ಎಂದು ಅರಚುತ್ತಾ ತಿರುಗುತ್ತಿದ್ದಾರೆ. ಕೇಂದ್ರ ಸರಕಾರದಿಂದ ಹೆಚ್ಚಿನ ಅನುದಾನಕ್ಕೆ ಒತ್ತಡ ಹಾಕಿ ಸಕಾರಾತ್ಮಕ ಕೆಲಸ ಮಾಡಲು ತಯಾರಿಲ್ಲ.

ಪ್ರತಿ ಗ್ರಾಮಕ್ಕೂ ಕುಡಿಯುವ ನೀರಿನ ಸರಬರಾಜು, ರೇಗಾ ಮೂಲಕ ಕೆರೆಯಲ್ಲಿ ಹೂಳೆತ್ತುವ ವ್ಯಾಪಕ ಕಾಮಗಾರಿ, ಬೆಳೆ ಹಾನಿಗೆ ಪರಿಹಾರ ವಿತರಣೆಯಲ್ಲಿ ಮುತುವರ್ಜಿ ಅತ್ಯಂತ ತುರ್ತಾಗಿ ಆಗಬೇಕಾದ ಕೆಲಸ. ಕಳೆದ ಹತ್ತು ವರ್ಷಗಳಿಂದ ಜಾರಿಯಲ್ಲಿರುವ ಉದ್ಯೋಗ ಖಾತ್ರಿ ಕಾಯ್ದೆಯು ಸಮರ್ಪಕವಾಗಿ ಜಾರಿ ಮಾಡಿದ್ದರೆ ನೀರಿನ ಕೊರತೆಯನ್ನು ಕೊಂಚ ಮಟ್ಟಕ್ಕಾದರೂ ತಡೆಗಟ್ಟಬಹುದಾಗಿತ್ತು. ಜಲಸಂಬಂಧಿಯಾದ ಮತ್ತು ಗ್ರಾಮೀಣಾಭಿವೃದ್ಧಿಯ ಉದ್ದೇಶ ಹೊಂದಿರುವ ಈ ಕಾಯ್ದೆಯು ಯಾಕೆ ಪರಿಣಾಮಕಾರಿಯಾಗಿ ಮತ್ತು ಸಮರ್ಪಕವಾಗಿ ಜಾರಿ ಮಾಡಲಾಗುತ್ತಿಲ್ಲ ಎನ್ನುವುದಕ್ಕೆ ಸರಕಾರವು ಉತ್ತರ ಕಂಡುಕೊಳ್ಳುವ ಜರೂರಿ ಇದೆ. ಗ್ರಾಮೀಣ ಪ್ರದೇಶಗಳು ಹಲವು ಕೆರೆಗಳನ್ನು ಹೊಂದಿರುವ ಪ್ರದೇಶಗಳು. ಹಿಂದೆನೂ ಭೀಕರ ಬರ ಬಿದ್ದಾಗ ಜನರ ಕೈಗೆ ಉದ್ಯೋಗ ಕೊಡಲು ಕೆರೆಗಳ ಹೂಳೆತ್ತಿಸಲಾಗುತ್ತಿತ್ತು. ಅಂದಿಗೆ ಹೂಳೆತ್ತಿಸಿದ ಕೆರೆಗಳು ನಂತರದಲ್ಲಿ ಹೂಳು ತುಂಬಿಕೊಂಡು ನೀರಿಲ್ಲದಂತಾಗಿವೆ. ರೇಗಾ ಅಡಿಯಲ್ಲಿ ಇವುಗಳ ಹೂಳೆತ್ತಿಸಲು ಎಲ್ಲ ಅವಕಾಶಗಳು ಇದ್ದರೂ ಹೂಳೆತ್ತಿಸಲಾರದ್ದಕ್ಕೆ ಇಂದು ಕೆರೆಗಳು ನಾಪತ್ತೆಯಾಗಿವೆ. ನೀರು ಇಲ್ಲವಾಗಿದೆ. ಎರಡು ಎಕರೆಯಿಂದ 50 ಎಕರೆ ವ್ಯಾಪ್ತಿಯ ಕೆರೆಗಳು ಇವೆ. ಇವುಗಳ ಸರಿಯಾದ ನಿರ್ವಹಣೆ ಮತ್ತು ಅಂತರ್ಜಲ ಕಾಪಾಡುವ ದಿಕ್ಕಿನಲ್ಲಿ ಯಾವುದೇ ಯೋಜನೆಗಳಿಲ್ಲದೆ, ದೃಷ್ಟಿಕೋನವಿಲ್ಲದೆ ಇಂದು ನೀರಿಲ್ಲದ ಪರಿಸ್ಥಿತಿ ಉಂಟಾಗಿದೆ.

ಕೂಲಿ ಕಾರ್ಮಿಕರಿಗೆ ರೇಗಾ ಮೂಲಕ ಕೆಲಸ ಒದಗಿಸಿ ಗುಳೆ ಹೋಗುವುದನ್ನು ತಡೆಯುವ, ಅವರಿಗೆ ಉಚಿತ ರೇಶನ್ ಒದಗಿಸುವ ಕೆಲಸ ಯುದ್ಧದೋಪಾದಿಯಲ್ಲಿ ನಡೆಯಬೇಕು. ಮಾರ್ಚ್ 1ರ ನಂತರದಲ್ಲಿ ಕೇಂದ್ರ ಸರಕಾರವು ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ಕೂಲಿಯನ್ನು ನೇರವಾಗಿ ಪಾವತಿಸುತ್ತಿದ್ದು ಈಗಾಗಲೇ ರಾಜ್ಯದಲ್ಲಿ 46 ಕೋಟಿಯಷ್ಟು ಹಣ ಬಾಕಿಯಿದೆ. ಪ್ರತಿ ದಿನದಲ್ಲಿಕೇವಲ 2 ಕೋಟಿಯಂತೆ ಮಾತ್ರ ಬಿಡುಗಡೆ ಮಾಡಲಾಗುತ್ತಿದೆ. ಅದೂ ಕಳೆದ ಇಪ್ಪತ್ತನೆಯ ತಾರೀಕಿನಿಂದ ಮಾತ್ರ. ದಿನಕ್ಕೆ 2 ಕೋಟಿ ಅಂತಾದರೆ ಬಾಕಿ ಪಾವತಿಸುವುದೇ ಸರಿ ಸುಮಾರು ಒಂದು ತಿಂಗಳು ತೆಗೆದುಕೊಳ್ಳುವುದು. ಈ ಬಗ್ಗೆ ಕೇಂದ್ರ/ರಾಜ್ಯ ಸರಕಾರಗಳು ಕೂಡಲೇ ತಕ್ಕ ಕ್ರಮ ಕೈಗೊಳ್ಳಬೇಕು.

ಕಳೆದ 2–3 ವರ್ಷಗಳ ಬಿರು ಬೇಸಗೆ ಮತ್ತು ಬರಗಾಲದ ಪರಿಸ್ಥಿತಿ ಹವಾಮಾನ ಬದಲಾವಣೆಯ ವೈಪರೀತ್ಯಗಳ ಪರಿಣಾಮ ಎಂದೂ ಹೇಳಲಾಗಿದೆ. ಈ ಬಗೆಗೂ ದೂರಗಾಮಿ ಆಳವಾದ ಅಧ್ಯಯನಗಳೂ, ಅವುಗಳ ಆಧಾರದ ಮೇಲೆ ನೀರಿನ ಲಭ್ಯತೆಯ ಅಂದಾಜು ಬಳಕೆ ನಿರ್ವಹಣೆ, ಕೃಷಿ ಬೆಳೆಗಳಲ್ಲಿ ಸೂಕ್ತ ಬದಲಾವಣೆಯನ್ನೂ ಸರಕಾರ ಎತ್ತಿಕೊಳ್ಳಬೇಕಾಗಿದೆ. ಬರಗಾಲದ ಸ್ಥಿತಿಯನ್ನು ಸೃಷ್ಟಿಸುವ ಇನ್ನಷ್ಟು ಹದಗೆಡಿಸುವ ನವ–ಉದಾರವಾದಿ ನೀತಿಗಳ ಬದಲಾವಣೆ ಸಹ ಅಗತ್ಯ.



ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ

ಗಾರ್ಮೆಂಟ್ಸ್ ಕಾರ್ಮಿಕರ ವಿರುದ್ಧ ಮೊಕದ್ದಮೆ ಹಿಂತೆಗೆಯಿರಿ : ಸಿಐಟಿಯು

ಕೇಂದ್ರ ಸರ್ಕಾರ ಭವಿಷ್ಯನಿಧಿ ಕಾನೂನಿಗೆ ಅವೈಜ್ಞಾನಿಕ ತಿದ್ದುಪಡಿ ಮಾಡಿ ಹೊರಡಿಸಿದ ಅಧಿಸೂಚನೆಗೆ ಇತ್ತೀಚಿಗೆ ಬೆಂಗಳೂರಿನಲ್ಲಿ ವಿಶೇಷವಾಗಿ ಗಾರ್ಮೆಂಟ್ಸ್ ಕಾರ್ಮಿಕರು ಸ್ವಯಂ ಪ್ರೇರಿತವಾಗಿ ವ್ಯಕ್ತಪಡಿಸಿದ ತೀವ್ರ ಸ್ವರೂಪದ ಪ್ರತಿ–ರೋಧ ನಂತರ ಉಂಟಾದ ಅಹಿತಕರ ಘಟನೆಗಳ ಕುರಿತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿ ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಸಂಬಂಧ ಬಂಧಿಸಲಾಗಿರುವ ನೂರಾರು ಕಾರ್ಮಿಕರ ವಿರುದ್ಧ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂದು ಗೃಹ ಮಂತ್ರಿ ಡಾ. ಜಿ. ಪರಮೇಶ್ವರ್ ಅವರನ್ನು ಒತ್ತಾಯಿಸಿದೆ.

ಕೇಂದ್ರ ಕಾರ್ಮಿಕ ಸಂಘಟನೆಗಳು ಒಕ್ಕೂರಲಿನಿಂದ ಈ ಕಾರ್ಮಿಕ ವಿರೋಧಿ ತಿದ್ದುಪಡಿ ರದ್ದುಪಡಿಸಬೇಕೆಂದು ಆಗ್ರಹಿಸಿದ್ದರೂ ಕೇಂದ್ರ ಸರಕಾರ ತನ್ನ ಹಠಮಾರಿ ನೀತಿಯನ್ನು ಮುಂದುವರೆಸಿತ್ತು. ಕೇಂದ್ರ ಸರಕಾರದ ಈ ಕ್ರಮ ಸಹಜವಾಗಿಯೇ ಅತ್ಯಂತ ಕಡಿಮೆ ವೇತನ ಮತ್ತು ಯಾವೊದೇ ಸಾಮಾಜಿಕ ಭದ್ರತೆಯಿಲ್ಲದೆ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕನ್ನು ಧೃತಿಗೆಡಿಸಿತ್ತು. ಇದರಿಂದಾಗಿ ತಮ್ಮ ಶ್ರಮದ ಹಣ ಕೈ ತಪ್ಪಿ ಹೋಗುವ ಭಯವು ಕಾರ್ಮಿಕರನ್ನು ಇಂತಹ ತೀವ್ರ ತರಹದ ಹೋರಾಟಕ್ಕೆ ಧುಮುಕಲು ಪ್ರೇರಣೆ ನೀಡಿದೆ. ಅದರ ಪರಿಣಾಮವಾಗಿ ಇಡೀ ದೇಶದ ಗಮನ ಸೆಳೆಯುವಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಈ ಹೋರಾಟ ಸಫಲವಾಗಿದೆ.

ಆದರೆ ಕೇಂದ್ರ ಸರಕಾರದಂತೆ ರಾಜ್ಯ ಸರಕಾರವೂ ತನ್ನ ಹಿಡಿತದಲ್ಲಿರುವ ಪೊಲೀಸರನ್ನು ಬಳಸಿ ಅಮಾಯಕ ಕಾರ್ಮಿಕರನ್ನು ಲಾಠಿ ಬೂಟುಗಳಿಂದ ದಮನಿಸಲು ಪ್ರಯತ್ನಿಸಿದ್ದು ತೀವ್ರ ಖಂಡನಾರ್ಹ. ಎರಡು ದಿನಗಳ ಈ ಹೋರಾಟದಲ್ಲಿ ಕೆಲವು ಸಮಾಜಘಾತುಕ ಶಕ್ತಿಗಳು ಮಧ್ಯ ಪ್ರವೇಶಿಸಿ ಗಲಭೆಗಳನ್ನು ಸೃಷ್ಟಿಸಲು ಮತ್ತು ಸಾರ್ವಜನಿಕ ಸ್ವತ್ತುಗಳನ್ನು ನಾಶಪಡಿಸಿದ್ದಾರೆ. ಆದರೆ ಅಂತಹ ಶಕ್ತಿಗಳನ್ನು ಪತ್ತೆ ಮಾಡದ ಪೊಲೀಸರು ಇದ–ಕ್ಕೆ ಸಂಬಂಧವೇ ಇರದ ನೂರಾರು ಅಮಾಯಕ ಕಾರ್ಮಿಕರ ಮೇಲೆ ಬೆಂಗಳೂರು ನಗರದಲ್ಲಿ 42 ಮತ್ತು ಗ್ರಾಮೀಣ ಪ್ರದೇಶದಲ್ಲಿ 12 ಪ್ರಕರಣಗಳನ್ನು ದಾಖಲು ಮಾಡಿ ಬಂಧಿಸಿ ಜೈಲಿಗೆ ಕಳಿಸಲಾಗಿದೆ.

ಸಿಐಟಿಯು ನಾಯಕರ ನಿಯೋಗವು ಜೈಲಿನಲ್ಲಿ ಬಂಧಿಸಲ್ಪಟ್ಟಿರುವ ವಿವಿಧ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕೆಲವು ಕಾರ್ಮಿಕರನ್ನು ಭೇಟಿ ಮಾಡಿ ಮಾತನಾಡಿಸಿದೆ. ಏಪ್ರಿಲ್ 18 ಮತ್ತು 19 ರ ಹೋರಾಟ ನಂತರ ನೂರಾರು ಕಾರ್ಮಿಕರನ್ನು ಪೊಲೀಸರು ಬಂಧಿಸಿರುವುದರಿಂದ ಅವರ ಕುಟುಂಬಗಳು ತೀವ್ರ ಆತಂಕಕ್ಕೀಡಾಗಿವೆ. ವಿಶೇಷವಾಗಿ ಬೆಂಗಳೂರು ಮತ್ತು ಸುತಮುತ್ತಲಿನ ಗ್ರಾಮೀಣ ಪ್ರದೇಶದ ಈ ಕಾರ್ಮಿಕರ ಬಂಧನದಿಂದ ಅವರ ದಿನನಿತ್ಯದ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಪ್ರವೇಶಿಸಿ ಅಮಾಯಕ ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ಹೊಡಲಾದ ಎಲ್ಲಾ ಮೊಕದ್ದಮೆಗಳನ್ನು ಹಿಂಪಡೆಯಲು ಕ್ರಮವಹಿಸಬೇಕೆಂದು ಸಿಐಟಿಯು ರಾಜ್ಯ ಸಮಿತಿ ಗೃಹ ಮಂತ್ರಿ ಡಾ. ಜಿ. ಪರಮೇಶ್ ಅವರನ್ನು ಅವರನ್ನು ಒತ್ತಾಯಿಸಿದೆ.

ಬಂಧಿತ ಗಾರ್ಮೆಂಟ್ಸ್ ಕಾರ್ಮಿಕರಿಗೆ ಸಿಐಟಿಯು ನಿಂದ ಉಚಿತ ಕಾನೂನು ನೆರವು

ಸಿಐಟಿಯು ನಾಯಕರ ನಿಯೋಗವು ಜೈಲಿನಲ್ಲಿ ಬಂಧಿಸಲ್ಪಟ್ಟಿರುವ ವಿವಿಧ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಬಂಧಿತರಾಗಿರುವ ಕಾರ್ಮಿಕರು ಬಿಡುಗಡೆಯಾಗಲು ಅಗತ್ಯವಿರುವ ಕಾನೂನು ನೆರವನ್ನು ಅಖಿಲ ಭಾರತ ವಕೀಲರ ಸಂಘ(ಎಐಎಲ್‌ಯು) ಸಹಕಾರದಿಂದ ನೀಡಲು ತೀರ್ಮಾನಿಸಿದೆ. ಅಲ್ಲದೆ ಭವಿಷ್ಯದಲ್ಲೂ ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳಾದ, ಕನಿಷ್ಟವೇತನ, ಭವಿಷ್ಯನಿಧಿ, ವಿಮಾ ಸೌಲಭ್ಯ, ಗ್ರಾಚುಟಿ, ನಿವೃತ್ತಿ ಮೊದಲಾದ ಸಮಸ್ಯೆಗಳ ಕುರಿತಾಗಿಯೂ ಈ ನೆರವನ್ನು ಮುಂದುವರೆಸಲು ಸಿಐಟಿಯು ನಿರ್ಧರಿಸಿದೆ.

ಆದ್ದರಿಂದ ಏಪ್ರಿಲ್ 18 ಮತ್ತು 19 ರ ಹೋರಾಟದಲ್ಲಿ ಬಂಧಿತರಾಗಿರುವ ಕಾರ್ಮಿಕರು ಅಥವಾ ಅವರ ಕುಟುಂಬಗಳು ಕೆಳಕಂಡವ ಸಿಐಟಿಯು ನಾಯಕರನ್ನು ಸಂಪರ್ಕಿಸಿ ಉಚಿತ ವಕೀಲರ ಕಾನೂನು ನೆರವು ಪಡೆಯಬಹುದೆಂದು ಹೇಳಿಕೆಯೊಂದರಲ್ಲಿ ತಿಳಿಸಿದೆ:

ಸಂಪಂಗಿರಾಮನಗರದ ಸಿಐಟಿಯು ರಾಜ್ಯ ಸಮಿತಿ ಕಚೇರಿ, ಹೆಚ್.ಎನ್ ಗೋಪಾಲಗೌಡ, ಅಧ್ಯಕ್ಷರು (9880281281) ಟಿ. ಲೀಲಾವತಿ ಪ್ರಧಾನ ಕಾರ್ಯದರ್ಶಿ(9886522073) ಬೆಂಗಳೂರು ಜಿಲ್ಲಾ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್, ಎಸ್, ವರಲಕ್ಷ್ಮೀ(9448087189), ಮೀನಾಕ್ಷಿ ಸುಂದರಂ,(9448070267)

ಜನ ಬರದ ಬಾಣಲೆಯಲ್ಲಿ, ಕಾಂಗ್ರೆಸ್ ನಾಯಕರು ಅಧಿಕಾರದ ಖಯಾಲಿನಲ್ಲಿ!

ಎಸ್.ವೈ.ಗುರುಶಾಂತ್

'ರೋಮ್ ಹೊತ್ತಿ ಉರಿಯುತ್ತಿರುವಾಗ ನೀರೋ ಪಿಟೀಲು ಕುಯ್ಯುತ್ತಾ ಕುಳಿತಿದ್ದ' ಎಂಬ ಜನಪ್ರಿಯ ಮಾತಿಗೆ ಮತ್ತೇ ಸಮರ್ಥನೆಯನ್ನು ನೀಡುತ್ತಿದ್ದಾರೆ ರಾಜ್ಯದ ಕೆಲವು ಕಾಂಗ್ರೆಸ್ಸಿಗರು. ರಾಜ್ಯದ ಜನ ತೀವ್ರ ಬರ, ಬೇಸಿಗೆಯ ಬವಣೆಯಲ್ಲಿ ತತ್ತರಿಸುತ್ತಿರುವಾಗ ಪಕ್ಷದ ಆಂತರಿಕ ವೇದಿಕೆಗಳಲ್ಲಿ ಚರ್ಚಿಸಿ ನಿರ್ಧರಿಸಬೇಕಾದ ಸಂಗತಿಗಳನ್ನು ಸಾರ್ವಜನಿಕ ರಂಪಾಟ ಮಾಡುತ್ತಿರುವುದು ವಿಚಿತ್ರ. ಈಗಿನ ಕಾಂಗ್ರೆಸ್ ಸರಕಾರದಲ್ಲಿ ದಲಿತ ಮುಖ್ಯಮಂತ್ರಿ ಸ್ಥಾನ ಕುರಿತಂತೆ ಮತ್ತೇ ವಿಪರೀತ ಚರ್ಚೆಯಲ್ಲಿ ಕೆಲವರು ಮುಳುಗಿದ್ದಾರೆ. ಹಿಂದೆ 'ಸ್ಥಾನವೇ ಖಾಲಿ ಇಲ್ಲ, ಚರ್ಚೆ ಮತ್ತೇಕೆ' ಎಂದು ಪ್ರಶ್ನಿಸಿದ್ದ ಖರ್ಗೆಯವರಂಥ ಹಿರಿಯ ನಾಯಕರೇ ಈಗ 'ಅಯ್ಯೋ ಬಿಡ್ರಿ. ಅದು ಅನುಷ್ಠಾನಕ್ಕೆ ಬರ್ತಾನೆ ಇಲ್ಲ' ಎಂದು ಅಸಮಧಾನ ಹೊರ ಹಾಕುತ್ತಿದ್ದಾರೆ. ಅಂ–ದರೆ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಂಚಿಕೆಯ ಸುತ್ತ ಮತ್ತೇನೋ ನಡೆಯುತ್ತಿರುವ ಸೂಚನೆಗಳು ಸ್ಪಷ್ಟ!

ಮಂಕುಬೂದಿ ನಾಯಕರು

ಜಾತಿಗಳ ಸಮೀಕರಣವೇ ರಾಜಕಾರಣದ ಹೂರಣ ಎಂಬಂತಹ ಅಧಿಕಾರದ ಹಣಾಹಣಿಯ ತಂತ್ರವನ್ನೇ ಸಾಮಾಜಿಕ ನ್ಯಾಯದ ಸಿದ್ಧಾಂತವೆಂದು ಪ್ರತಿಪಾದಿಸುವ ಪಕ್ಷಗಳಲ್ಲಿ ವಿವಿಧ ಶೋಷಿತ ಸಮುದಾಯಗಳ ಆಶೋತ್ತರಗಳನ್ನೇ ಕೆಲವರಿಗೆ ಸ್ಥಾನ–ಮಾನ ಸಿಕ್ಕರೆ ಅದೇ ಸಮುದಾಯಕ್ಕೆ ಸಿಗುವ ನ್ಯಾಯವೆಂದು ಸಾಮಾಜಿಕ ಸಮಾನತೆಯ ಆಶಯವನ್ನೇ ತೆಳುಗೊಳಿಸಿ ಮಂಕುಬೂದಿ ಎರಚುತ್ತವೆ. ಅಷ್ಟಕ್ಕೆ ದಲಿತ ಸಿ.ಎಂ. ಪ್ರಶ್ನೆಯನ್ನು ಹಿಂದೆಯೇ ಕಾಂಗ್ರೆಸ್ ಇತ್ಯರ್ಥಗೊಳಿಸಬಹುದಿತ್ತು. ಅದನ್ನು ಯಾರಾದರೂ ತಡೆದಿದ್ದರೆ ಅದು ಕಾಂಗ್ರೆಸ್ಸಿಗರೇ.

ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಮೂರು ವರುಷಗಳನ್ನು ಮುಗಿಸಿದ ಆಚರಣೆಯ ಸಿದ್ಧತೆಯಲ್ಲಿದೆ. ಈ ಹೊಸ್ತಿಲಿನಲ್ಲಿಯೇ 'ದಲಿತ ಮುಖ್ಯಮಂತ್ರಿ' ಪ್ರಶ್ನೆ ಬಿರುಸಿನಿಂದ ಚರ್ಚಿತವಾಗುವುದಕ್ಕೆ ವಿಶೇಷ ಅರ್ಥವಿರಲೂ ಬಹುದು. ಈಗ ಈ ವಿಷಯದ ಸುತ್ತ ಇತರರೂ ಅಖಾಡಕ್ಕೆ ಇಳಿದಿದ್ದಾರೆ. ಒಂದು ಕಾಲದಲ್ಲಿ ಸಿದ್ಧರಾಮಯ್ಯನವರ ಸಮರ್ಥಕರಾಗಿದ್ದ ಮಾಜಿ ಸಚಿವ ಹೆಚ್.ವಿಶ್ವನಾಥ್ , ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ರವರು ಈ ಸುತ್ತಿನಲ್ಲಿ ದಲಿತ ಸಿ.ಎಂ. ಚರ್ಚೆಯನ್ನು ಗಟ್ಟಿ ಧ್ವನಿಯಲ್ಲಿ ಪ್ರತಿಪಾದಿಸುತ್ತಿದ್ದಾರೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ, ಇಲ್ಲವೇ ಗೃಹ ಸಚಿವ, ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾದ ಡಾ. ಜಿ.ಪರಮೇಶ್ವರ್ ಪರೋಕ್ಷ ಸೂಚಿತ ಅಭ್ಯರ್ಥಿಗಳು. ಇದರೊಟ್ಟಿಗೆ ಮಾಜಿ ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪನವರ ಹೆಸರೂ ಚಾಲ್ತಿಯಲ್ಲಿದೆ. ಸ್ಥಾನವೇ ಖಾಲಿ ಇಲ್ಲದಿರುವಾಗ ಸಿ.ಎಂ. ಆಯ್ಕೆಯೆಲ್ಲಿ? ಇದೆ ಅಂ–ದರೆ ಸಿದ್ಧರಾಮಯ್ಯನವರ ಪದಚ್ಯುತಿ! ಮೂರು ವರುಷವಾಯಿತಲ್ಲ ಜಾಗ ಖಾಲಿ ಮಾಡಿ ಎಂಬ ಒತ್ತಡ (ಒಪ್ಪಂದವಂತೆ!). ಇಂತಹ ಅತಂತ್ರ ಸ್ಥಿತಿಯ ಸೃಷ್ಟಿ ಎಂತಹ ಆಡಳಿತ ತಂದೀತು ಎಂಬ ಬಗ್ಗೆ ಯಾರಿಗೂ ಖಬರೇ ಇಲ್ಲವಲ್ಲ!

ತಂತ್ರ–ಪ್ರತಿ ತಂತ್ರಗಳ ಭರಾಟೆ

ಇದರ ಖಚಿತ ಸುಳಿವು ಇರುವುದರಿಂದಲೇ ಸಿದ್ಧು ಬಣವೂ ಪ್ರತಿ ತಂತ್ರ ಹೂಡುತ್ತಿದೆಯಂತೆ. ಸಿ.ಎಂ. ಪ್ರಶ್ನೆ ಅಷು ಸರಳವಲ್ಲವಾದರೂ ತಕ್ಷಣದಲ್ಲಿ ಪರಮೇಶ್ವರ್ ಸಚಿವರಾಗಿರುವುದರಿಂದ ಪ್ರದೇಶ ಕಾಂಗ್ರೆಸ್‌ಗೆ ಹೊಸ ಅಧ್ಯಕ್ಷರ ಆಯ್ಕೆ ಅನಿವಾರ್ಯ. ಈಗ ಆ ಸ್ಥಾನಕ್ಕೆ ದಲಿತರಾದ ಮುನಿಯಪ್ಪನವರನ್ನು ನೇಮಿಸಿದರೆ ದಲಿತ ಸಿ.ಎಂ. ಕೂಗು ಒಂದಷ್ಟು ಹಿಂದಕ್ಕೆ ಸರಿಸಬಹುದು ಎಂಬ ಲೆಕ್ಕಾಚಾರವೂ ಇದರಲ್ಲಿದೆಯಂತೆ. ಈಗಾಗಲೇ ಬಿಜೆಪಿ ಲಿಂಗಾಯತರನ್ನು ಓಲೈಸುವ ತಂತ್ರಕ್ಕೆ ಇಳಿದಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಅಧ್ಯಕ್ಷ ಸ್ಥಾನಕ್ಕೆ ಒಕ್ಕಲಿಗ ಅಥವಾ ಲಿಂಗಾಯತ ಜಾತಿಗಳ ನಡುವಿನಿಂದ ನೇಮಿಸುವ ಪ್ರಸ್ತಾಪಗಳೂ ಇವೆ. ಒಂದು ವೇಳೆ ಇದು ಜಾರಿಯಾದಲ್ಲಿ ಸಿದ್ಧು ಬದಲಾವಣೆ ಸುಲಭ! ಆಗ ದಲಿತ ಸಿ.ಎಂ.ಸುಲಭ ಎಂದೂ ಒಂದು ಬಣದಲ್ಲಿ ಲೆಕ್ಕವಿದೆಯಂತೆ.

ಅಧಿಕಾರದ ವ್ಯಸನ

ಇಂತಹ ಲೆಕ್ಕಾಚಾರಗಳಲ್ಲೇ ಕಾಂಗ್ರೆಸ್‌ನ ಹಿರಿಯ ನಾಯಕರೆಲ್ಲಾ ಮಗ್ನರಾಗಿ ಅಧಿಕಾರ ಗಿಟ್ಟಿಸುವ 'ಹೋರಾಟ'ದಲ್ಲಿ ಪೂರ್ಣ ಮಗ್ನರಾಗಿದ್ದಾರೆ. ಮೂರು ವರುಷ ಪೂರೈಸಿದ ಬಳಿಕ ಸಚಿವ ಸಂಪುಟ ಪುನರ್ ರಚನೆ ಮಾಡುವ ಸಿ.ಎಂ. ನಿರ್ಧಾರದಿಂದ (ಹೈಕಮಾಂಡ್ ಒಪ್ಪಿಗೆಯಿಂದ) ಸ್ಥಾನ ಕಳೆದುಕೊಳ್ಳುವ ಭೀತಿಯಲ್ಲಿರುವ ಕೆಲವರು ಅದನ್ನು ಉಳಿಸಿಕೊಳ್ಳಲು, ಕೆಲವರನ್ನು ಪದಚ್ಯುತಗೊಳಿಸಿ ತಮ್ಮನ್ನು ಸೇರಿಸಿಕೊಳ್ಳಲು 'ಲಗಾಟ' ಹಾಕುತ್ತಿದ್ದಾರೆ. ಖಾಲಿ ಮಾಡಿಸೋದು ಗ್ಯಾರಂಟಿ ಎನ್ನುವ ಕಂದಾಯ ಸಚಿವ ಶ್ರೀನಿವಾಸ್ ಪ್ರಸಾದ್ ರಂತಹ ಕೆಲ ಹಿರಿಯರು ಹತಾಶರಾಗಿ ಸಾರ್ವಜನಿಕವಾಗಿಯೇ ಸ್ಫೋಟಗೊಳ್ಳುತ್ತಿದ್ದಾರೆ. ಸಚಿವ ಆಂಜನೇಯರವರಿಗೆ ತಮ್ಮ ಖಾತೆಯನ್ನು ಸಮರ್ಥವಾಗಿ ನಡೆಸದೆ ಚಪಲ ರಾಜಕಾರಣದಲ್ಲೇ ಆಸಕ್ತಿ. ಹೀಗಾಗಿ ಹಿರಿಯ ಕಾಂಗ್ರೆಸ್ ನಾಯಕ ಜನಾರ್ಧನ ಪೂಜಾರಿಯವರಿಗೆ ಉಪದೇಶ ಮಾಡಿ ಬಹಿರಂಗವಾಗಿ ಮಂಗಳಾರತಿ ಎತ್ತಿಸಿಕೊಂಡದ್ದೂ ಆಯ್ತು! ಮುಖ್ಯಮಂತ್ರಿಗಳು ಬರದ ಅಧ್ಯಯನದ ಪ್ರವಾಸದಲ್ಲಿದ್ದು, ಪರಿಹಾರ ಕಾಮಗಾರಿ ಕೈಗೊಳ್ಳದ ಕೆಲ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಿರುವಾಗಲೇ ಮತ್ತೊಬ್ಬ ಹಿರಿಯ ಸಚಿವ ಹೆಚ್.ಕೆ.ಪಾಟೀಲ್ ರವರು ಬರ ಎಲ್ಲಿದೆ ಎಂದು ಪ್ರಶ್ನಿಸಿ ಅದರ ಮೀಮಾಂಸೆಗೆ ತೊಡಗುತ್ತಾ–ರೆ. ಬರವೇ ಇಲ್ಲ ಎನ್ನುವ ಗ್ರಾಮೀಣ ಅಭಿವೃದ್ಧಿ ಸಚಿವರನ್ನು ಕೆಲಸ ಯಾಕೆ ಮಾಡಿಲ್ಲ ಎಂಬ ಮಾತೇ ಇಲ್ಲವೆಂದಾಯ್ತು! ಮುಖ್ಯಮಂತ್ರಿಗಳು, ಸಚಿವರು ಹೋದಲ್ಲೆಲ್ಲಾ ಸರಕಾರ ತಮ್ಮ ನೆರವಿಗೆ ಬರದೇ ಇರುವ ನಿರ್ಲಕ್ಷತೆ ಮತ್ತು ಆಡಳಿತದ ವಿಫಲತೆ ಬಗ್ಗೆ ಗಮನ ಸೆಳೆದು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ, ಪ್ರತಿಭಟಿಸುತ್ತಿದ್ದಾರೆ. ಇಂತಹ ಗಂಭೀರ ಸಂದರ್ಭದ ಬಗ್ಗೆ ಸಚಿವರು, ಕಾಂಗ್ರೆಸ್‌ನ ನಾಯಕರು ತಲೆ ಕೆಡಿಸಿಕೊಳ್ಳದೇ ಅಧಿಕಾರದ ವ್ಯಸನದಲ್ಲೇ ಸುತ್ತುವುದು ಅತ್ಯಂತ ಬೇಜವಾಬ್ದಾರಿತನ.

ಬಲಿ ಕೊಡಲು ಸಿದ್ಧತೆ

ಬಹುತೇಕವಾಗಿ ಕಾಂಗ್ರೆಸ್ ಪಕ್ಷದ ಎಲ್ಲಾ ನಾಯಕರೂ ಜನ ತಮ್ಮನೇಕೆ ಆರಿಸಿದರು ಎಂದಾಗಲೀ, ಜನ ಇಟ್ಟ ನಂಬಿಕೆ ಮತ್ತು ಬಿಜೆಪಿಯನ್ನು ಸೋಲಿಸಿದ ರಾಜಕೀಯ ಸಂದೇಶದ ಮಹತ್ವವನ್ನಾಗಲೀ ನೆನಪೇ ಇಟ್ಟಿಲ್ಲ. ಕಾಂಗ್ರೆಸ್ ಪಕ್ಷದ ವೈಫಲ್ಯದಿಂದ ಹತಾಶರಾಗುತ್ತಿರುವ ಜನ ಸಮೂಹವನ್ನು ಸೆಳೆಯಲು ಮತ್ತು ಕಾಂಗ್ರೆಸ್‌ನೊಳಗಿನ ಕಿತ್ತಾಟ, ಒಡಕುಗಳನ್ನು ಬಳಸಲು ಬಿಜೆಪಿ–ಸಂಘಪರಿವಾರ ಆಕ್ರಮಣಕಾರಿಯಾಗಿ ಇಳಿದಿದೆ.

ಇವೆಲ್ಲದರ ಪರಿಣಾಮ ಈ ವಾರದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾಣೆಗಳಲ್ಲಿ ಕಾಂಗ್ರೆಸ್ ಅನೇಕ ಕಡೆ ಸೋತು, ಬಿಜೆಪಿ ಮೇಲುಗೈ ಸಾಧಿಸಿದೆ. ಬಿಜೆಪಿ 19ರಲ್ಲಿ ಸ್ಪಷ್ಟ ಬಹುಮತ ಪಡೆದಿದ್ದರೆ, ಕಾಂಗ್ರೆಸ್ 12 ಕ್ಕೆ ತಳ್ಳಲ್ಪಟ್ಟಿದೆ. ವಾರ್ಡ್‌ವಾರು ಸ್ಥಾನಗಳಲ್ಲಿಯೂ 415, 353 ಗಳಿಸಿವೆ. ಇದು ನಗರವಾಸಿಗಳ, ಮುಖ್ಯವಾಗಿ ಅಕ್ಷರಸ್ಥ ಮಧ್ಯಮ ವರ್ಗಗಳ ಜನ ಹೆಚ್ಚಿರುವ ಪ್ರದೇಶಗಳು. ಇದು ಒಂದು ಸ್ಪಷ್ಟ ಸಂದೇಶವನ್ನು ಎಲ್ಲಾ ಪಕ್ಷಗಳಿಗೂ ರವಾನಿಸಿದೆ. ಕಾಂಗ್ರೆಸ್ ಪಕ್ಷ ಇವಾವುಗಳ ಪರಿವೇ ಇಲ್ಲದೇ, ಇದ್ದರೂ ನಿರ್ಲಕ್ಷಿಸಿ (ಆ ಪಕ್ಷ ಅಧಿಕಾರಕ್ಕೆ ಬರುವುದಿದ್ದರೆ ಅಲ್ಲೂ ಜಾಗವಿರಲಿ ಎಂದೂ) ಬಣ ರಾಜಕಾರಣದ ಬಡಿದಾಟದಲ್ಲೇ ಮುಳುಗಿದೆ. ಅಂ–ದರೆ ಸರ್ವ ದ್ರೋಹಿ ಬಿಜೆಪಿಗೆ ಮತ್ತೆ ರಾಜ್ಯವನ್ನು ಬಲಿ ಕೊಡಲು ಕಾಂಗ್ರೆಸ್ ಹೊರಟಿದೆ.

ಎಚ್ಚರವಿರಲಿ

ಈ ಎಲ್ಲಾ ಬೆಳವಣಿಗೆಗಳಿಂದ ಕಾಂಗ್ರೆಸ್ ಪಕ್ಷ ಇನ್ನಾದರೂ ಎಚ್ಚೆತ್ತು ಕೊಳ್ಳಬೇಕು. ಜನರ ವಿಶ್ವಾಸಕ್ಕೆ ದ್ರೋಹ ಬಗೆಯದೇ ಜನರ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡಬೇಕು. ಜನಕ್ಕೆ ಬೇಕಿರುವುದು ಪರಿಹಾರ, ಬದುಕುವ ಹಕ್ಕು ಮತ್ತು ರಕ್ಷಣೆ. ಕಾಂಗ್ರೆಸ್ ಯಾರನ್ನಾದರೂ ಮುಖ್ಯಮಂತ್ರಿ, ಮಂತ್ರಿಗಳನ್ನಾಗಿ ಮಾಡಿಕೊಳ್ಳಲಿ, ಆದರೆ ಅದಕ್ಕಾಗಿ ಹೇಸಿಗೆ ತರುವ ರಾಜಕಾರಣಕ್ಕೆ ತಡೆ ಹಾಕಲಿ. ಇಲ್ಲವಾದಲ್ಲಿ ತಕ್ಕ ಶಾಸ್ತಿ ಇದ್ದೇ ಇದೆ.

●

ಇ.ಪಿ.ಎಫ್. ಪಿಂಚಣಿದಾರರ ಪಾರ್ಲಿಮೆಂಟ್ ಚಲೋ.

ಇ.ಪಿ.ಎಫ್ ಪಿಂಚಣಿದಾರರಿಗೆ ಮಾಸಿಕ ರೂ 6500 ಕನಿಷ್ಠ ಪಿಂಚಣಿ ನಿಗಧಿಗೊಳಿಸಬೇಕು, ಬೆಲೆ ಏರಿಕೆಗೆ ಸೂಚ್ಯಕ್ಕೆ ಅನುಗುಣವಾಗಿ ತುಟಿಭತ್ಯೆಯನ್ನು ಜಾರಿಗೊಳಿಸಬೆಕು. ಕಮ್ಯುಟೇಶನ್ ಪಿಂಚಣಿಯ 100 ತಿಂಗಳು ಕಡಿತದದ ನಂತರ ಪೂರ್ಣ ಪಿಂಚಣಿಯನ್ನು ನೀಡಬೇಕು. ಪಿಂಚಣಿದಾರರ ಕುಟುಂಬಗಳ ಆರೋಗ್ಯ ವೆಚ್ಚವನ್ನು ಸರ್ಕಾರವೆ ಭರಿಸಬೇಕು. ಎಲ್ಲಾ ಪಿಂಚಣಿದಾರರನ್ನು ಆಹಾರ ಭದ್ರತೆ ಕಾಯ್ದೆ ಅಡಿಯಲ್ಲಿ ಒಳಗೊಂಡು ಸೌಲಭ್ಯ ನೀಡಬೇಕು – ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ಅಖಿಲ ಭಾರತ ಇ.ಪಿ.ಎಫ್. ಪಿಂಚಣಿದಾರರ ಸಮನ್ವಯ ಸಮಿತಿ ಏಪ್ರಿಲ್ 26 ರಿಂದ 29ರ ತನಕ ನವದೆಹಲಿಯ ಜಂತರ್ ಮಂತರ್ ನಲ್ಲಿ ನೆಡೆಸಲಿರುವ ಹೋರಾಟವನ್ನು ಕರ್ನಾಟಕ ರಾಜ್ಯ ಇ.ಪಿ.ಎಫ್. ಪಿಂಚಣಿದಾರರ ಸಂಘ ಬೆಂಬಲಿಸಿದೆ

ಕೇಂದ್ರ ಸರ್ಕಾರ ಅಡಂಬರದ ಪ್ರಚಾರದೊಂದಿಗೆ ಜಾರಿಮಾಡಿದ ಕನಿಷ್ಟ 1000 ಪಿಂಚಣಿ ಲಕ್ಷಗಟ್ಟಲೆ ಪಿಂಚಣಿದಾರರಿಗೆ ಸಿಗದೆ ಇರುವುದನ್ನು ಕೇಂದ್ರ ಸರ್ಕಾರ ಗಮನಿಸಿ ಎಲ್ಲಾರಿಗೂ 1000 ರೂ. ಕನಿಷ್ಠ ಮಾಸಿಕ ನೀಡುವಂತೆ ಸಂಘ ಒತ್ತಾಯಿಸಿದೆ.

ಇ.ಪಿ.ಎಸ್.–1995 ಅಡಿಯಲ್ಲಿ ನಿಗದಿಗೋಳಿಸಿರುವ ಪಿಂಚಣಿ ಒಮ್ಮೆ ಮಾತ್ರ ಹೆಚ್ಚಳವಾಗಿದೆ, ಅದರೆ ಬೆಲೆಗಳು ವಿಪರಿತ ಏರಿಕೆಯನ್ನು ಕಂಡಿದೆ. ಹಾಗಾಗಿ ಪಿಂಚಣಿಯನ್ನು ತುಟಿಭತ್ಯೆಗೆ ಜೋಡಿಸುವುದು ಅಗತ್ಯವೆಂದು ಸಂಘವು ಅಭಿಪ್ರಾಯ ಪಟ್ಟಿದೆ. ಸಮನ್ವಯ ಸಮಿತಿಯು ಹಲವು ಬಾರಿ ಸಂಬಂಧಿಸಿದ ಕಾರ್ಮಿಕ ಸಚಿವರಿಗೆ ಮನವಿ ಅರ್ಪಿಸಿದರೂ, ಕೇಂದ್ರ ಸರ್ಕಾರ ಗಮನ ಹರಿಸದ ಕಾರಣ ಈ ಹೋರಾಟ ಅನಿವಾರ್ಯ ವಾಗಿದೆ ಎಂದು ಸಂಘ ತಿಳಿಸಿದೆ.

ಪಿ.ಎಫ್. ಹಣ ದೋಚಲು ಮೋದಿ ಸರ್ಕಾರದ ಹುನ್ನಾರ :

– ಎನ್.ಕೆ.ಸುಬ್ರಮಣ್ಯ

ಕಾರ್ಮಿಕರು ಬೇವರು ಸುರಿಸಿ ದುಡಿದ ಹಣವನ್ನು ದೊಡ್ಡ ದೊಡ್ಡ ಬಂಡವಳಗಾರರೂ ಕೊಳ್ಳೆ ಹೊಡೆಯಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಮುಂದಾಗಿರುವುದನ್ನು ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್ ಬಲವಾಗಿ ಖಂಡಿಸಿದರು. ಅವರು ಕಾರ್ಮಿಕರ ಭವಿಷ್ಯ ನಿಧಿಯ ಬಡ್ಡಿ ಕಡಿತವನ್ನು ಖಂಡಿಸಿ ಕಾರ್ಮಿಕರ ಸಂಘಟನೆಗಳ ಜಂಟಿ ಕ್ರೀಯಾ ಸಮಿತಿ ತುಮಕೂರಿನ ಕಾರ್ಮಿಕ ಭವಿಷ್ಯ ನಿಧಿ ಕಛೇರಿ ಎದುರು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿ ಮಾತನಾಡುತ್ತಿದ್ದರು ಕಾರ್ಮಿಕರ ರಕ್ತ ಬೆವರಿನ ಗಳಿಕೆಯ ಬಗ್ಗೆ ತ್ರಿಪಕ್ಷಿಯ ಸಮಿತಿಯಾದ ಸೆಂಟ್ರಲ್ ಬೋರ್ಡ್ ಆಫ್ ಟ್ರಸ್ಟಿಸ್‌ನ (ಸಿ.ಬಿ.ಟಿ) ಸರ್ವನುಮತದ ತೀರ್ಮನಕ್ಕೆ ವಿರುದ್ದವಾಗಿ ಏಕಪಕ್ಷಿಯಾವಾಗಿ ಬಡ್ಡಿ ದರ ಇಳಿಸುವ ಹಾಗೂ ಇತರೆ ತೀರ್ಮಾನಗಳನ್ನು ಜಾರಿಮಾಡುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ಕಟುವಾಗಿ ಟೀಕಿಸಿದರು.

ಕೇಂದ್ರದ ಬಿಜೆಪಿ ಸರ್ಕಾರ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿ ಮಾಡುವ ಮೂಲಕ ಕಾರ್ಮಿಕರ ವಿರೋಧಿಯಾದ ನೀತಿಯನ್ನು ನರೇಂದ್ರ ಮೋದಿ ಸರ್ಕಾರ ಜಾರಿ ಮಾಡುತ್ತಿದ್ದು ಇದರ ವಿರುದ್ದ ಸ್ಪಟೆಂಬರ್ ತಿಂಗಳಿನಲ್ಲಿ ಅಖಿಲ ಭಾರತ ಮುಷ್ಕರ ನಡೆಸುವುದಾಗಿ ತಿಳಿಸಿದರು.

ಎಐಟಿಯುಸಿಸಿಯ ನರಸಿಂಹರಾಜು, ಸಿಐಟಿಯುನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ ಸಹ ಮಾತನಾಡಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಆರ್. ರೇವಣ್ಣ, ಎಐಟಿಯುಸಿಯ ಕಂಬೇಗೌಡ, ಅಶ್ವಥ್‌ನಾರಾಯಣ, ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯುನ ಜೂನಿ, ರಾಮಕೃಷ್ಣಪ್ಪ, ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ, ಶಹತಾಜ್, ಪಿಂಚಣಿದಾರರ ಸಂಘದ ಜಯಮ್ಮ, ಡಿ.ವೈ.ಎಫ್.ಐ ರಾಘವೇಂದ್ರ, ದರ್ಶನ್, ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಕಾರ್ಮಿಕ ಸಚಿವರುಗಳಿಗೆ ಸ್ಥಳೀಯ ಭವಿಷ್ಯನಿಧಿ ಆಯುಕ್ತರ ಮೂಲಕ ಮನವಿಪತ್ರ ಸಲ್ಲಿಸಲಾಯಿತು.







'ಕುಣಬಿ ಬುಡಕಟ್ಟು ಎಂದು ಮಾನ್ಯ ಮಾಡಿ' : ಜಿತೇಂದ್ರ ಚೌಧರಿ

ಯಮುನಾ ಗಾಂವ್ಕರ್

ಸಂವಿಧಾನಬದ್ಧ ಬುಡಕಟ್ಟು ಮಾನ್ಯತೆ ಸಿಗದೆ ಇಂದಿಗೂ ಕಾಡುವಾಸಿಗಳಾಗಿ, ಮೂಲಸೌಕರ್ಯ ವಂಚಿತರಾದ ಕುಣಬಿ ಸಮುದಾಯದ ರಾಷ್ಟ್ರ ಮಟ್ಟದ ಸಮಾವೇಶವು ಹೊನ್ನಾವರದ ಬಂಗಾರಮಕ್ಕಿಯಲ್ಲಿ ನಡೆಯಿತು. ಕರ್ನಾಟಕ ರಾಜ್ಯ ಕುಣಬಿ ಅಭಿವೃದ್ಧಿ ಮಹಾಮಂಡಳ ಆಯೋಜಿಸಿದ ಈ ಕುಣಬಿ ಅಖಿಲಭಾರತ ಸಮ್ಮೇಳನವನ್ನು ಉದ್ಘಾಟಿಸಿದವರು ತ್ರಿಪುರಾ ರಾಜ್ಯದ ಸಂಸದರು, ಮಾಜಿ ಸಚಿವರೂ, ಸಿಪಿಐ(ಎಂ) ಮುಖಂಡರಾದ ಜಿತೇಂದ್ರ ಚೌಧರಿಯವರು.

ಚೌಧರಿ ಅವರು ಮಾತನಾಡುತ್ತಾ "ಕುಣಬಿ ಜನಸಮುದಾಯ ದೇಶದ ವಿವಿಧೆಡೆ ವಿವಿಧ ರಾಜ್ಯಗಳಲ್ಲಿ ಹಂಚಿ ಹೋಗಿದ್ದು, ಅವರನ್ನು ಒಗ್ಗೂಡಿಸಲು ಅವರ ಸಂಸ್ಕೃತಿ ಎತ್ತರಿಸಲು ಹಾಗೂ ಏಳ್ಗೆಗಾಗಿ ಈ ಸ್ಪಂದನಶೀಲ ಜನಾಂಗದ ಅಭಿವೃದ್ಧಿಗೆ ದುಡಿಯಲು ತಾವು ದೇಶಪ್ರೇಮಿ ಭಾರತವಾಸಿಗಳಾಗಿ ಆದಿವಾಸಿಗಳ ಹಕ್ಕು ಸ್ಥಾಪಿಸಲು ಮುಂದಾಗುತ್ತಿರುವುದಕ್ಕೆ ಅಭಿನಂದನೆಗಳು. ಸಂವಿಧಾನ ರಚಿಸಿದ ಡಾ. ಬಿ.ಆರ್.ಅಂಬೇಡ್ಕರ್ ರವರ 125ನೇ ಜಯಂತಿಯ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದೇನೆಂದರೆ, ಸ್ಥಳೀಯವಾಗಿ ಈ ಸಮಾಜದಲ್ಲಿ ಹಿಂದುಳಿದವರನ್ನು ಅವಕಾಶ ವಂಚಿತರನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡವಾಗಿ ಪರಿಗಣಿಸಲು ಅಂಥವರ ಅಭಿವೃದ್ಧಿಗೆ ಕೆಲವು ನಿಶ್ಚಿತ ಅವಕಾಶಗಳನ್ನು ಸಂವಿಧಾನದಲ್ಲಿ ಹೇಳಿದ್ದರು. ಆದರೆ ದೇಶದ ವಿವಿಧೆಡೆ ಹಬ್ಬಿಕೊಂಡಿರುವ ಈ ಕುಣಬಿ ಸಮುದಾಯದಂತೆ ಬಹಳಷ್ಟು ಸಮುದಾಯಗಳು ಮಾನವಶಾಸ್ತ್ರೀಯ ಅಧ್ಯಯನದ ಪ್ರಕಾರ ಈಗಲೂ ತಮ್ಮನ್ನು ಬುಡಕಟ್ಟೆಂದು ಪರಿಗಣಿಸಲು ಸಂವಿಧಾನ ಬದ್ಧ ಸೌಲಭ್ಯಗಳು ಸಿಗಬೇಕೆಂದು ಒತ್ತಾಯಿಸುತ್ತಿದ್ದರೂ ಸಂಬಂಧಪಟ್ಟ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇಂಥ ಕಾನೂನುಬದ್ಧ ಬೇಡಿಕೆಗಳನ್ನು ಈಡೇರಿಸದಿರುವುದು ವಿಷಾದನೀಯ ಎಂದರು.

ಕುಣಬಿ ಸಮುದಾಯ ಎಲ್ಲಾ ಹಕ್ಕಿನಿಂದ ವಂಚಿಸಲ್ಪಟ್ಟಿದೆ. ಮಾತ್ರವಲ್ಲ ಬುಡಕಟ್ಟು ಎಂದು ಘೋಷಿತವಾದ ಪ್ರಮಾಣಪತ್ರವಿಲ್ಲ ಎಂಬ ಕಾರಣ ಮುಂದಿಟ್ಟು ಕರ್ನಾಟಕ ಮತ್ತು ಇತರೇ ರಾಜ್ಯಗಳಲ್ಲಿ 2006ರ ಬುಡಕಟ್ಟು ಮತ್ತು ಇತರೇ ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆ ನೆಪದಲ್ಲಿ ಅರಣ್ಯವಾಸಿ ಜನತೆಯನ್ನು ಭೂಮಿ ಹಕ್ಕಿನಿಂದ ವಂಚಿಸಲಾಗುತ್ತಿದೆ. ಆದ್ದರಿಂದ ಇದೊಂದು ಎಲ್ಲಾ ಆದಿವಾಸಿ ಹಕ್ಕಿನ ಮೇಲಿನ ದಾಳಿಯಾಗಿದೆ. ನಮ್ಮ ಇಡೀ ಜಗತ್ತು ಪರಿಸರ ಸಂಬಂಧೀ ವಿಚಾರದಲ್ಲಿ ಪ್ರಜ್ಞಾಪೂರ್ವಕವಾಗಿದೆ. ನಮ್ಮ ವಾತಾವರಣ, ಪರಿಸರ ಇದನ್ನು ರಕ್ಷಿಸಬೇಕು, ನಿಜ. ಆದರೆ ಯಾರು ಪರಿಸರ ರಕ್ಷಣೆ ಮಾಡುತ್ತಿದ್ದಾರೆ ಎಂಬುದು ಪಶ್ಚಿಮಘಟ್ಟದಲ್ಲಿ ವಾಸಿಸುವವರಿಗೆ ಗೊತ್ತಿದೆ. ಅದು ಬೇರೆಯಾರೂ ಅಲ್ಲ ಆದಿವಾಸಿಗಳೇ ಅರಣ್ಯ ರಕ್ಷಿಸಿರುವುದು. ಭಾರತದಲ್ಲಿ 600 ಜಿಲ್ಲೆಗಳಿವೆ. ಇಂಥ ಒಂದು ಸಸ್ಯವರ್ಗ ಮತ್ತು ವನ್ಯಸಂಪತ್ತು ಮತ್ತು ಪ್ರಾಣಿಸಂಕುಲಗಳು ಕೇವಲ 170 ಜಿಲ್ಲೆಗಳಲ್ಲಿ ಮಾತ್ರ ಇದೆ. ಇದಕ್ಕೆ ಕಾರಣ ಆದಿವಾಸಿಗಳು ಈ ಪರಿಸರ ವ್ಯವಸ್ಥೆಯನ್ನು ಕಾಯ್ದುಕೊಂಡು ಬಂದಿದ್ದು. ಆದರೆ ಸರ್ಕಾರ ಇಂಥ ಪಾರಿಸರಿಕ ಸಂಬಂಧ ಕಾಯುವಲ್ಲಿ ಮತ್ತು ಅರಣ್ಯ ರಕ್ಷಕರನ್ನು ಗುರ್ತಿಸುವಲ್ಲಿ ವಿಫಲವಾಗಿದೆ. ಅರಣ್ಯ ವಾಸಿ ಆದಿವಾಸಿಗಳನ್ನು ಗುರ್ತಿಸುವದು ಈ ಸಮಾಜದ ಮತ್ತು ಸರ್ಕಾರದ ಕರ್ತವ್ಯವಾಗಿದೆ. ಅವರು ದೈನಂದಿನ ಜೀವನದಲ್ಲಿ ಹೇಗೆ ಬದುಕುತ್ತಿದ್ದಾರೆ ಮತ್ತು ಯಾವೆಲ್ಲ ಯೋಜನೆಗಳ ಮೂಲಕ ಅವರನ್ನು ಬೆಂಬಲಿಸಬಹುದು ಎಂದು ನೋಡಬೇಕಾಗುತ್ತದೆ. ಆ ವಿಚಾರದಲ್ಲಿ ಸರ್ಕಾರ ಆದಿವಾಸಿ ಕುಣಬಿಗರ ಬೇಡಿಕೆ ವಿರುದ್ಧ ಹೋಗುತ್ತಿದೆ. ಅರಣ್ಯ ಉಪಉತ್ಪನ್ನಗಳ ಬಳಕೆಗೆ ತಡೆ ಒಡ್ಡುವುದರಿಂದ ಜೀವನ ಹೇಗೆ ನಡೆಸಬೇಕು? ಉಪ ಜೀವನಕ್ಕೆ ಮಾರಕವಾದ ಸರ್ಕಾರದ ನಿಲುಮೆಯಿಂದ ಬುಡಕಟ್ಟು ಜನತೆಗೆ ಅನ್ಯಾಯವಾಗಿದೆ ಎಂದು ಚೌಧರಿಯವರು ಹೇಳಿದರು.

"ನಾನೋರ್ವ ಆದಿವಾಸಿ ಮಂಚ್‌ನ ಕಾರ್ಯಕರ್ತನಾಗಿ ಮತ್ತು ಸಂಸತ್ ಸದಸ್ಯನಾಗಿ ಕುಣಬಿ ಸಮಾಜದ ನೇತೃತ್ವದಲ್ಲಿ ಬರುವ ನಿಯೋಗಕ್ಕೆ ಕೇಂದ್ರ ಬುಡಕಟ್ಟು ಮಂತ್ರಿ ಜೋಯಲ್ ಓರಾನ್ ರನ್ನು ಭೇಟಿ ಮಾಡಿಸಿ ಕುಣಬಿ ಬುಡಕಟ್ಟು ಸೇರ್ಪಡೆ ಬೇಡಿಕೆ ಕುರಿತಂತೆ ಪುನರಾವಲೋಕನ ಮಾಡಲು ಸಕಾರಾತ್ಮಕ ನಿರ್ಣಯ ತೆಗೆದುಕೊಳ್ಳಲು ಒತ್ತಾಯಿಸುವೆ. ಪಾರ್ಲಿಮೆಂಟಿನಲ್ಲೂ ಈ ವಿಚಾರವನ್ನು ಗಮನಕ್ಕೆ ತರುವೆ. ನೀವು ಕೇಂದ್ರ ಮತ್ತು ರಾಜ್ಯ ಸರ್ಕಾರದ ಎದುರು ನಡೆಸುವ ಹೋರಾಟದಲ್ಲಿ ಕೂಡ ನಾನು ಭಾಗಿಯಾಗುವೆ" ಎಂದು ಜಿತೇಂದ್ರ ಚೌಧರಿಯವರು ಸ್ಪಷ್ಟ ಭರವಸೆ ನೀಡಿದರು. ಕುಣಬಿ ಸಮಾಜ ಅಭಿವೃದ್ಧಿ ಮಂಡಳದ ರಾಜ್ಯ ಅಧ್ಯಕ್ಷರಾದ ಮಂಜಪ್ಪ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಮಾತನಾಡಿದ ಕೇರಳದ ನಿವೃತ್ತ ನ್ಯಾಯಾಧೀಶ ಕೆಕೆ ಉತ್ತರನ್, ಆದಿವಾಸಿ ಹಕ್ಕುಗಳ ಸಮಿತಿಯ ರಾಜ್ಯ ಸಹಸಂಚಾಲಕರಾದ ಎಸ್.ವೈ ಗುರುಶಾಂತ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್, ಶಿವಮೊಗ್ಗದ ಜಿಪಂ ಸದಸ್ಯ ಕಲಗೋಡು ರತ್ನಾಕರ, ಮಾಜಿ ಶಾಸಕ ಸುನಿಲ್ ಹೆಗಡೆ ಮುಂತಾದವರು ಕುಣಬಿ ಬುಡಕಟ್ಟು ಮಾನ್ಯತೆಗೆ ನಡೆಯುವ ಹೋರಾಟ ಬೆಂಬಲಿಸಿ ಮಾತನಾಡಿದರು. ಸಂಸ್ಕೃತಿ ಮೇಳದ ಸಂಚಾಲಕ ಸಿದ್ದು ಯಾಪಲಪರ್ವಿ, ಪ್ರಾಸ್ತಾವಿಕವಾಗಿ ಸುಭಾಸ್ ಗಾವಡಾ ಮಾತನಾಡಿದರು. ದೇವೇಂದ್ರ ಸ್ವಾಗತಿಸಿದರು. ಕಾವ್ಯ ಗಾಳ್ಕರ್ ವಂದಿಸಿದರು. ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳ ರಾಜ್ಯಗಳ ಪ್ರತಿನಿಧಿಗಳು ಆಗಮಿಸಿದ್ದರು. ಸಮಾವೇಶದ ಪ್ರತಿನಿಧಿ ಸಭೆಯಲ್ಲಿ ಪ್ರಾಂತ ರೈತ ಸಂಘದ ಶಾಂತಾರಾಮ ನಾಯಕ, ಸಿಐಟಿಯುನ ತಿಲಕ ಗೌಡ, ಆದಿವಾಸಿ ಹಕ್ಕುಗಳ ಸಮಿತಿ ಉಕ ಸಂಚಾಲಕ ಪ್ರೇಮಾನಂದ ವೆಳಿಪ್, ದಯಾನಂದ ಗಾವಡಾ, ರಾಜೇಶ ಗಾವಡಾ ಮುಂತಾದವರು ಇದ್ದರು.

ಕೋಲಾರದ ಮಣಿಯನಹಳ್ಳಿಯಲ್ಲಿ ದಲಿತ ಯುವಕನ ಮನೆ ಧ್ವಂಸ, ಪ್ರಾಣ ಬೆದರಿಕೆ

– ಎಂ. ವಿಜಯಕೃಷ್ಣ, ಕೋಲಾರ



ಸುಮಾರು 50 ಮಂದಿ ದಲಿತ ಯುವಕನ ಮನೆಗೆ ನುಗ್ಗಿ ಅಪಾರ ಪ್ರಮಾಣದ ಆಸ್ತಿ ನಷ್ಟ ಮಾಡಿದ್ದಲ್ಲದೇ ಪ್ರಾಣ ಬೆದರಿಕೆ ಹಾಕಿ ಹಲ್ಲೆ ನಡೆಸಿರುವ ಘಟನೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಮಣಿಯನಹಳ್ಳಿ ಗ್ರಾಮದಲ್ಲಿ ನಡೆದಿದೆ. ಪರಸ್ಪರ ಪ್ರೀತಿಸುತ್ತಿದ್ದ ದಲಿತ ಯುವಕ ಮತ್ತು ಸವರ್ಣೀಯ ಜನಾಂಗದ ಯುವತಿಯ ಮದುವೆಗೆ ಯುವತಿಯ ಮನೆಯವರು ಒಪ್ಪುವುದಿಲ್ಲವೆಂದು ತಿಳಿದು ಇವರಿಬ್ಬರು ಪರಾರಿಯಾಗಿದ್ದರಿಂದ ಆಕ್ರೋಶಗೊಂಡ ಯುವತಿಯ ಕುಟುಂಬದ ಕಡೆಯವರು ಈ ದೌರ್ಜನ್ಯ ನಡೆಸಿದ್ದಾರೆ.

ಮಣಿಯನಹಳ್ಳಿ ಗ್ರಾಮದ ಆಟೋ ಚಾಲಕ ಗಂಗಾಧರ ಎಂಬ ದಲಿತ ಯುವಕ ಮತ್ತು ಇದೇ ಗ್ರಾಮದ ಸವರ್ಣೀಯ ಜಾತಿಗೆ ಸೇರಿದ ಪ್ರಸ್ತುತ ಬೆಂಗಳೂರಿನಲ್ಲಿ ಬಿಇ ವ್ಯಾಸಂಗ ಮಾಡುತ್ತಿರುವ ದೀಪ ಎಂಬ ಯುವತಿ ಸುಮಾರು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಯುವತಿಯ ಮನೆಯವರು ಈ ಮದುವೆಗೆ ಒಪ್ಪುವುದಿಲ್ಲವೆಂದು ತಿಳಿದು ಏಪ್ರಿಲ್ 18 ರಂದು ಇಬ್ಬರು ಪರಾರಿಯಾಗಿದ್ದರು. ಈ ವಿಷಯ ಯುವತಿಯ ತಂದೆ ರಘುನಾಥರೆಡ್ಡಿ ಮತ್ತು ಸಹಚರರು ಸುಮಾರು 50 ಮಂದಿ ಗಂಗಾಧರರವರ ಮನೆಗೆ ನುಗ್ಗಿ ಮನೆಯಲ್ಲಿದ್ದ ಟಿ.ವಿ., ಬೀರು, ಪಾತ್ರೆ ಸಾಮಾನುಗಳು ಸೇರಿದಂತೆ ಸಾಮಾನುಗಳನ್ನು ಧ್ವಂಸ ಮಾಡಿದ್ದಾರೆ. ಹೊಸದಾಗಿ ನಿರ್ಮಾಣ ಮಾಡುತ್ತಿದ್ದ ಮನೆಯ ಎರಡು ಗೋಡೆಗಳನ್ನು ಗಢಾರಿಯಿಂದ ಬೀಳಿಸಿದ್ದಾರೆ. ಜೀವನಕ್ಕೆ ಆಧಾರವಾಗಿದ್ದ ಎರಡು ಆಟೋಗಳನ್ನು ಸಂಪೂರ್ಣವಾಗಿ ಜಖಂಗೊಳಿಸಿ ಬೆಂಕಿ ಹಚ್ಚಿದ್ದಾರೆ. ಅಲ್ಲದೇ ಕುರಿಗಳ ದೊಡ್ಡಿಗೆ ನುಗ್ಗಿ 8 ಕುರಿಗಳನ್ನು ಅಪಹರಿಸಿದ್ದಾರೆ. ಈ ಸಂದರ್ಭದಲ್ಲಿ ಮನೆಯಲ್ಲಿದ್ದ ಯುವಕ ಗಂಗಾಧರನ ತಾಯಿ ಲಕ್ಷ್ಮಮ್ಮ ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಪ್ರಾಣ ಬೆದರಿಕೆ ಹಾಕಿದ್ದಾರೆ.

ಯುವಕ ಮತ್ತು ಯುವತಿ ಇರುವ ಸ್ಥಳವನ್ನು ತೋರಿಸುವಂತೆ ದಲಿತ ಯುವಕ ಗಂಗಾಧರ್‌ರವರ ತಂದೆ ವೆಂಕಟರಾಮಪ್ಪ, ಸಹೋದರ ಮಂಜುನಾಥ್‌ರನ್ನು ರಘುನಾಥರೆಡ್ಡಿರವರ ಕಡೆಯವರು ಕಾರಿನಲ್ಲಿ ತಿರುಪತಿ ಕಡೆಗೆ ಕರೆದು–ಕೊಂಡು ಹೋಗಿದ್ದರು. ತಿರುಪತಿಯಲ್ಲಿ ಈ ಜೋಡಿ ಪತ್ತೆಯಾದ ನಂತರ ಯುವಕ ಗಂಗಾಧರ್, ಇವರ ತಂದೆ ವೆಂಕಟರಾಮಪ್ಪ, ಸಹೋದರ ಮಂಜುನಾಥ್ ಅನುಮಾನಾಸ್ಪದ ರೀತಿಯಲ್ಲಿ ನಾಪತ್ತೆಯಾಗಿದ್ದಾರೆ ಜೊತೆಗೆ ಯುವತಿ ವಿಷ ಸೇವಿಸಿ ತಿರುಪತಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡು ನಂತರ ಇದೀಗ ಕೆಜಿಎಫ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ಸಂಬಂಧ ನಂಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇದುವರೆಗೂ ಯಾರೊಬ್ಬರನ್ನು ಬಂಧಿಸಿಲ್ಲ. ಇದರ ಮಧ್ಯೆ ಯುವತಿಯನ್ನು ಅಪಹರಣ ಮಾಡಲಾಗಿದೆ ಎಂದು ದಲಿತ ಕುಟುಂಬದ ಸದಸ್ಯರ ಮೇಲೆ ರಘುರಾಮರೆಡ್ಡಿ ದೂರು ನೀಡಿದ್ದಾರೆ.

ಏಪ್ರಿಲ್ 29 ರಂದು ಪ್ರತಿಭಟನೆ:

ಸ್ಥಳಕ್ಕೆ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕ ಬಿ.ವಿ.ಸಂಪಂಗಿ, ಎಸ್.ಎಫ್.ಐ. ಜಿಲ್ಲಾಧ್ಯಕ್ಷ ವಾಸುದೇವರೆಡ್ಡಿ, ದಲಿತ ಮುಖಂಡ ರಾಮಚಂದ್ರ ಮತ್ತು ಮಂಜುನಾಥ್‌ರನ್ನು ಒಳಗೊಂಡ ನಿಯೋಗವು ಗ್ರಾಮಕ್ಕೆ ಭೇಟಿ ನೀಡಿ ಘಟನೆಯ ಕುರಿತು ಮಾಹಿತಿ ಪಡೆದಿದೆ. ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿದೆ.

ಹಲ್ಲೆ ನಡೆಸಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು, ನೊಂದ ದಲಿತ ಕುಟುಂಬಕ್ಕೆ ಹೆಚ್ಚಿನ ನಷ್ಟ ಪರಿಹಾರ ನೀಡಬೇಕು, ನಾಪತ್ತೆಯಾಗಿರುವ ಯುವಕ, ಆತನ ತಂದೆ ಹಾಗೂ ಸಹೋದರರನ್ನು ಹುಡುಕಲು ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ದಲಿತ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿ ಏಪ್ರಿಲ್ 29 ರಂದು ಮುಳಬಾಗಿಲು ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನಾ ಧರಣಿ ನಡೆಸಲು ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯಲ್ಲಿ ತೀರ್ಮಾನಿಸಿದೆ.

ದಲಿತರ ಮೇಲೆ ನಿರಂತರ ದೌರ್ಜನ್ಯ:

ಮುಳಬಾಗಿಲು ವಿಧಾನಸಭಾ ಕ್ಷೇತ್ರ ಮತ್ತು ಕೋಲಾರ ಲೋಕಸಭಾ ಕ್ಷೇತ್ರವು ಮೀಸಲು ಕ್ಷೇತ್ರಗಳಾಗಿದ್ದು, ಶಾಸಕರು ಮತ್ತು ಸಂಸದರು ಸಹ ದಲಿತರೇ ಚುನಾಯಿತರಾಗಿದ್ದರೂ ಈ ವ್ಯಾಪ್ತಿಯಲ್ಲಿ ಪದೇ ಪದೇ ದಲಿತರ ಮೇಲೆ ದೌರ್ಜನ್ಯ ಘಟನೆಗಳು ಮರುಕಳಿಸುತ್ತಲೇ ಇವೆ.

ಕಳೆದ ಎರಡು ವರ್ಷಗಳ ಹಿಂದೆ ಕಗ್ಗನಹಳ್ಳಿಯಲ್ಲಿ ದಲಿತರ ಬಹಿಷ್ಕಾರ ಮತ್ತು ದಲಿತ ಹೆಣ್ಣು ಮಗಳು ಮಾಡಿದ ಬಿಸಿಯೂಟ ನಿರಾಕರಣ ಮತ್ತು ಮಕ್ಕಳನ್ನು ಶಾಲೆ ಬಿಡಿಸಿ ಬೇರೆ ಶಾಲೆಗೆ ಸೇರಿಸಿದ್ದು, ತಿಪ್ಪದೊಡ್ಡಿ ಗ್ರಾಮದಲ್ಲಿ ಸವರ್ಣೀಯರು ದಲಿತರ ಜಮೀನನ್ನು ಕಬಳಿಸಿ ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದು, ಮಣಿಯನಹಳ್ಳಿ ಗ್ರಾಮದಲ್ಲಿ ದಲಿತರು ಕೆರೆಯ ನೀರನ್ನು ಬಳಸಿದ್ದಕ್ಕೆ ಸವರ್ಣೀಯರಿಂದ ದಲಿತರ ಮೇಲೆ ದೌರ್ಜನ್ಯ ಘಟನೆಗಳು ನಡೆಯುತ್ತಿವೆ.





ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

“ಬೋಲೋ ಮಜದೂರ್ ಬಹನ್ ಕೀ ಜೈ”

ಗಾರ್ಮೆಂಟ್ ಕಾರ್ಮಿಕರ ಹೋರಾಟವೂ ಒಂದು ಪ್ರಬಲವಾದ ವರ್ಗ ಹೋರಾಟ. ನನಗೆ ಆಶ್ಚರ್ಯವೆನಿಸಿದ್ದೆಂದರೆ ಮಾಧ್ಯಮಗಳು, ನಮ್ಮ ಸರಕಾರ, ಕೋರ್ಟುಗಳು ಇದನ್ನು ವರ್ಗ ಹೋರಾಟವಾಗಿ ನೋಡಲು ಸಿದ್ಧರಾಗಿಲ್ಲ. ಅದೊಂದು ದೊಂಬಿ, ಕೇವಲ ವದಂತಿಯಿಂದ ಶುರುವಾದದ್ದು, ಇದರ ಹಿಂದೆ ಯಾರದೋ ಪ್ರಚೋದನೆಯಿದೆ ಎನ್ನುವ ವಿವರಣೆಗಳೇ ಎಲ್ಲಾ ಕಡೆ ಓಡಾಡುತ್ತಿವೆ. ಜಾಗತೀಕರಣ ಕೋಮುವಾದಗಳ ಭರಾಟೆಯಿಂದ ನಾವು ಮಂಕಾಗಿದ್ದೇವೆ. ಈಗಲೂ ವರ್ಗ ಹೋರಾಟವು ಸಾಧ್ಯ; ಕಾರ್ಮಿಕ ರೈತರು ಒಂದುಗೂಡಿ ಪ್ರತಿಭಟಿಸಿದರೆ ಪ್ರಜಾಪ್ರಭುತ್ವವನ್ನು ದುರ್ಬಳಕೆ ಮಾಡಿಕೊಂಡು ಬಂಡವಾಳಶಾಹಿಗಳ ಪರವಾಗಿ ಕಾನೂನು, ಆರ್ಥಿಕತೆ ರಚಿಸುವ ಸರಕಾರಗಳ ಹುನ್ನಾರಗಳನ್ನು ನಿಲ್ಲಿಸಬಹುದೆನ್ನುವ ವಾಸ್ತವವನ್ನು ಮರೆತು ಬಿಟ್ಟಿದ್ದೇವೆ. ಅದು ಸಾಧ್ಯವೆಂದು ನಮ್ಮ ಮಹಿಳಾ ಕಾರ್ಮಿಕರು ತೋರಿಸಿಕೊಟ್ಟಿದ್ದಾರೆ. ಅದಕ್ಕೇ ಮೇ 1 ರಂದು ಮಹಿಳಾ ಕಾರ್ಮಿಕರ ವಿಜಯದಿನವನ್ನು ಆಚರಿಸೋಣ. “ಬೋಲೋ ಮಜದೂರ್ ಬೆಹನ್ ಕೀ ಜೈ” ಎಂದು ಹೇಳೋಣ.

ನಾನು ಶಿವಮೊಗ್ಗೆಯ ಗೆಳೆಯರಿಗೆ ಹೇಳಿದೆ. ಈ ಸಾರಿ ಮೇ 1 ರಂದು ಕಾರ್ಮಿಕ ದಿನಾಚರಣೆಯನ್ನು ಮಹಿಳಾ ಕಾರ್ಮಿಕರ ವಿಜಯ ದಿನಾಚರಣೆ-ಯೆಂದು ಆಚರಿಸೋಣ. ಗಾರ್ಮೆಂಟ್ ಕಾರ್ಮಿಕರ ಚಳುವಳಿಯಲ್ಲಿ ನಮ್ಮ ಮಹಿಳಾ ಕಾರ್ಮಿಕರು ತೋರಿಸಿದ ಒಗ್ಗಟ್ಟು, ದೃಢತೆ ಮತ್ತು ಪ್ರತಿಭಟನೆಯ ಕೆಚ್ಚು ಸ್ವಾತಂತ್ರ್ಯ ನಂತರದ ಭಾರತದ ಚರಿತ್ರೆಯಲ್ಲಿಯೇ ಮರೆಯಲಾಗದ ಸಂಗತಿಗಳು. ಜಾಗತೀಕರಣ ಶುರುವಾದ ಮೇಲೆ ಕಾರ್ಮಿಕರೂ ಇಲ್ಲ ಕಾರ್ಮಿಕ ಹೋರಾಟಗಳೂ ಇಲ್ಲ ಎಂದು ಎಲ್ಲರನ್ನೂ ನಂಬಿಸಲಾಗುತ್ತಿದೆ. 1950–60ರ ದಶಕಗಳು ಹಾಗೂ ನಂತರವೂ ಪ್ರಬಲವಾಗಿದ್ದ ಕಾರ್ಮಿಕ ಸಂಘಟನೆಗಳನ್ನು ಬಂಡವಾಳಶಾಹಿಗಳು ಹಾಗೂ ಬಲಪಂಥೀಯರು ವ್ಯವಸ್ಥಿತವಾಗಿ ನಾಶಮಾಡಿದರು. ಕಾರ್ಮಿಕರು ಹಾಗೂ ಅವರ ಹೋರಾಟಗಳು ಅದೆಷ್ಟು ಪ್ರಬಲವಾಗಿದ್ದವೆಂದರೆ ನಮ್ಮ ಅನೇಕ ಜನಪ್ರಿಯ ಸಿನೇಮಾಗಳು ಅವರ ಬದುಕಿನ ಬಗ್ಗೆ ಇದ್ದವು. ಸಿದ್ದಲಿಂಗಯ್ಯನವರ “ಕರುಳಿನ ಕರೆ” ಸೇರಿದಂತೆ ರಾಜ್‌ಕುಮಾರ್ ಅನೇಕ ಚಿತ್ರಗಳಲ್ಲಿ ಕಾರ್ಮಿಕನಾಗಿ ನಟಿಸಿದ್ದರು. ಹಾಗೆಯೇ ಅಮಿತಾಭ್ ಬಚ್ಚನ್ ಕೂಡ. ಇದು ಯಾಕೆ ಮುಖ್ಯವೆಂದರೆ ಈ ಜನಪ್ರಿಯ ಚಿತ್ರಗಳು ಕಾಮಿಕರ ಸಮಸ್ಯೆಯ ಬಗ್ಗೆ ಗಂಭೀರವಾಗಿ ಏನನ್ನೂ ಹೇಳದಿದ್ದರೂ ಕಾರ್ಮಿಕರನ್ನು ನಮ್ಮ ಭಾವ ಜಗತ್ತಿನ ಭಾಗವನ್ನಾಗಿಸಿದ್ದವು. ಅಲ್ಲದೇ ಅವರನ್ನು ಪ್ರಾಮಾಣಿಕರನ್ನಾಗಿ, ವೈಯಕ್ತಿಕ ಘನತೆ ಉಳ್ಳವರನ್ನಾಗಿ ತೋರಿಸಿ ಅವರ ಸರಳ ಬದುಕನ್ನು ಆದರ್ಶವಾಗಿ ತೋರಿಸಿದ್ದವು. ಮುಂಬಯಿ ಕಾರ್ಮಿಕರ ಮಹಾನಗರವಾಗಿತ್ತು. ಆದ-ರೆ ಅತ್ಯಂತ ದುಷ್ಟ ಸಿದ್ಧಾಂತಗಳನ್ನು ಒಪ್ಪಿಕೊಂಡ ಶಿವಸೇನೆ ಹಾಗೂ ಅದರ ಮಿತ್ರ ಸಂಸ್ಥೆಗಳು ಕಾರ್ಮಿಕ ಸಂಘಟನೆಗಳನ್ನು ಹಿಂಸೆಯ ಮೂಲಕ ನಾಶಮಾಡಿದವು. ಹಲವು ಕಾರ್ಮಿಕ ನಾಯಕರ ಕೊಲೆ ನಡೆದು ಹೋಗಿ ಫ್ಯಾಸಿಸ್ಟ್ ಸಂಸ್ಥೆಗಳ ಗೂಂಡಾಗಳು ಮುಂಬಯಿಯನ್ನು ಆಳತೊಡಗಿದರು. ನಿರೀಕ್ಷಿತವೆನ್ನುವ ಹಾಗೆ ಕಾಂಗ್ರೆಸ್ ಹಾಗೂ ಇತರ ರಾಜಕೀಯ ಪಕ್ಷಗಳು ಈ ಸಂಘಟನೆಗಳ ಜೊತೆ-ಗೆ ಒಪ್ಪಂದ ಮಾಡಿಕೊಂಡವು. 1980ರ ದಶಕದ ಕೊನೆಯಲ್ಲಿ ದೆಹಲಿ ಕಾರ್ಮಿಕರ ಹೋರಾಟಗಳ ಬೆಂಬಲಕ್ಕೆ ನಿಂತ ಸಫ್ದರ್ ಹಶ್ಮಿಯಂಥ ಕಲಾವಿದರ ಕೊಲೆ ಸಹ ನಡೆದು ಹೋಯಿತು.



ಇದು ಬೆಂಗಳೂರಿನ ಬಗ್ಗೆಯೂ ನಿಜವಾಗಿತ್ತು. ಜಯನಗರ ಬಸವನ ಗುಡಿಯ ಬ್ರಾಹ್ಮಣ ಮಧ್ಯಮವರ್ಗ, ಕ್ಯಾಂಟೋನ್‌ಮೆಂಟ್ ಎಂ.ಜಿ.ರೋಡ್‌ನ ಚಟ್ಟಕ್ಕಾರಿಗಳ ಹಾಗೆಯೆ ಪೀಣ್ಯದ ಕಾರ್ಮಿಕರು, ಬಿನ್ನಿ ಮಿಲ್‌ನ ಕಾರ್ಮಿಕರು, ಎಚ್.ಎ.ಎಲ್.ನ ಕಾರ್ಮಿಕರು ಬೆಂಗಳೂರಿನ ಸಾಂಸ್ಕೃತಿಕ ಭಾಗವಾಗಿದ್ದರು. ಜಾಗತೀಕರಣದ ನಂತರ ಇವರೆಲ್ಲ ಅದೃಶ್ಯರಾದಂತೆ ಅನ್ನಿಸತೊಡಗಿತು. ಒಟ್ಟಾರೆ ಭಾರತದಲ್ಲಿಯ ಕಾರ್ಮಿಕರ ಬಗ್ಗೆ ಮಾತನಾಡುವವರು ವಯಸ್ಸಾದ ಕಮ್ಯೂನಿಸ್ಟರು ಮಾತ್ರ ಎಂದು ಹೇಳಲಾಯಿತು. ಆದರೆ ವಾಸ್ತವವೆಂದರೆ ಹೊಸ ಬಂಡವಾಳಶಾಹಿಯು ಸಂಘಟಿತ ಕಾರ್ಮಿಕ ವರ್ಗವನ್ನು ನಾಶಮಾಡಿ ರೈತರನ್ನು ಅನಾಥರನ್ನಾಗಿಸಿ ಅವರು ಈಗ ಅಸಂಘಟಿತ ಕಾರ್ಮಿಕರಾಗಿದ್ದಾರೆ. ಬೆಂಗಳೂರು ಮತ್ತು ಇತರ ನಗರಗಳಲ್ಲಿರುವ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುವ ಕಾರ್ಮಿಕರು ಸುತ್ತಮುತ್ತಲಿನ ಹಳ್ಳಿಗಳಿಂದ ಬರುವವರು. ಭಾರತದ ಬನಿಯಾ ಬಂಡವಾಳಶಾಹಿಗಳು ಮತ್ತು ಅವರ ಸೇವಕರಾದ ನಮ್ಮ ರಾಜಕೀಯ ಪ್ರತಿನಿಧಿಗಳು ಎಷ್ಟು ಕ್ರೂರರೂ ಅನ್ನುವುದು ಅರ್ಥವಾಗಬೇಕಾದರೆ ಈ ಗಾರ್ಮೆಂಟ್ ಫ್ಯಾಕ್ಟರಿಗಳನ್ನು ನೋಡಬೇಕು. ಮಹಿಳಾ ಕಾರ್ಮಿಕರು ಶೌಚಾಲಯಗಳಿಗೆ ಹೋದರೆ ದುಡಿಯುವ ವೇಳೆ ಕಡಿಮೆಯಾಗುತ್ತದೆ ಎನ್ನುವ ಈ ನರಕಗಳ ಮಾಲೀಕರು ಈ ದೇಶದ ಅತ್ಯಂತ ದುಷ್ಟ ಮೃಗಗಳು. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನಾನು ಸಮಾಜಕಾರ್ಯ ವಿಭಾಗದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾಗ ನಮ್ಮ ಅನೇಕ ವಿದ್ಯಾರ್ಥಿಗಳು ಅಲ್ಲಿ ತರಬೇತಿಗಾಗಿ, ಹೆಚ್.ಆರ್.ಎಂ. ವಿಭಾಗಕ್ಕೆ ಸೇರಿಕೊಂಡು ಅಲ್ಲಿಯ ತಾವು ನೋಡಿದ್ದನ್ನು ನನಗೆ ಹೇಳುತ್ತಿದ್ದರು. ಜಗತ್ತಿನ ಅತ್ಯಂತ ಶ್ರೀಮಂತರು ಎಂದು ಹೇಳಿಕೊಳ್ಳುತ್ತ ಯಾವಾಗಲೂ ದುಬಾರಿ ಸೂಟ್‌ಗಳಲ್ಲಿ ಮಿಂಚುವ ಭಾರತದ ಬಂಡವಾಳಶಾಹಿಗಳು ಇಂಥ ಕಾರ್ಮಿಕರ ರಕ್ತ ಹೀರಿಯೇ ಶ್ರೀಮಂತರಾಗಿದ್ದಾರೆ. ಅವರಿಗೆ ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಬೆಂಬಲವಾಗಿದ್ದ ಬಲಪಂಥೀಯರು ಈಗ ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಅದರಲ್ಲಿ ಪ್ರಮುಖವಾದದ್ದು ಪಿ.ಎಫ್. ಬಗೆಗಿನ ತಿದ್ದುಪಡಿಗಳು. ಇವುಗಳ ಉದ್ದೇಶ ಸರಳವಾಗಿದೆ, ನೇರವಾಗಿದೆ. ಕಾರ್ಮಿಕರ ದುಡ್ಡನ್ನು ಬಂಡವಾಳಶಾಹಿಗೆ ಒಪ್ಪಿಸುವುದು. ಕಾರ್ಮಿಕರು ಮಾತ್ರವಲ್ಲ ಈಗ ಶಿಕ್ಷಕರು ಸೇರಿದಂತೆ ಎಲ್ಲಾ ಸರಕಾರಿ ನೌಕರರ ಪಿಂಚಣಿ ಕಂತುಗಳ ಹಣವನ್ನು ಇದೇ ಬಂಡವಾಳಶಾಹಿಗಳ ಕಾರ್ಪೋರೇಟ್ ಸಂಸ್ಥೆಗಳಲ್ಲಿ ಹೂಡಲಾಗುತ್ತಿದೆ. ಈ ಹೊಸ ಪಿಂಚಣಿ ನಿಯಮಗಳಣ್ನು ಜಾರಿ ಮಾಡಿದ್ದು ಬಂಡವಾಳಶಾಹಿಗಳ ನಮ್ರ ಸೇವಕ ಮನಮೋಹನ್ ಸಿಂಗ್ ಅವರು.

ಬಂಡ'ವಾಳ'ಶಾಹಿಂ೨'೨ ಹುನ್ನಾರುಗಳು ಸರಿಯಾಗಿ ಅರ್ಥವಾಗುವುದು ಕಾರ್ಮಿಕರಿಗೆ ಹಾಗೂ ರೈತರಿಗೆ ಮಾತ್ರ. ನಮ್ಮ ಎಡ ಸಿದ್ಧಾಂತಗಳಿಗೂ ಕಾರ್ಮಿಕರ ಆಕ್ರೋಶವು ಅರ್ಥವಾಗಿರಲಿಲ್ಲ. ರೈತ-ಕಾರ್ಮಿಕರ ಮಹಾನ್ ಶತ್ರುವಾಗಿರುವ ಬಲಪಂಥೀಯ ಮಾತೃಸಂಸ್ಥೆಯು ಬಹುಮತದಿಂದ ಆಯ್ಕೆಯಾಗಿರುವ ಸರಕಾರದ ಮೂಲಕ ಇಂಥ ಆರ್ಥಿಕ ಹಾಗೂ ಕಾನೂನಿನ ನೀತಿಗಳನ್ನು ಜಾರಿಗೆ ತರುತ್ತಲಿದೆ. ಹೀಗಾಗಿ ನಮ್ಮ ಮಹಿಳಾ ಕಾರ್ಮಿಕರು ಇತರ ಕಾರ್ಮಿಕರ ಜೊತೆ-ಗೂಡಿ ಎರಡು ದಿನದ ಯುದ್ಧವನ್ನೇ ಘೋಷಣೆ ಮಾಡಿದಾಗ ಎಲ್ಲರೂ ತಬ್ಬಿಬ್ಬಾದರು. ಸಂಘಟಿ-ತ ಹೋರಾಟದ ದನಿ ಹೇಗಿತ್ತೆಂದರೆ ಸರಕಾರವು ಹೆದರಿ ಪಿ.ಎಫ್. ನೀತಿಯನ್ನು ಹಿಂದಿನಂತೆ ಮುಂದುವರೆಸಿತು. ಹಾಗೆಂದ ಮಾತ್ರಕ್ಕೆ ಅದ-ಕ್ಕೆ ಹೃದಯ ಪರಿವರ್ತನೆಯಾಗಿದೆಯೆಂದಲ್ಲ. ಸ್ವಲ್ಪ ದಿನ ಕಾಯ್ದು ಇನ್ನೊಂದು ರೂಪದಲ್ಲಿ ಕಾರ್ಮಿಕರ ವಿರೋಧಿ ಕ್ರಮವನ್ನು ಅದು ಖಂಡಿತ ಪ್ರಯತ್ನಿಸುತ್ತದೆ. ಆದರೆ ಹುಸಿ ರಾಷ್ಟ್ರವಾದ, ಕೋಮುವಾದ ಇವುಗಳ ಮೂಲಕ ನೈಜ ಹೋರಾಟಗಳು ನಡೆಯದಂತೆ ಮಾಡುವ ಅದರ ಪ್ರಯತ್ನಗಳು ಯಾವಾಗಲೂ ಯಶಸ್ವಿಯಾಗುತ್ತವೆ ಎನ್ನುವುದು ಸುಳ್ಳೆಂದು ಈಗ ಗೊತ್ತಾಗಿದೆ.

ನಿಜವೇನೆಂದರೆ ಗಾರ್ಮೆಂಟ್ ಕಾರ್ಮಿಕರ ಹೋರಾಟವೂ ಒಂದು ಪ್ರಬಲವಾದ ವರ್ಗ ಹೋರಾಟ. ಬಂಡವಾಳಶಾಹಿ ಹಾಗೂ ಜಾಗತೀಕರಣಗಳು ಅನಿವಾರ್ಯವಾಗಿಯೇ ವರ್ಗ ಹೋರಾಟದ ಸ್ಥಿತಿಗಳನ್ನು ಸೃಷ್ಟಿಸುತ್ತವೆ. ಅವುಗಳ ಮೂಲದಲ್ಲಿಯೇ ಇರುವ ವಿರೋಧಾಭಾಸವಿದು. ನನಗೆ ಆಶ್ಚರ್ಯವೆನಿಸಿದ್ದೆಂದರೆ ಮಾಧ್ಯಮಗಳು, ನಮ್ಮ ಸರಕಾರ, ಕೋರ್ಟುಗಳು ಇದನ್ನು ವರ್ಗ ಹೋರಾಟವಾಗಿ ನೋಡಲು ಸಿದ್ಧರಾಗಿಲ್ಲ. ಅದೊಂದು ದೊಂಬಿ, ಕೇವಲ ವದಂತಿಯಿಂದ ಶುರುವಾದದ್ದು, ಇದರ ಹಿಂದೆ ಯಾರದೋ ಪ್ರಚೋದನೆಯಿದೆ ಎನ್ನುವ ವಿವರಣೆಗಳೇ ಎಲ್ಲಾ ಕಡೆ ಓಡಾಡುತ್ತಿವೆ. ಸ್ವತಃ ನ್ಯಾಯಾಧೀಶರು ಈ ಘಟನೆಗಳ ಹಿಂದಿರುವ ಶಕ್ತಿಗಳನ್ನು ಗುರುತಿಸಿ ಎಂದು ನಿರ್ದೇಶಿಸಿದ್ದಾರೆ! ಪ್ರಚೋದನೆ, ವದಂತಿ ಇವೆಲ್ಲವು ಒಂದು ಬಗೆಯ ಣಡುರಂಜಡುಟಿರ ಜಿಚಿಥಿಣಾಡಿಗಳು. ಅವು ಕೆಲಸಮಾಡಿರಲೂ ಬಹುದು. ಆದರೆ ಅಮಾನುಷವಾದ ಪೋಲೀಸ್ ಹಿಂಸೆಯನ್ನು ದೃಢತೆ ಹಾಗೂ ಖಚಿತತೆಯಿಂದ ಸಾವಿರಾರು ಕಾರ್ಮಿಕರು ಒಂದುಗೂಡಿದ್ದು, ಒಂದು ವರ್ಗವಾಗಿ ಅವರು ಅನುಭವಿಸುತ್ತಾ ಬಂದಿದ್ದ ಶೋಷಣೆ ಹಾಗೂ ಹಿಂಸೆಗಳಿಂದ. ಹಳ್ಳಿಗಳಿಂದ ಬಂದ ಬಹುಪಾಲು ಶಿಕ್ಷಿತರೂ ಅಲ್ಲದ ಅವರು ತಮ್ಮ ಅನುಭವದಿಂದಲೇ ಕಾರ್ಮಿಕವರ್ಗದವರಾಗಿ ಆ ವರ್ಗದ ಪ್ರಜ್ಞೆಯನ್ನು ಪಡೆದುಕೊಂಡವರು. ಅವರು ಮಾರ್ಕ್ಸ್‌ನನ್ನು ಓದಬೇಕಾಗಿಲ್ಲ. ಆದರೆ ಮಾರ್ಕ್ಸ್ ಹೇಳಿದ ಹಾಗೆಯೇ ಚರಿತ್ರೆ ಅವರಿಗೆ ತಮ್ಮ ಪರಿಸ್ಥಿತಿಯ ಸ್ವರೂಪವನ್ನು ಅರ್ಥಮಾಡಿಸಿದೆ. ಪ್ರತಿಭಟನೆಯಲ್ಲಿ ನಡೆದ ಹಿಂಸಾಚಾರ, ದೊಂಬಿಗಳು ಕಾರ್ಮಿಕರಿಂದಾದವು ಎಂದು ಟಿ.ವಿ. ದೃಶ್ಯಾವಳಿಗಳಿಂದ ಅನ್ನಿಸುವುದಿಲ್ಲ. ಆದರೆ ಪೋಲೀಸರು ಮಹಿಳೆಯರನ್ನು ಅಮಾನುಷವಾಗಿ ಥಳಿಸಿದರು ಎನ್ನುವುದು ಸ್ಪಷ್ಟವಾಗಿತ್ತು. ಇದು ಕೈಮೀರಿ ಆದದ್ದಲ್ಲ. ವರ್ಷಗಳ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರ ಸರಕಾರವೂ ಇದೇ ರೀತಿಯಲ್ಲಿ ಪಿ.ಎಫ್. ನಿಯಮಗಳಲ್ಲಿ ಬದಲಾವಣೆ ತರಲು ಹೋದಾಗ ಇದೇ ಗಾರ್ಮೆಂಟ್ ಕಾರ್ಮಿಕರು ಹೀಗೆಯೇ ಪ್ರತಿಭಟಿಸಿದ್ದರು. ಬೆಂಗಳೂರಿನ ಪೋಲೀಸರು ಹೀಗೆ ಅಮಾನುಷವಾಗಿ ವರ್ತಿಸಿದ್ದರು. ಪ್ರತಿಭಟನೆಗೆ ಬಂದಿದ್ದ ಗರ್ಭಿಣಿ ಮಹಿಳಾ ಕಾರ್ಮಿಕಳಿಗೆ ಅವರ ಏಟಿನಿಂದ ಗರ್ಭಪಾತವಾದದ್ದು ನನಗೆ ಸ್ಪಷ್ಟವಾಗಿ ನೆನಪಿದೆ. ಅದರ ಬಗ್ಗೆ ಗಾಯತ್ರಿ ಮತ್ತು ಅನೇಕರು ಬರೆದಿದ್ದರು.

ಜಾಗತೀಕರಣ ಕೋಮುವಾದಗಳ ಭರಾಟೆಯಿಂದ ನಾವು ಮಂಕಾಗಿದ್ದೇವೆ. ಈಗಲೂ ವರ್ಗ ಹೋರಾಟವು ಸಾಧ್ಯ; ಕಾರ್ಮಿಕ ರೈತರು ಒಂದುಗೂಡಿ ಪ್ರತಿಭಟಿಸಿದರೆ ಪ್ರಜಾಪ್ರಭುತ್ವವನ್ನು ದುರ್ಬಳಕೆ ಮಾಡಿಕೊಂಡು ಬಂಡವಾಳಶಾಹಿಗಳ ಪರವಾಗಿ ಕಾನೂನು, ಆರ್ಥಿಕತೆ ರಚಿಸುವ ಸರಕಾರಗಳ ಹುನ್ನಾರಗಳನ್ನು ನಿಲ್ಲಿಸಬಹುದೆನ್ನುವ ವಾಸ್ತವವನ್ನು ಮರೆತು ಬಿಟ್ಟಿದ್ದೇವೆ. ಅದು ಸಾಧ್ಯವೆಂದು ನಮ್ಮ ಮಹಿಳಾ ಕಾರ್ಮಿಕರು ತೋರಿಸಿಕೊಟ್ಟಿದ್ದಾರೆ.

ಅದಕ್ಕೇ ಮೇ 1 ರಂದು ಮಹಿಳಾ ಕಾರ್ಮಿಕರ ವಿಜಯದಿನವನ್ನು ಆಚರಿಸೋಣ. “ಬೋಲೋ ಮಜದೂರ್ ಬೆಹನ್ ಕೀ ಜೈ” ಎಂದು ಹೇಳೋಣ. ಹಾಗೆ ಹೇಳುವುದು ನಿಜವಾದ ದೇಶಪ್ರೇಮವಲ್ಲವೆ? ●


ನಮ್ಮ ಚುರು-ಟ್ವೀಟ್

@SitaramYechury

ಎಪ್ರಿಲ್ 29


ಬರದಲ್ಲಿ ಬವಣೆ ಪಡುವ ಬಡವರಿಗೆ
ಬಿಜೆಪಿ ಸರಕಾರ ‘ರಾಯಭಾರಿ’ಯನ್ನು
ನೇಮಿಸುತ್ತಾ? ಅಥವಾ
‘ಬರದ–ಜತೆ–ಸೆಲ್ಫಿ’ ಸ್ಪರ್ಧೆ ಏರ್ಪಡಿಸುತ್ತಾ?
ಅಥವಾ ಇನ್ನೊಂದು ಹೊಸ ಹೆಸರು
ಸೂಚಿಸುತ್ತಾ?

– ಸೀತಾರಾಂ ಯೆಚುರಿ (ಬರದ ಬಗ್ಗೆ ಮೋದಿ ಸರ್ಕಾರದ ವೈಫಲ್ಯದ ಲೇವಡಿ ಮಾಡುತ್ತಾ)



ಕಾರ್ಮಿಕ-ವಿರೋಧಿ ಕ್ರಮಗಳಿಗೆ ಪ್ರತಿರೋಧದ ಕಾವು

‘ವ್ಯಾಪಾರವನ್ನು ಸುಗಮ’ಗೊಳಿಸುವ ಮತ್ತು ಹೆಚ್ಚು ಉದ್ಯೋಗಾವಕಾಶಗಳ ಸೃಷ್ಟಿ ಯಾಗುತ್ತದೆಂಬ ಹುಸಿ ಆಶ್ವಾಸನೆಯ ಹೆಸರಿನಲ್ಲಿ ಮೋದಿ ಸರಕಾರ ಈ ಎಲ್ಲಾ ಕಾರ್ಮಿಕ ವರ್ಗ–ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಎಲ್ಲಾ ಕಾರ್ಮಿಕ–ವಿರೋಧಿ ಕ್ರಮಗಳನ್ನು ದುಡಿಯುವ ವರ್ಗದ ಚಳವಳಿ ತೀಕ್ಷ್ಣವಾಗಿ ವಿರೋಧಿಸುತ್ತಿದೆ. ದುಡಿಯುವ ವರ್ಗದ ಹೋರಾಟಗಳು ಮೋದಿ ಸರಕಾರದ ಹೆಚ್ಚುತ್ತಿರುವ ಸರ್ವಾಧಿಕಾರಿ ಧೋರಣೆಯ ವಿರುದ್ಧದ ಹೋರಾಟದ ಮಹತ್ವದ ಭಾಗವಾಗಿವೆ.



ಪ್ರಕಾಶ ಕಾರಟ್

ಮೋದಿ ಸರಕಾರ ಆರಂಭಿಸಿದ ಕಾರ್ಮಿಕವರ್ಗ–ವಿರೋಧಿ ಕ್ರಮಗಳು ಯಾವುದೇ ಎಗ್ಗಿಲ್ಲದೆ ಮುಂದುವರಿಯುತ್ತಿವೆ. ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್)ಯಿಂದ ಹಿಂದೆ ಪಡೆದ 60 ಶೇಕಡಾ ಹಣದ ಮೇಲೆ ತೆರಿಗೆ ಹೇರುವ ಪ್ರಸ್ತಾವವನ್ನು ಈ ವರ್ಷದ ಕೇಂದ್ರ ಬಜೆಟ್‌ನಲ್ಲಿ ಮಂಡಿಸಲಾಯಿತು. ಇಪಿಎಫ್‌ನ್ನು ಕೂಡ ಹೊಸ ಪಿಂಚಣಿ ಯೋಜನೆಯಂತೆಯೇ ಮಾಡಬೇಕು ಎಂಬುದಕ್ಕಾಗಿಯೇ ಈ ಪ್ರಸ್ತಾವ. ಹೊಸ ಪಿಂಚಣಿ ಯೋಜನೆಯಲ್ಲಿ ಯಾವುದೇ ಹಣವನ್ನು ತೆಗೆದುಕೊಂಡರೆ ಅದರ ಮೇಲೆ ತೆರಿಗೆ ಬೀಳುತ್ತದೆ. ಇಪಿಎಫ್ ವಂತಿಗೆದಾರರು ಹೊಸ ಪಿಂಚಣಿ ಯೋಜನೆಗೆ ಬರುವಂತೆ ಮಾಡುವುದು ಇದರ ಉದ್ದೇಶ. ಈ ಮೂಲಕ ಅವರ ವಂತಿಗೆಗಳ ಹಣವನ್ನು ಮಾರುಕಟ್ಟೆಯಲ್ಲಿ ಬಳಸಲು ಅವಕಾಶವಾಗುತ್ತದೆ.

ಕಾರ್ಮಿಕರು ಮತ್ತು ನೌಕರರ ವ್ಯಾಪಕ ವಿರೋಧ ಮತ್ತು ಎಲ್ಲಾ ಟ್ರೇಡ್ ಯೂನಿಯನ್‌ಗಳು ಹಾಗೂ ಬಿಜೆಪಿಯ ಎನ್‌ಡಿಎ ಮೈತ್ರಿಕೂಟದ ಟ್ರೇಡ್ ಯೂನಿಯನ್‌ಗಳು ಕೂಡ ಪ್ರತಿಭಟಿಸಿದ್ದರಿಂದ ಸಂಸತ್ತಿನಲ್ಲಿ ಚರ್ಚೆ ಆರಂಭವಾಗುವ ಮುನ್ನವೇ ಹಣಕಾಸು ಸಚಿವರು ಈ ಪ್ರಸ್ತಾವವನ್ನು ವಾಪಸ್ ಪಡೆದರು.

ಇದಾದ ನಂತರ, ಸರಕಾರ ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಸರ್ಟಿಫಿಕೆಟ್ ಮತ್ತು ಪೋಸ್ಟ್ ಆಫೀಸ್ ಉಳಿತಾಯದಂಥ ಸಣ್ಣ ಉಳಿತಾಯಗಳ ಮೇಲಿನ ಬಡ್ಡಿ ದರಗಳನ್ನು ತೀವ್ರವಾಗಿ ಇಳಿಸಿತು. ಪಿಪಿಎಫ್ ಮತ್ತು ಹಿರಿಯ ನಾಗರಿಕರ ಉಳಿತಾಯದ ಮೇಲಿನ ಬಡ್ಡಿಯನ್ನು ಶೇಕಡಾ 0.6ನಷ್ಟು ಇಳಿಸಿದರೆ ಅಂಚೆ ಕಚೇರಿ ಠೇವಣಿಗಳ ಮೇಲಿನ ಬಡ್ಡಿಯನ್ನು 0.6ನಿಂದ 1.3 ಶೇಕಡಾ ಪ್ರಮಾಣದಲ್ಲಿ ಇಳಿಸಲಾಯಿತು.

ಸಣ್ಣ ಉಳಿತಾಯದ ಮೇಲಿನ ಬಡ್ಡಿದರಗಳ ಈ ಪರಿಯ ಇಳಿಕೆಯು ದುಡಿಯುವ ವರ್ಗ ಮತ್ತು ಮಧ್ಯಮವರ್ಗದವರನ್ನು ತೀವ್ರವಾಗಿ ಬಾಧಿಸುತ್ತದೆ. ಯಾಕೆಂದರೆ ಅವರ ಉಳಿತಾಯದ ಹೆಚ್ಚಿನ ಭಾಗ ಸಣ್ಣ ಉಳಿತಾಯ ಯೋಜನೆಗಳೇ ಆಗಿವೆ. ಇಲ್ಲಿ ಕೂಡ ಈ ಉಳಿತಾಯಗಳ ಹಣವನ್ನು ಮಾರುಕಟ್ಟೆ ಆಧರಿತ ನಿಧಿಗಳತ್ತ ಅಟ್ಟುವುದ್ದೇ ಆಗಿದೆ.

ಈ ದಾಳಿಗಳ ಸರಣಿಯಲ್ಲಿ ತೀರಾ ಇತ್ತೀಚಿನದ್ದೆಂದರೆ ಇಪಿಎಫ್ ಮೇಲಿನ ಬಡ್ಡಿ ದರವನ್ನು ಹಣಕಾಸು ಖಾತೆ ಇಳಿಸಿರುವುದು. ನೌಕರರ ಭವಿಷ್ಯನಿಧಿ ಸಂಘಟನೆ(ಇಪಿಎಫ್‌ಓ)ದ ಕೇಂದ್ರೀಯ ಟ್ರಸ್ಟಿಗಳ ಮಂಡಳಿಯ (ಸಿಬಿಟಿ) ಸರ್ವಾನುಮತದ ಶಿಫಾರಸು ಮತ್ತು ಬಡ್ಡಿದರವನ್ನು ಹೆಚ್ಚಿಸಲು ಇನ್ನಷ್ಟು ಹಣಕಾಸು ಲಭ್ಯವಿದ್ದರೂ ಕೂಡ ಸರಕಾರ ಈ ಕ್ರಮಕ್ಕೆ ಮುಂದಾಗಿದೆ.

ಇಪಿಎಫ್ ನಿಧಿಗಳನ್ನು ಕಬಳಿಸಿಕೊಳ್ಳುವ ಯತ್ನಗಳು ಮುಂದುವರಿದಿವೆ. ಹಿರಿಯ ನಾಗರಿಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಕೇಂದ್ರ ಹಣಕಾಸು ಸಚಿವಾಲಯ ಮಾರ್ಚ್ 18ರಂದು ಒಂದು ಅಧಿಸೂಚನೆ ಹೊರಡಿಸಿತು. ಅಂಚೆ ಕಚೇರಿಯ ಉಳಿತಾಯ ಖಾತೆಗಳು, ಪಿಪಿಎಫ್ ಮತ್ತು ಇಪಿಎಫ್ ಖಾತೆಗಳಲ್ಲಿ ಇರುವ ಕ್ಲೇಮ್ ಮಾಡದ ಠೇವಣಿಗಳನ್ನು ಈ ನಿಧಿಗೆ ವರ್ಗಾಯಿಸುವುದು ಸರಕಾರದ ಉದ್ದೇಶ.

ಇಪಿಎಫ್‌ನ ಹಣವನ್ನು ಈ ರೀತಿಯ ಯಾವುದೇ ಅಧಿಸೂಚನೆ ಮೂಲಕ ವರ್ಗಾಯಿಸುವಂತಿಲ್ಲ. ‘ಇಪಿಎಫ್‌ನ 6000 ಕೋಟಿ ರೂಪಾಯಿಗಳನ್ನು ಬಳಸಿಕೊಳ್ಳುವ’ ಇದೇ ರೀತಿಯ ಪ್ರಸ್ತಾವ ಕಳೆದ ವರ್ಷದ ಬಜೆಟ್‌ನಲ್ಲೇ ಇತ್ತು. ಸಿಬಿಟಿಯಲ್ಲಿನ ಟ್ರೇಡ್ ಯೂನಿಯನ್ ಪ್ರತಿನಿಧಿಗಳು 2015ರ ಮಾರ್ಚ್ 11ರಂದು ನಡೆದ ಟ್ರಸ್ಟಿಗಳ ಮಂಡಳಿಯ ಸಭೆಯಲ್ಲಿ ಈ ಪ್ರಸ್ತಾವವನ್ನು ಸರ್ವಾನುಮತದಿಂದ ವಿರೋಧಿಸಿದ್ದರು. ಇಪಿಎಫ್‌ಗೆ ಸಂಬಂಧಿಸಿದ ಸರಕಾರದ ಪ್ರಸಕ್ತ ಅಧಿಸೂಚನೆ ಕಾನೂನಾತ್ಮಕ ವಾಗಿಯೂ ನೈತಿಕವಾಗಿಯೂ ತಪ್ಪು.

ಇಪಿಎಫ್‌ನಿಂದ ತೆಗೆದುಕೊಂಡ ಮೊತ್ತದ ಮೇಲೆ ತೆರಿಗೆ ವಿಧಿಸುವ ಪ್ರಸ್ತಾವನೆಯಿಂದಾದ ಗೊಂದಲದಿಂದ ಯಾವುದೇ ಪಾಠ ಕಲಿಯದ ಸರಕಾರ, ಇಪಿಎಫ್ ನಿಂದ ಹಣ ತೆಗೆದುಕೊಳ್ಳುವ ಕುರಿತ ನಿಯಮಗಳಿಗೆ ಇದೇ ವರ್ಷದ ಫೆಬ್ರವರಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಅಧಿಸೂಚನೆ ಹೊರಡಿಸಿತು. ಈ ನೊಟಿಫಿಕೇಷನ್ ಅನ್ವಯ, ನಿವೃತ್ತಿಗಿಂತ ಮುಂಚೆ ಅಥವಾ ಕೆಲಸ ಕಳೆದುಕೊಂಡ ಅಥವಾ ರಾಜಿನಾಮೆ ನೀಡಿದ ಸಂದರ್ಭದಲ್ಲಿ ಪಿಎಫ್ ಹಣವನ್ನು ವಾಪಸ್ ಪಡೆಯುವುದಿದ್ದರೆ ಕಾರ್ಮಿಕರು ನಿಧಿಗೆ ಅವರ ಪಾಲಿನ ದೇಣಿಗೆಯನ್ನು ಮಾತ್ರವೇ ಪಡೆಯಬಹುದಾಗಿದೆ. ‘ಉದ್ಯೋಗದಾತರ’ ದೇಣಿಗೆಯನ್ನು ಆಯಾ ಕಾರ್ಮಿಕ 58 ವರ್ಷ ವಯಸ್ಸನ್ನು ತಲುಪಿದಾಗಲಷ್ಟೇ ಪಡೆಯಬಹುದು ಎನ್ನುವುದು ತಿದ್ದುಪಡಿಯಾಗಿತ್ತು. ಇದನ್ನು ಕಾರ್ಮಿಕ ಸಂಘಟನೆಗಳು ತೀವ್ರವಾಗಿ ವಿರೋಧಿಸಿದವು. ಇಪಿಎಫ್ ಹಣವನ್ನು ವಾಪಸ್ ಪಡೆಯುವ ಅಥವಾ ಅದರಲ್ಲೇ ಉಳಿಸುವ ಆಯ್ಕೆಯ ನಿರ್ಧಾರವನ್ನು ಕಾರ್ಮಿಕರಿಗೇ ಬಿಡಬೇಕೆಂದು ಅವುಗಳು ಒತ್ತಾಯಿಸಿದ್ದವು.

ಈ ತಿದ್ದುಪಡಿಯನ್ನು ಅನುಷ್ಠಾನಗೊಳಿಸಲು ಸರಕಾರ ಮುಂದಾದಾಗ ಕಾರ್ಮಿಕರಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಕಾರ್ಮಿಕರ ಪ್ರತಿಭಟನೆ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಮಹಿಳಾ ಕಾರ್ಮಿಕರ ಮತ್ತು ವಿಶಾಖಪಟ್ಟಣಂನ ಪ್ರತಿಭಟನೆಗಳಿಂದಾಗಿ ಸರಕಾರ ಈ ಅಧಿಸೂಚನೆಯನ್ನು ವಾಪಸ್ ಪಡೆಯುವ ಒತ್ತಡಕ್ಕೆ ಒಳಗಾಯಿತು. ಇಪಿಎಫ್‌ನಲ್ಲಿ ಕೂಡಿಕೆಯಾಗುವ ಹಣದ ಭಾಗದಿಂದ ತಮ್ಮನ್ನು ವಂಚಿಸುವ ಸರಕಾರದ ಪ್ರಯತ್ನವನ್ನು ಕಾರ್ಮಿಕರು ವಿಫಲಗೊಳಿಸಿದರು.

ವಿವಿಧ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸಲು ಮೋದಿ ಸರಕಾರ ಕೈಗೊಳ್ಳುತ್ತಿರುವ ಸರಣಿ ಕ್ರಮಗಳ ಹಿನ್ನೆಲೆಯಲ್ಲಿ ಇಂಥ ದುಡಿಯುವ ವರ್ಗ–ವಿರೋಧಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಾರ್ಖಾನೆಗಳ ಕಾನೂನಿಗೆ ತಿದ್ದುಪಡಿ ಈ ರೀತಿ ಸಂಸತ್ತಿನ ಮುಂದೆ ಇಡಬಹುದೆಂದು ನಿರೀಕ್ಷಿಸಲಾಗಿರುವ ಒಂದು ಮಸೂದೆ. ಒಂದು ವೇಳೆ ಈ ತಿದ್ದುಪಡಿಗಳು ಅಂಗೀಕಾರವಾದರೆ, ಕಾರ್ಖಾನೆಯ (ಫ್ಯಾಕ್ಟರಿ) ವ್ಯಾಖ್ಯಾನವೇ ಬದಲಾಗಿ ಶೇಕಡಾ 75ಕ್ಕಿಂತ ಹೆಚ್ಚಿನ ಕೈಗಾರಿಕಾ ಕಾರ್ಮಿಕರು ಈ ಕಾರ್ಖಾನೆಗಳ ಕಾನೂನಿನ ವ್ಯಾಪ್ತಿಯಿಂದ ಹೊರಗುಳಿಯಲಿದ್ದಾರೆ. 40ರ ವರೆಗೆ ಕಾರ್ಮಿಕರನ್ನು ಹೊಂದಿರುವ ಎಲ್ಲಾ ಕಾರ್ಖಾನೆಗಳು ಈ ಕಾನೂನಿನ ವ್ಯಾಪ್ತಿಯಿಂದ ಹೊರಗುಳಿಯುತ್ತವೆ. ಸಣ್ಣ ಕೈಗಾರಿಕೆಗಳಿಗೆ, ಅಂದರೆ 40 ಸಂಖ್ಯೆವರೆಗಿನ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳಿಗಾಗಿ ಒಂದು ಹೊಸ ಮಸೂದೆಯನ್ನು ತರಲಾಗುತ್ತದೆ. 14 ಮೂಲ ಕಾರ್ಮಿಕ ಕಾನೂನುಗಳು ಸಣ್ಣ ಫ್ಯಾಕ್ಟರಿಗಳಿಗೆ ಅನ್ವಯವಾಗುವುದಿಲ್ಲ ಎಂದು ಈ ಮಸೂದೆಯಲ್ಲಿ ಹೇಳಲಾಗಿದೆ.

‘ವ್ಯಾಪಾರವನ್ನು ಸುಗಮ’ಗೊಳಿಸುವ ಮತ್ತು ಹೆಚ್ಚು ಉದ್ಯೋಗಾವಕಾಶಗಳ ಸೃಷ್ಟಿ ಯಾಗುತ್ತದೆಂಬ ಹುಸಿ ಆಶ್ವಾಸನೆಯ ಹೆಸರಿನಲ್ಲಿ ಮೋದಿ ಸರಕಾರ ಈ ಎಲ್ಲಾ ಕಾರ್ಮಿಕ ವರ್ಗ–ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಎಲ್ಲಾ ಕಾರ್ಮಿಕ–ವಿರೋಧಿ ಕ್ರಮಗಳನ್ನು ದುಡಿಯುವ ವರ್ಗದ ಚಳವಳಿ ತೀಕ್ಷ್ಣವಾಗಿ ವಿರೋಧಿಸುತ್ತಿದೆ. ಕಾರ್ಮಿಕವರ್ಗ–ವಿರೋಧಿಯಾದ ಈ ಎಲ್ಲಾ ಕ್ರಮಗಳ ವಿರುದ್ಧ ಮತ್ತು ಇತರ ಬೇಡಿಕೆಗಳ ಬೆಂಬಲವಾಗಿ ಸೆಪ್ಟೆಂಬರ್ 2ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ನೀಡಿವೆ. ದುಡಿಯುವ ವರ್ಗದ ಹೋರಾಟಗಳು ಮೋದಿ ಸರಕಾರದ ಹೆಚ್ಚುತ್ತಿರುವ ಸರ್ವಾಧಿಕಾರಿ ಧೋರಣೆಯ ವಿರುದ್ಧದ ಹೋರಾಟದ ಮಹತ್ವದ ಭಾಗವಾಗಿವೆ. ●



ಇಪಿಎಫ್‌ನಿಂದ ತೆಗೆದುಕೊಂಡ ಮೊತ್ತದ ಮೇಲೆ ತೆರಿಗೆ ವಿಧಿಸುವ ಪ್ರಸ್ತಾವನೆಯಿಂದಾದ ಗೊಂದಲದಿಂದ ಯಾವುದೇ ಪಾಠ ಕಲಿಯದ ಸರಕಾರ, ಇಪಿಎಫ್ ನಿಂದ ಹಣ ತೆಗೆದುಕೊಳ್ಳುವ ಕುರಿತ ನಿಯಮಗಳಿಗೆ ಇದೇ ವರ್ಷದ ಫೆಬ್ರವರಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಅಧಿಸೂಚನೆ ಹೊರಡಿಸಿತು. ಇದನ್ನು ಅನುಷ್ಠಾನಗೊಳಿಸಲು ಸರಕಾರ ಮುಂದಾದಾಗ ಕಾರ್ಮಿಕರಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಕಾರ್ಮಿಕರ ಪ್ರತಿಭಟನೆ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಮಹಿಳಾ ಕಾರ್ಮಿಕರ ಮತ್ತು ವಿಶಾಖಪಟ್ಟಣಂನ ಪ್ರತಿಭಟನೆಗಳಿಂದಾಗಿ ಸರಕಾರ ಈ ಅಧಿಸೂಚನೆಯನ್ನು ವಾಪಸ್ ಪಡೆಯಲೇ ಬೇಕಾಗಿ ಬಂತು.

ಕರ್ನಾಟಕದಲ್ಲಿ

ಆರಂಭಿಕ ಕಾರ್ಮಿಕ ಸಂಘಟನೆಗಳು

ಮೊದಲ ಮೇ ದಿನ



ಕರ್ನಾಟಕದಲ್ಲಿ ಮೈಸೂರು ಸಂಸ್ಥಾನದಲ್ಲಿ ವಿಶ್ವೇಶ್ವರಯ್ಯ ಅವರ ಮುತುವರ್ಜಿಯಿಂದ, ಹಾಗೂ ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಇದ್ದ ಕನ್ನಡ ಭಾಷಿಕ ಪ್ರದೇಶಗಳಲ್ಲಿ ಕೈಗಾರಿಕೆಗಳು 20ನೇ ಶತಮಾನದ ಆರಂಭದಲ್ಲೇ ಸ್ಥಾಪನೆಯಾಗಿದ್ದವು. ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯಲ್ಲಿ (ಎಂ.ಎಸ್.ಐ.ಎಲ್.), ಕೋಲಾರದ ಚಾಂಪಿಯನ್ ರೀಫ್, ಮೈಸೂರ್ ಮೈನ್ಸ್ (ಚಿನ್ನದಗಣಿ), ಮಂಗಳೂರಿನಲ್ಲಿ ಹಂಚು, ನೇಯ್ಗೆ, ಗೇರುಬೀಜ, ಬೀಡಿ ಕಾರ್ಖಾನೆಗಳಲ್ಲಿ ಮತ್ತು ಮುದ್ರಣ, ಸಾರಿಗೆ ಕ್ಷೇತ್ರಗಳಲ್ಲಿ, ಹುಬ್ಬಳ್ಳಿ ಮತ್ತು ಮೈಸೂರು ರೈಲ್ವೇ ವರ್ಕ್‌ಶಾಪುಗಳಲ್ಲಿ, ಎಂ.ಎಸ್.ಎಂ. (ಮದ್ರಾಸ್ ಅಂಡ್ ಸದರ್ನ್ ಮರಾಠಾ) ರೈಲ್ವೇಯಲ್ಲಿ, ಶಹಾಬಾದಿನ ಸಿಮೆಂಟ್ ಕಾರ್ಖಾನೆಯಲ್ಲಿ, ಬೆಂಗಳೂರು, ದಾವಣಗೆರೆಗಳಲ್ಲಿ ಕಾಟನ್ ಮಿಲ್ಲುಗಳಲ್ಲಿ, ಹರಿಹರದ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ, ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದರು.

1930ರ ದಶಕದ ಆರಂಭದಲ್ಲಿ ಮೈಸೂರು ಪ್ರಾಂತ್ಯದಲ್ಲೇ ಸುಮಾರು 1 ಲಕ್ಷ ಕಾರ್ಮಿಕರು ಇದ್ದರು.



1930ರ ದಶಕದಲ್ಲೇ ಈ ಹೆಚ್ಚಿನ ಕಾರ್ಖಾನೆಗಳಲ್ಲಿ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗೆ ಕಾರ್ಮಿಕ ಸಂಘಗಳನ್ನು ಸಂಘಟಿಸಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದ್ದ ಹಲವು ಕಾಂಗ್ರೆಸಿಗರು, ಸೋಶಲಿಸ್ಟರು, ಕಮ್ಯುನಿಸ್ಟರು ಯೂನಿಯನಗಳನ್ನು ಸಂಘಟಿಸುವಲ್ಲಿ ನೆರವಾಗಿ ಅದಕ್ಕೆ ಬೆಂಬಲ ನೀಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ ಜತೆ ಬೆಸೆದಿದ್ದರು. ಸ್ವತಂತ್ರ ವರ್ಗಪ್ರಜ್ಞೆ ಮೂಡಿಸಿದ್ದರು.

1930, 40 ರ ದಶಕಗಳಲ್ಲೇ ಕಾರ್ಮಿಕರ ಅನೇಕ ದಿಟ್ಟಹೋರಾಟಗಳು ನಡೆದವು.

ಕೆ.ಜಿ.ಎಫ್

1930ರಲ್ಲಿ 18 ಸಾವಿರ ಕೆಜಿಎಫ್ ಗಣಿಕಾರ್ಮಿಕರು 24ದಿನಗಳ ದೀರ್ಘ ಮುಷ್ಕರ ನಡೆಸಿದರು. ಆಗ ಕಾರ್ಮಿಕರ ಕೈಗೆ ಒಂದು ಗುರುತಿನ ಬಿಲ್ಲೆ ಕಟ್ಟಲಾಗುತ್ತಿತ್ತು. ಹತ್ತು ಬೆರಳುಗಳ 'ಗುರುತು' ತೆಗೆದುಕೊಳ್ಳಲಾರಂಭಿಸಿತ್ತು. ಗಣಿಯ ದುಡಿಮೆಯ ಕಷ್ಟತಾಳಲಾರದೆ ಓಡಿಹೋದ ಕಾರ್ಮಿಕರನ್ನು ಗುರುತಿನ ಬಿಲ್ಲೆ ಆಧಾರದ ಮೇಲೆ ಹಿಡಿದು ವಾಪಸು ತರಲಾಗುತ್ತಿತ್ತು. ಆಗ ಇದ್ದ ಕಾಂಟ್ರಾಕ್ಟ್ ಕಾರ್ಮಿಕರನ್ನು ಖಾಯಂ ಮಾಡುವ ಬಗ್ಗೆ ವದಂತಿ ಹಬ್ಬಿತ್ತು! ಅದಕ್ಕೆ 'ಹೆದರಿದ' ಕಾರ್ಮಿಕರು **ಹತ್ತು ಬೆರಳುಗಳ ಗುರುತು ತೆಗೆದುಕೊಳ್ಳುವುದನ್ನು ವಿರೋಧಿಸಿ 24 ದಿನಗಳ ದೀರ್ಘ ಮುಷ್ಕರ ನಡೆಸಿದರು.** ಮುಷ್ಕರ ಬ್ರಿಟಿಷ್ ಸರ್ಕಾರದ ಗಮನ ಸೆಳೆದು. ಮೈಸೂರು ದಿವಾನರು ಬಂದು ಹತ್ತು ಬೆರಳುಗಳ ಗುರುತು ತೆಗೆದುಕೊಳ್ಳುವುದನ್ನು ನಿಲ್ಲಿಸಿದ ಮೇಲೆಯೇ ಮುಷ್ಕರ ನಿಂತಿತು! 1938ರಲ್ಲಿ ಗುರುತಿನ ಪಟ್ಟಿ ಕಟ್ಟಿಕೊಳ್ಳಲು ನಿರಾಕರಿಸಿ ಮತ್ತು ಕೂಲಿಹೆಚ್ಚಳಕ್ಕೆ ಪುನಃ ದೊಡ್ಡ ಮುಷ್ಕರ ನಡೆಯಿತು.



ಬೆಂಗಳೂರು ಬಿನ್ನಿ ಮಿಲ್



1931ರಲ್ಲಿ ಬೆಂಗಳೂರಿನ ಬಿನ್ನಿ ಮಿಲ್‌ನಲ್ಲಿ ಬೋನಸ್ಸು ಪಾವತಿಮಾಡಲು ನಿರಾಕರಿಸಿದ್ದನ್ನು ಪ್ರತಿಭಟಿಸಿ ಧರಣಿ ಕೂತ

43 ಸಾವಿರ ಕಾರ್ಮಿಕರ ಮೇಲೆ ಪೋಲಿಸ್ ದಾಳಿ

4ಕಾರ್ಮಿಕರ ಬಲಿ, ನೂರಾರು ಕಾರ್ಮಿಕರು ಗಾಯಗೊಂಡರು.

ಬಿಜಾಪುರ

1948ರಲ್ಲಿ ಬಿಜಾಪುರ ಮುನಿಸಿಪಲ್ ಕೆಲಸಗಾರರ ಮುಷ್ಕರ,

200 ಕಾರ್ಮಿಕರು(ಅವರ ಮಕ್ಕಳೂ)

23 ದಿನ ಜೈಲಿನಲ್ಲಿ,

ದಾದಿಮಾ ಎಂಬ ಬಂಧಿತೆ ಜೈಲಿನಲ್ಲಿ ಮಗುವಿಗೆ



ಭದ್ರಾವತಿಯ ರಕ್ತದೋಕುಳಿಯ ಮೇ ದಿನ



1942ರ ಏಪ್ರಿಲ್ ತಿಂಗಳು. ಭದ್ರಾವತಿ ಲೇಬರ್ ಅಸೋಸಿಯೇಷನ್ ಮೇ ದಿನಾಚರಣೆ ನಡೆಸುವ ನಿರ್ಣಯ ಕೈಗೊಂಡಿತು. ಸಭೆ-ಮೆರವಣಿಗೆಗಳಿಗೆ ಆಗ ಪ್ರತಿಬಂಧವಿದ್ದುದರಿಂದ ಮ್ಯಾಜಿಸ್ಟ್ರೇಟರ ಅನುಮತಿಗೆ ಅರ್ಜಿ ಹಾಕಲಾಯಿತು. ಉತ್ತರ ಸಿಗಲಿಲ್ಲ. ಮೈಸೂರು ಸಂಸ್ಥಾನದ ಸರಕಾರವನ್ನು ಕೇಳಿದರು. ಅಲ್ಲಿಂದಲೂ ಸಿಗಲಿಲ್ಲ. ಕೊನೆಗೆ ಅನುಮತಿಯಿರಲಿ, ಇಲ್ಲದಿರಲಿ, ಮೇದಿನದ ಮೆರವಣಿಗೆಯನ್ನು ನಡೆಸಿಯೇ ಬಿಡಲು ತೀರ್ಮಾನಿಸಿದ ಕಾರ್ಮಿಕರು ಮೇ 1, 1942ರಂದು ಶಾಂತಿಯುತವಾಗಿ ಮೆರವಣಿಗೆಯನ್ನು ನಡೆಸಿಯೇ ಬಿಟ್ಟರು. ಸಭೆಯಲ್ಲಿ ಸರಕಾರದ ನಿಲುವನ್ನು ಖಂಡಿಸಲಾಯಿತು. ಅಂದು ಪೋಲೀಸರು ಸುಮ್ಮನಿದ್ದರು. ಆದರೆ ಮೇ 3, 1942ರಂದು ನೇರವಾಗಿ ಕಾರ್ಖಾನೆಗೇ ಹೋಗಿ ಕಾರ್ಮಿಕ ಸಂಘದ ಕಾರ್ಯದರ್ಶಿ ಮತ್ತು ಮೂವರು ಪದಾಧಿಕಾರಿಗಳನ್ನು ಬಂಧಿಸಿ ಕರೆದೊಯ್ಯಲು ಮುಂದಾದರು. ಇದನ್ನು ಕಂಡು ಜಮಾಯಿಸಿದ ಸುಮಾರು 3–4 ಸಾವಿರ ಕಾರ್ಮಿಕರು ತಮ್ಮ ಮುಖಂಡರನ್ನು ಕರೆದೊಯ್ಯುತ್ತಿದ್ದ ಪೋಲೀಸರನ್ನು ಶಾಂತಿಯುತವಾಗಿಯೇ ಹಿಂಬಾಲಿಸಿದರು. ಕ್ರುದ್ಧರಾದ ಪೋಲೀಸರು ಲಾಠೀ ಪ್ರಹಾರ ಆರಂಭಿಸಿದರು. ಕಾರ್ಮಿಕರು ಚದುರಲಿಲ್ಲ, ಗೋಲೀಬಾರ್ ಆರಂಭಿಸಿದರು. ಹಲವು ಸುತ್ತುಗಳ ಪೋಲೀಸ್ ಗುಂಡೇಟಿಗೆ ಇಬ್ಬರು ಕಾರ್ಮಿಕರು, ಮತ್ತು ಮೂರು ವರ್ಷದ ಮಗು ಸರೋಜ ಬಲಿಯಾದರು.

ಮಂಗಳೂರು

1946ರ ಮಂಗಳೂರಿನ ಬೀಡಿಕಾರ್ಮಿಕರ
4 ಆಣೆ ಗೆಕೂಲಿ ಜಾಸ್ತಿ,
3 ತಿಂಗಳ ಬೋನಸ್ಗಾಗಿ
52 ದಿನಗಳ ಧೀರ್ಘ ಮುಷ್ಕರ
(ಇದು ಆಗಿನ ಮದ್ರಾಸ್ ಪ್ರಾಂತ್ಯದ ಬೀಡಿ ಕಾರ್ಮಿಕರ ಜಂಟಿ ಮುಷ್ಕರವಾಗಿತ್ತು)
ಈ ಬಗ್ಗೆ ಸೆಷನ್ಸ್ ನ್ಯಾಯಾಧೀಶರ ತೀರ್ಪು–
4 ಆಣೆಬದಲು 2 ಆಣೆ ಕೂಲಿ ಜಾಸ್ತಿ,
3 ತಿಂಗಳ ಬದಲು 1 ತಿಂಗಳ ಬೋನಸ್



1942ರಿಂದ ಮಂಗಳೂರು ಮತ್ತು ಭದ್ರಾವತಿಗಳಲ್ಲಿ ಮೇದಿನ ಆಚರಿಸಿದ ದಾಖಲೆಗಳಿವೆ. ಆದರೆ ಭದ್ರಾವತಿಯ 1942ರ ರಕ್ತದೋಕುಳಿಯ ಮೇದಿನ ಐತಿಹಾಸಿಕ ಕ್ಷಣ. ಕರ್ನಾಟಕದ ಕಾರ್ಮಿಕರು ವರ್ಗಪ್ರಜ್ಞೆ ಪಡೆಯಲು ಆರಂಭಿಸಿದ್ದರ ಪ್ರತೀಕ



K2

ಸಿಪಿಐ(ಎಂ)ನ 21ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಏರ್ಪಡಿಸಿದ್ದ 'ದುಡಿಯುವ ಜನರ ಹೋರಾಟದ ಕಥೆ' ಎಂಬ ಪೋಸ್ಟರ್‌ಗಳ ಪ್ರದರ್ಶನದಿಂದ ಆರಿಸಿದ ಒಂದು ಪೋಸ್ಟರ್– ಮೇದಿನದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕಾರ್ಮಿಕ ಆಂದೋಲನದ ಆರಂಭದ ದಿನಗಳ ನೆನಪಿನಲ್ಲಿ



ನವ-ಉದಾರವಾದಿ ಆಳ್ವಿಕೆಗೆ ನಿರ್ಣಾಯಕ ಸೋಲುಣ್ಣಿಸಬೇಕು

-ಸಿಐಟಿಯು ಮೇ ದಿನ ಪ್ರಣಾಳಿಕೆ 2016

ಎಲ್ಲ ಶ್ರಮಜೀವಿಗಳ ಜೀವನ ಪರಿಸ್ಥಿತಿಗಳು ಹದಗೆಡುತ್ತಿವೆ, ಇದರ ನಿಜವಾದ ಕಾರಣವನ್ನು ಗುರುತಿಸಬೇಕು, ಅದರ ವಿರುದ್ಧ ಹೋರಾಟಕ್ಕೆ ಸಿದ್ಧವಾಗಬೇಕು ಎಂದು ಸಿಐಟಿಯು ತನ್ನ 2016ರ ಮೇ ದಿನದ ಪ್ರಣಾಳಿಕೆಯಲ್ಲಿ ದೇಶದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಇದಕ್ಕಾಗಿ ಕಾರ್ಮಿಕ ಸಂಘಗಳು ತಾವು ಯಾವುದೇ ಸಂಘಟನೆಗೆ ಸಂಯೋಜಿತರಾಗಿದ್ದರೂ, ಅವುಗಳ ಭೇದ ಭಾವವಿಲ್ಲದೆ ತಮ್ಮ ಐಕ್ಯತೆಯನ್ನು ವಿಸ್ತರಿಸಬೇಕು, ಆಳಗೊಳಿಸಬೇಕು ಮತ್ತು ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ಹಾಗೂ ದೇಶ-ವಿರೋಧಿ ನವ-ಉದಾರವಾದಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟಗಳನ್ನು ಬಲಗೊಳಿಸಬೇಕು. ವಿವಿಧ ವಲಯಗಳ, ವಿವಿಧ ರಾಜ್ಯಗಳ ಕಾರ್ಮಿಕರ, ನೌಕರರ ನಡುವಿನ ಸೌಹಾರ್ದವನ್ನು ಬಲಪಡಿಸಿಕೊಂಡು ತಮ್ಮ ಹಕ್ಕುಗಳು, ಉದ್ಯೋಗಗಳು, ಜೀವನಾಧಾರಗಳು ಮತ್ತು ಜೀವನದ ಪರಿಸ್ಥಿತಿಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಪ್ರತಿರೋಧಿಸಬೇಕು. ಇತರ ಎಲ್ಲ ಶ್ರಮಜೀವಿ ವಿಭಾಗಗಳೊಡನೆ, ಅಂದರೆ ರೈತರು, ಕೃಷಿ ಕೂಲಿಕಾರರು, ಕೈಕಸಬುದಾರರು, ಮತ್ತು ಇತರ ಗ್ರಾಮೀಣ ಕಾರ್ಮಿಕರೊಂದಿಗೆ ಐಕ್ಯತೆಯನ್ನು ಬೆಸೆದು ನವ-ಉದಾರವಾದಿ ಆಳ್ವಿಕೆಯ ವಿರುದ್ಧ ಹೋರಾಟವನ್ನು ಮೇಲಿನ ಹಂತಕ್ಕೆ ಒಯ್ದು ನವ-ಉದಾರವಾದಕ್ಕೆ ಒಂದು ನಿರ್ಣಾಯಕ ಸೋಲುಣ್ಣಿಸಬೇಕು, ಈ ಹೋರಾಟವನ್ನು ಒಡೆಯಲು, ಛಿದ್ರಗೊಳಿಸಲು ಮಾಡುತ್ತಿರುವ ಪ್ರಯತ್ನಗಳು ಯಾವುದೇ ಛಾಯೆಯಲ್ಲಿ ನಡೆಯಲಿ, ತಕ್ಷಣವೇ ಮಧ್ಯಪ್ರವೇಶಿಸಿ ಅವನ್ನೆಲ್ಲ ವಿಫಲಗೊಳಿಸಬೇಕು ಎಂದು ಸಿಐಟಿಯು ಹೇಳಿದೆ.

ಎಲ್ಲ ಶ್ರಮಜೀವಿಗಳ ಜೀವನ ಪರಿಸ್ಥಿತಿಗಳು ಹದಗೆಡುತ್ತಿರಲು ನಿಜವಾದ ಕಾರಣವೆಂದರೆ ಬಂಡವಾಳಶಾಹಿ ವ್ಯವಸ್ಥೆ, ಆ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತಿರುವ ರಾಜಕೀಯ ಮತ್ತು ಅಂತ ರಾಜಕೀಯ ಮಾಡುವ ಶಕ್ತಿಗಳು ಎಂದು ಗುರುತಿಸುತ್ತ ಸಿಐಟಿಯು ಈ ಶೋಷಕ ವ್ಯವಸ್ಥೆಯನ್ನು ಬದಲಿಸುವ ಹೋರಾಟಕ್ಕೆ ಸಿದ್ಧವಾಗಬೇಕು ಎಂದು ಕರೆ ನೀಡಿದೆ.

ಜಾಗತಿಕ ಮಟ್ಟದಲ್ಲಿ, ಆರ್ಥಿಕ ಬಿಕ್ಕಟ್ಟು ಸಡಿಲಗೊಳ್ಳುವ ಯಾವುದೇ ಲಕ್ಷಣಗಳಿಲ್ಲ, ಬದಲಿಗೆ ಅದು ಉಲ್ಬಣಗೊಳ್ಳುತ್ತಿದೆ. ಆಳುವ ವರ್ಗಗಳು ಕಾರ್ಪೊರೇಟ್ ಲಾಭಗಳನ್ನು ರಕ್ಷಿಸಿಕೊಳ್ಳಲು ಎಲ್ಲೆಡೆಗಳಲ್ಲಿ ಬಿಕ್ಕಟ್ಟಿನ ಹೊರೆಗಳನ್ನು 'ಮಿತವ್ಯಯ'ದ ಕ್ರಮಗಳ ಮೂಲಕ ದುಡಿಮೆಗಾರರ ಮೇಲೆ ವರ್ಗಾಯಿಸುತ್ತಿವೆ. ವಾಸ್ತವವಾಗಿ, ಇದು ಇನ್ನೊಂದು ಬಿಕ್ಕಟ್ಟಿಗೆ ನಾಂದಿ ಹಾಕುತ್ತಿದೆ ಎಂದು ಸಿಐಟಿಯು ಮೇದಿನದ ಸಂದರ್ಭದಲ್ಲಿ ವಿಶ್ಲೇಷಿಸಿದೆ.

ಬಂಡವಾಳಶಾಹಿ ವ್ಯವಸ್ಥೆಗೆ ಮಾನವ ಕುಲದ ಒಳಿತಿಗಾಗಿ ಅಮೂಲ್ಯವಾದ ಮಾನವ ಸಂಪನ್ಮೂಲದ ಪೂರ್ಣ ಮತ್ತು ಸರಿಯಾದ ಬಳಕೆ ಮಾಡಿಕೊಳ್ಳುವ ಸಾಮರ್ಥ್ಯ ಇಲ್ಲ ಎಂಬುದು ಬಯಲಾಗುತ್ತಿದೆ. ಅಸಮಾನತೆ ಮತ್ತು ತಾರತಮ್ಯ ಹೊಲಸು ಮಟ್ಟಗಳಿಗೆ ಇಳಿಯುತ್ತಿದೆ. ಹೆಚ್ಚೆಚ್ಚು ಜನವಿಭಾಗಗಳು ಬಂಡವಾಳಶಾಹಿ ಅಭಿವೃದ್ಧಿ ಮಾದರಿಯ ಬಗ್ಗೆ ಭ್ರಮನಿರಸನ ಹೊಂದುತ್ತಿದ್ದಾರೆ, ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ.

ಆದರೆ ಒಂದು ಬಲಿಷ್ಠ ಪ್ರಗತಿಶೀಲ, ಎಡಪಂಥೀಯ ಪರ್ಯಾಯ ವಿಲ್ಲದ್ದರಿಂದಾಗಿ, ಜನತೆಯ ಆಕ್ರೋಶವನ್ನು ಜನಗಳ ನಡುವೆಯೇ ಘರ್ಷಣೆಗಳನ್ನು ಹುಟ್ಟಿಸುವ ದಾರಿಗಳತ್ತ ತಿರುಗಿಸಲಾಗುತ್ತಿದೆ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ.

ಭಾರತದಲ್ಲಿ ಅವಳಿ ಅಪಾಯ

ಭಾರತದಲ್ಲಿ, ಕಾರ್ಮಿಕ ವರ್ಗ ಮತ್ತು ಎಲ್ಲ ಜನವಿಭಾಗಗಳು ಅವಳಿ ಅಪಾಯಗಳನ್ನು ಎದುರಿಸುತ್ತಿವೆ ಎಂದು ಸಿಐಟಿಯು ಮೇದಿನ ಪ್ರಣಾಳಿಕೆ ಎಚ್ಚರಿಸಿದೆ. ಒಂದೆಡೆ ಬಿಜೆಪಿ ನೇತೃತ್ವದ ಸರಕಾರ ನವ-ಉದಾರವಾದಿ ಧೋರಣೆಗಳನ್ನು ಜಿದ್ದಿನಿಂದ ಜಾರಿಗೊಳಿಸುತ್ತಿದೆ, ಇನ್ನೊಂದೆಡೆಯಲ್ಲಿ ಧರ್ಮ, ಜಾತಿ, ಪ್ರದೇಶ ಇತ್ಯಾದಿ ಹೆಸರುಗಳಲ್ಲಿ ಜನರನ್ನು ವಿಭಜಿಸಿ ಈ ಧೋರಣೆಗಳ ವಿರುದ್ಧ ಜನರ ಐಕ್ಯತೆಯನ್ನು ಛಿದ್ರಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಹುಸಿವಿವಾದಗಳನ್ನು ಸೃಷ್ಟಿಸಿ ಜನಗಳ ಗಮನವನ್ನು ಅವರನ್ನು ಕಾಡುತ್ತಿರುವ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುವ ಪ್ರಯತ್ನಗಳು ನಡೆಯುತ್ತಿವೆ.

ದೇಶಪ್ರೇಮದ ಸರ್ಟಿಫಿಕೇಟ್
-ಹಾಸ್ಯಾಸ್ಪದ ಸನ್ನಿವೇಶ

ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಪ್ರಜ್ಞಾಪೂರ್ವಕವಾಗಿಯೇ ದೂರ ನಿಂತಿದ್ದ ಆರೆಸ್ಸೆಸ್ ಈಗ ದೇಶಪ್ರೇಮ ಮತ್ತು ರಾಷ್ಟ್ರೀಯವಾದದ ಸರ್ಟಿಫಿಕೇಟ್‌ಗಳನ್ನು ಹಂಚುವ ಅಧಿಕಾರ ಕೇವಲ ತನ್ನದು ಎಂಬಂತೆ ವರ್ತಿಸುತ್ತಿದೆ. ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಮಾರಕವಾದ ಧೋರಣೆಗಳನ್ನು ಅನುಸರಿಸುವ ಸರಕಾರದ ನೇತೃತ್ವ ವಹಿಸಿರುವ ಬಿಜೆಪಿ ಈ ರಾಷ್ಟ್ರ-ವಿರೋಧಿ ಧೋರಣೆಗಳನ್ನು ಪ್ರಶ್ನಿಸುತ್ತಿರುವವರ ದೇಶಪ್ರೇಮವನ್ನೇ ಪ್ರಶ್ನಿಸುತ್ತಿದೆ. ಇದು ನಿಜಕ್ಕೂ ಹಾಸ್ಯಾಸ್ಪದ ಎಂದು ಸಿಐಟಿಯು ಮೇದಿನದ ಪ್ರಣಾಳಿಕೆಯಲ್ಲಿ ಹೇಳಿದೆ.

ಹಿಂದುತ್ವ ಶಕ್ತಿಗಳ ಕೋಮುವಾದಿ, ಫ್ಯಾಸಿಸ್ಟ್ ಮಾದರಿಯ ಕೃತ್ಯಗಳು ಅಲ್ಪಸಂಖ್ಯಾತ ಮೂಲಭೂತವಾದ ಮತ್ತು ಭಯೋತ್ಪಾದನೆಯ ಅಪಾಯವನ್ನು ಹೆಚ್ಚಿಸುತ್ತಿದೆ ಎಂದು ಕಾರ್ಮಿಕ ವರ್ಗವನ್ನು ಎಚ್ಚರಿಸಿರುವ ಸಿಐಟಿಯು, ಬಹುಸಂಖ್ಯಾತ ಕೋಮುವಾದ ಮತ್ತು ಅಲ್ಪಸಂಖ್ಯಾತ ಮೂಲಭೂತವಾದ ಎರಡೂ ಪರಸ್ಪರ ಪೋಷಿಸಿಕೊಂಡು ಬೆಳೆಯುತ್ತವೆ, ಈ ಶಕ್ತಿಗಳೆರಡೂ ಜನಗಳ ಗಮನವನ್ನು ಬೇರೆಡೆಗೆ ಸೆಳೆದು ಅವರ ದೈನಂದಿನ ಪ್ರಶ್ನೆಗಳ ಮೇಲಿನ ಹೋರಾಟದಲ್ಲಿ ಐಕ್ಯತೆಯನ್ನು ಛಿದ್ರಗೊಳಿಸುತ್ತವೆ, ಅಂತಿಮವಾಗಿ ಶೋಷಕ ವರ್ಗಗಳಿಗೆ ನೆರವಾಗುತ್ತವೆ ಎಂಬ ತನ್ನ ವಿಚಾರವನ್ನು ಪುನರುಚ್ಚರಿಸಿದೆ.

ಕೋಮುವಾದಿ, ಸಂಕುಚಿತ ದೃಷ್ಟಿಯ ಮತ್ತು ಛಿದ್ರಕಾರಿಯಾಗಿರುವ ಶಕ್ತಿಗಳಿಗೆ ಎದುರಾಗಿ ಕಾರ್ಮಿಕ ವರ್ಗದ ಮತ್ತು ಜನತೆಯ ಐಕ್ಯತೆಯನ್ನು ರಕ್ಷಿಸಿಕೊಳ್ಳುವುದು, ವಿಸ್ತರಿಸುವುದು ಮತ್ತು ಕ್ರೋಡೀಕರಿಸುವುದು ಜನರ ಸಂಕಟಗಳನ್ನು ಹೆಚ್ಚಿಸುತ್ತಿರುವ ನವ-ಉದಾರವಾದಿ ಧೋರಣೆಗಳು ಮತ್ತು ಅದರ ರಾಜಕೀಯ ಪ್ರತಿಪಾದಕರ ವಿರುದ್ಧ ಹೋರಾಟದ ಅವಿಭಾಜ್ಯ ಅಂಗ ಎಂಬ ತನ್ನ ನಂಬಿಕೆಯನ್ನು ಸಿಐಟಿಯುನ 2016ರ ಮೇದಿನ ಪ್ರಣಾಳಿಕೆ ಪುನರುಚ್ಚರಿಸಿದೆ.

ಆದ್ದರಿಂದ ನವ-ಉದಾರವಾದ ಮತ್ತು ಎಲ್ಲ ಬಣ್ಣಗಳ ಮೂಲಭೂತವಾದಗಳ ವಿರುದ್ಧ ಹೋರಾಟಗಳಲ್ಲಿ ಶ್ರಮಜೀವಿಗಳನ್ನು ಒಂದುಗೂಡಿಸುವ, ವರ್ಗ ಬಲಾಬಲವನ್ನು ದುಡಿಯುವ ಜನಗಳ ಪರವಾಗಿ ಬದಲಿಸಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಕಟ್ಟುವ ಕರ್ತವ್ಯ ಕಾರ್ಮಿಕ ವರ್ಗದ ಮುಂದಿದೆ ಎಂದು ಸಿಐಟಿಯು ಮೇದಿನ 2016ರ ಸಂದರ್ಭದಲ್ಲಿ ನೆನಪಿಸಿಕೊಂಡಿದೆ.

ಈ ದಿಕ್ಕಿನಲ್ಲಿ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಒಕ್ಕೂಟಗಳು ಒಂದುಗೂಡಿ ಸೆಪ್ಟಂಬರ್ 2, 2016ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿವೆ. ಈ ಮುಷ್ಕರ ಕೇವಲ ಕಾರ್ಮಿಕ ವರ್ಗದ ಬೇಡಿಕೆಗಳನ್ನಷ್ಟೇ ಅಲ್ಲ, ಎಲ್ಲ ಜನವಿಭಾಗಗಳ ಮತ್ತು ದೇಶದ ಆರ್ಥಿಕ ಸ್ವಾವಲಂಬನೆ ಮತ್ತು ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಯ ಬೇಡಿಕೆಗಳನ್ನೂ ಎತ್ತಿಕೊಂಡಿದೆ. ಆದ್ದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನಸಾಮಾನ್ಯರು ಇದಕ್ಕೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಸಿಐಟಿಯು ಮೇದಿನದ ಪ್ರಣಾಳಿಕೆ ಕರೆ ನೀಡಿದೆ. o

ಬಂಡವಾಳಶಾಹಿ ಅಭಿವೃದ್ಧಿ ಮಾದರಿಯ ಫಲಿತಾಂಶ ಎಂದರೆ ಅಸಮಾನತೆ ಮತ್ತು ತಾರತಮ್ಯ ಹೊಲಸು ಮಟ್ಟಗಳನ್ನು ತಲುಪಿರುವುದು.

* ಜಗತ್ತಿನ ಕೇವಲ 62 ಅತಿ ಶ್ರೀಮಂತ ಜನರ ಸಂಪತ್ತು ಜಗತ್ತಿನ ಜನಸಂಖ್ಯೆಯ 50 ಶೇ.ದಷ್ಟು ಮಂದಿಯ ಒಟ್ಟು ಸಂಪತ್ತಿಗಿಂತ ಹೆಚ್ಚಿದೆ.
* 1ಶೇ. ಮಂದಿಯ ಬಳಿಯಿರುವ ಸಂಪತ್ತು ಉಳಿದ 99ಶೇ. ಮಂದಿಯ ಒಟ್ಟು ಸಂಪತ್ತಿಗಿಂತಲೂ ಹೆಚ್ಚು.
* ಅತಿ ಬಡತನದಲ್ಲಿರುವ 50ಶೇ. ಮಂದಿಯ ಆಸ್ತಿಇಗಳ ಮೊತ್ತಕಳೆದ ಐದೇ ವರ್ಷಗಳಲ್ಲಿ 41ಶೇ.ದಷ್ಟು ಇಳಿದಿದೆ.

ಭಾರತದಲ್ಲಂತೂ ಇದು ಇನ್ನಷ್ಟು ಹೊಲಸು ಮಟ್ಟದಲ್ಲಿದೆ.

* 1ಶೇ. ಅತಿಶ್ರೀಮಂತರು ದೇಶದ ಒಟ್ಟು ಸಂಪತ್ತಿನ 53ಶೇ.ದಷ್ಟು ಕೇವಲ 1ಶೇ. ಅತಿ ಶ್ರೀಮಂತರ ಒಡೆತನದಲ್ಲಿ ಇದೆ.
* 10ಶೇ. ಶ್ರೀಮಂತರು 76.3ಶೇ. ಸಂಪತ್ತನ್ನು ಬಾಚಿಕೊಂಡಿದ್ದಾರೆ.

-ಸಿಐಟಿಯು ಮೇದಿನದ ಪ್ರಣಾಳಿಕೆ

ಬಂಡವಾಳಶಾಹಿ ಬರ್ಬರತೆ ಹುಟ್ಟು ಹಾಕಿರುವ ಬಡತನ ಮತ್ತು ಯುದ್ಧಗಳ ವಿರುದ್ಧ ಹೋರಾಟಗಳಿಗೆ ಸಜ್ಜುಗೊಳ್ಳಬೇಕಾಗಿದೆ

-ಡಬ್ಲ್ಯುಎಫ್‌ಟಿಯು ಮೇದಿನ ಸಂದೇಶ

ನಮ್ಮ ಜಗತ್ತಿನ ಈಗಿನ ವಾಸ್ತವತೆಯೆಂದರೆ ಒಂದೆಡೆಯಲ್ಲಿ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಪ್ರಗತಿ ಮತ್ತು ನಾವು ಉತ್ಪಾದಿಸುವ ಸಂಪತ್ತು, ತದ್ವಿರುದ್ಧವಾಗಿ ಇನ್ನೊಂದೆಡೆಯಲ್ಲಿ ಜನಗಳಿಗೆ ಸಂಕಟ, ನಿರುದ್ಯೋಗ, ಬಡತನ ಮತ್ತು ಯುದ್ಧ-ಇದು ಬಂಡವಾಳಶಾಹಿ ಉತ್ಪಾದನಾ ವಿಧಾನ ಕೊಳೆತು ನಾರುತ್ತಿದೆ ಎಂಬುದನ್ನು ಸಾಬೀತು ಮಾಡುತ್ತಿದೆ. ಈ ಬಂಡವಾಳಶಾಹಿ ಬರ್ಬರತೆ-ಯ ವಿರುದ್ಧ, ಶೋಷಣೆಯ ವಿರುದ್ಧ ಕಾರ್ಮಿಕ ಆಂದೋಲನ ವಿವಿಧ ಜನವಿಭಾಗಗಳೊಂದಿಗೆ ಸಾಮಾಜಿಕ ಮೈತ್ರಿಯನ್ನು ಬೆಸೆಯಬೇಕು ಎಂದು ಮೇದಿನ 2016ರ ಸಂದೇಶದಲ್ಲಿ ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ, ಡಬ್ಲ್ಯುಎಫ್‌ಟಿಯು ಕರೆ ನೀಡಿದೆ.

ಮೇದಿನ ಎಂದರೆ ಬಹುರಾಷ್ಟ್ರೀಯ ಕಂಪನಿಗಳಿಗೆ, ನವ-ಫ್ಯಾಸಿಸ್ಟ್ ಮತ್ತು ಜನಾಂಗದ್ವೇಷಿ ಶಕ್ತಿಗಳಿಗೆ , ಸಾಮ್ರಾಜ್ಯಶಾಹಿ ಕುತಂತ್ರಿಗಳಿಗೆ ಭಯ. ಏಕೆಂದರೆ ಇದು ಅಂತರರಾಷ್ಟ್ರೀಯತೆಯ, ಹೋರಾಟದ ಮತ್ತು ವರ್ಗಐಕ್ಯತೆಯ ಸಂಕೇತ ಎಂದು 126 ದೇಶಗಳಲ್ಲಿ 9.2 ಕೋಟಿ ಸದಸ್ಯತ್ವವನ್ನು ಹೊಂದಿರುವ ಡಬ್ಲ್ಯುಎಫ್‌ಟಿಯು ಹೇಳಿದೆ.

ಇವು ನಮ್ಮ ಅತ್ಯಂತ ಶಕ್ತಿಶಾಲಿ ಸಾಧನಗಳು, ಇವುಗಳ ಮೂಲಕ ನಮ್ಮ ಬದುಕನ್ನು ಉತ್ತಮಗೊಳಿಸುವ, ಹಾಗೂ ಬಂಡವಾಳಶಾಹಿ ಬರ್ಬರತೆ ಹುಟ್ಟು ಹಾಕಿರುವ ಬಡತನ ಮತ್ತು ಯುದ್ಧಗಳ ವಿರುದ್ಧ ಹೋರಾಟಗಳಿಗೆ ಸಜ್ಜುಗೊಳ್ಳಬೇಕಾಗಿದೆ ಎಂದು ಅದು ಹೇಳಿದೆ.

ಈ ಸಂದರ್ಭದಲ್ಲಿ ಅದು ಸಾಮ್ರಾಜ್ಯಶಾಹಿ ದಾಳಿಗಳಿಗೆ ತುತ್ತಾಗಿರುವ ಪ್ಯಾಲೆಸ್ತೀನ್, ಲಿಬ್ಯ, ಸಿರಿಯ, ಲೆಬನಾನ್, ಇರಾಕ್, ಅಫಘಾನಿಸ್ತಾನ ಮತ್ತು ಯೆಮೆನ್‌ನ ಜನಗಳಿಗೆ ಅಂತರ್ರಾಷ್ಟ್ರೀಯ ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಈ ವರ್ಷ, 2016ರಲ್ಲಿ ಡಬ್ಲ್ಯು ಎಫ್‌ಟಿಯುನ 17ನೇ ವಿಶ್ವ ಸಮ್ಮೇಳನ ದಕ್ಷಿಣ ಆಫ್ರಿಕಾದ



ಡರ್ಬಾನ್‌ನಲ್ಲಿ ನಡೆಯಲಿದೆ. ಅಕ್ಟೋಬರ್5ರಿಂದ 8ರ ವರೆಗೆ ಜಗತ್ತಿನೆಲ್ಲೆಡೆಗಳಿಂದ ಸಾವಿರಾರು ಸಮರಧೀರ ಕಾರ್ಮಿಕ ಮುಖಂಡರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ, ಜಾಗತಿಕ ಮತ್ತು ಪ್ರಾದೇಶಿಕ ಬೆಳವಣಿಗೆಗಳನ್ನು ವಿಶ್ಲೇಷಿಸಲಿದ್ದಾರೆ, ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ ಮತ್ತು ಮುಂದಿನ ಐದು ವರ್ಷಗಳ ಕಾರ್ಯತಂತ್ರವನ್ನು ರೂಪಿಸಲಿದ್ದಾರೆ ಎಂದು ಡಬ್ಲ್ಯುಎಫ್‌ಟಿಯುನ ಮೇದಿನದ ಸಂದೇಶ ಹೇಳಿದೆ.

ದಲಿತ ಸಮುದಾಯಕ್ಕೆ ಸಂಪತ್ತಿನ ಹಂಚಿಕೆಯಾಗುಂತೆ ಮತ್ತು ಸಮಾನತೆ ಸಾಧಿಸಲನುವಾಗುವಂತೆ ಅಂಬೇಡ್ಕರ್ ಚಿಂತಿಸಿದ ಹಾಗೂ ಸೂಚಿಸಿದ ಕ್ರಮಗಳಿಗೂ ಕಮ್ಯೂನಿಸ್ಟ್ ಪಕ್ಷ ಸೂಚಿಸಿದ ಕ್ರಮಗಳಿಗೂ ಸಮಾಜವಾದಿ ಪಕ್ಷವೂ ಸೇರಿದಂತೆ ಬೇರಾವ ಪಕ್ಷಗಳಿಗಿಂತ ಹೆಚ್ಚು ಸಾಮ್ಯತೆ ಇದೆ. ಆರ್ಥಿಕತೆ–ಯ ಜೀವಾಳವಾದ ಅಂಗಗಳು ಸರ್ಕಾರದ ಅಧೀನದಲ್ಲಿದ್ದರೆ ಮಾತ್ರ ಮೀಸಲಾತಿ ಅವಕಾಶಗಳು ಪೂರ್ಣವಾಗಿ ಲಭ್ಯವಾಗುವುದು ಎಂಬ ಬಗ್ಗೆ ಅವರಿಗೆ ಚೆನ್ನಾಗಿ ಅರಿವಿತ್ತು. ಅದೇ ರೀತಿ ಭೂಮಿಯ ಸಮಾನ ಹಂಚಿಕೆ ಮತ್ತು ಸಮುದಾಯ ಕೃಷಿ ಮಾತ್ರವೇ ಗ್ರಾಮೀಣ ದಲಿತರಿಗೆ ಸಮಾನತೆಯನ್ನು ತಂದುಕೊಡಬಲ್ಲದು ಎಂಬುದು ಅವರ ಅಭಿಪ್ರಾಯವಾಗಿತ್ತು. ಕಮ್ಯೂನಿಸ್ಟರು ನಿರಂತರವಾಗಿ ಮೀಸಲಾತಿಯ ವಿವಿಧ ಆಯಾಮಗಳ ಬೆಂಬಲಿಗರಾಗಿದ್ದಾರೆ. ಮೀಸಲಾತಿ ವಿರೋಧಿಗಳನ್ನು ಎದುರಿಸುತ್ತಾ ಬಂದಿದ್ದಾರೆ. ಖಾಸಗಿ ವಲಯದಲ್ಲಿ ಮೀಸಲಾತಿಗಾಗಿಯೂ ಒತ್ತಾಯ, ಹೋರಾಟ ನಡೆಸಿದ್ದಾರೆ. ಖೋತಿ ಮತ್ತು ಮಹಾರ್ ವತನ್ ಗಳ ವಿರುದ್ಧ ಹೋರಾಟ ಕೈಗೊಂಡ ಅಂಬೇಡ್ಕರ್ ಮತ್ತು ಭೂಮಿಯ ಸಮಾನ ಹಂಚಿಕೆಯನ್ನು ಬಯಸುವ ಅಂಬೇಡ್ಕರ್‌ರವರ ಚಿಂತನೆಗೂ ಕಮ್ಯೂನಿಸ್ಟರ ಚಿಂತನೆಗೂ ವ್ಯತ್ಯಾಸವೆಲ್ಲಿದೆ.?

ಅಂಬೇಡ್ಕರ್ ಮತ್ತು ಎಡಪಂಥ : ಭಾಗ–4

ಆರ್ಥಿಕ ಚಿಂತನೆಗಳಲ್ಲಿ ಸಾಮ್ಯ

ಜಿ.ಎನ್. ನಾಗರಾಜ

5. ಕಮ್ಯೂನಿಸ್ಟ್ ಸಿದ್ಧಾಂತಗಳ ವಿರೋಧ:

ಅಂಬೇಡ್ಕರ್ ರವರು ಕಮ್ಯೂನಿಸ್ಟ್ ಸಿದ್ಧಾಂತಗಳಿಂದ ಪ್ರಭಾವಿತರಾಗಿರುವುದು ಅದ–ರಿಂದ ಪ್ರೇರಿತರಾಗಿ ಹಲವು ನಿಲುವುಗಳು ಮತ್ತು ವಿಚಾರಗಳನ್ನು ರೂಪಿಸಿಕೊಂಡಿರುವುದನ್ನು ಅನೇಕ ಅಧ್ಯಯನಕಾರರು ಗುರುತಿಸಿದ್ದಾರೆ. ಮಾರ್ಕ್ಸ್‌ವಾದದ ನಾಲ್ಕು ಬೆಂಕಿಯ ಕಿಡಿಗಳು ಎಂದು ಕೆಲ ವಿಚಾರಗಳನ್ನು ವರ್ಣಿಸಿದ್ದಾರೆ. ಆದರೆ ಕಮ್ಯೂನಿಸ್ಟರು ಪ್ರತಿಪಾದಿಸುವ ಕಾರ್ಮಿಕರ ಪ್ರಭುತ್ವ ಎಂಬುದು ಆರಂಭದಲ್ಲಿ ಸರ್ವಾಧಿಕಾರ ರೂಪವನ್ನು ತಳೆಯುತ್ತದೆ ಮೊದಲಾದ ಕೆಲ ವಿಷಯಗಳಿಗೆ ಅವರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ಅಂಶಗಳ ಜೊತೆಗೆ ಅವರು ಅಮೇರಿಕದಲ್ಲಿ ತಮ್ಮ ಸ್ನಾತಕ ವಿದ್ಯಾಭ್ಯಾಸ ಮಾಡುವಾಗ ಅವರ ಮಾರ್ಗದರ್ಶಕರು ಮತ್ತು ಮುಖ್ಯ ಪ್ರಾಧ್ಯಾಪಕರಾದ ಸೆಲಿಗ್ಮನ್ ಮತ್ತು ಜಾನ್ ಡೂಯಿ ರವರು ಕಟ್ಟಾ ಕಮ್ಯೂನಿಸ್ಟ್ ವಿರೋಧಿಗಳಾಗಿದ್ದರು. ಚೀನಾದಲ್ಲಿ ಕ್ರಾಂತಿ ನಡೆಯುವಾಗ ಅದನ್ನು ವಿರೋಧಿಸಿ ಅಲ್ಲಿಯ ಹಲವು ವಿವಿಗಳು ಮತ್ತು ನಗರಗಳಲ್ಲಿ ಕಮ್ಯೂನಿಸಂ ವಿರುದ್ಧವಾಗಿ ಪ್ರಚಾರ ಭಾಷಣಗಳನ್ನು ಮಾಡಿದ್ದವರು. ಅವರ ಕಮ್ಯೂನಿಸ್ಟ ವಿರೋಧಿ ವಿಚಾರಗಳು ಅಂಬೇಡ್ಕರ್ ರವರ ಮೇಲೆ ಗಾಢ ಪ್ರಭಾವ ಬೀರಿವೆ. ಆದ್ದರಿಂದ ಕಮ್ಯೂನಿಸಂನ ಹಲವು ಸಿದ್ಧಾಂತಗಳ ಬಗ್ಗೆ ಪೂರ್ವಾಗ್ರಹ ಬೆಳೆಯಿತು. ಬ್ರಿಟನ್ನಿನಲ್ಲಿಯೂ ಅವರು ಅಧ್ಯಯನ ಮಾಡುತ್ತಿದ್ದ ಲಂಡನ್ ಎಕಾನಮಿಕ್ ಅಂಡ್ ಪೊಲಿಟಿಕಲ್ ಸ್ಕೂಲ್ ಎಂಬ ಸಂಸ್ಥೆಯೇ ಫೇಬಿಯನ್ ಎಂಬ ಕಮ್ಯೂನಿಸ್ಟ್ ವಿರೋಧಿ ಸಿದ್ಧಾಂತದ ಉಗಮ ಸ್ಥಾನವಾಗಿತ್ತು. ಆ ಮೂಲಕ ಅಂಬೇಡ್ಕರ್ ರವರಮೇಲೆ ಕಮ್ಯೂನಿಸ್ಟ್ ವಿರೋಧಿ ಸಿದ್ಧಾಂತಗಳ ಪ್ರಭಾವ ಮತ್ತಷ್ಟು ಗಾಢವಾಯಿತು. ಅವರ ಚಿಂತನೆಗಳು ಮತ್ತು ಬರಹಗಳ ಮೇಲೆ ಮಾರ್ಕ್ಸ್‌ವಾದದ ಪ್ರಭಾವವನ್ನು ಹಲವರು ಗುರುತಿಸಿದ್ದಾರೆ. ಆದರೆ ಅದೇ ಸಮಯದಲ್ಲಿ ಅದಕ್ಕೆ ಬದ್ಧ ವಿರೋಧವೂ ಹಲವು ಸಂದರ್ಭಗಳಲ್ಲಿ ವ್ಯಕ್ತವಾಗಿದೆ.

6. ಕಹಿ ಭಾವನೆಗಳ ಬೆಳವಣಿಗೆ :

ಈ ಎಲ್ಲಾ ಪ್ರಸಂಗಗಳು ಪರಸ್ಪರರಲ್ಲಿ ಕಹಿ ಭಾವನೆಯನ್ನು ಬೆಳೆಸಿದವು. ಅದನ್ನು ತಿಳಿಗೊಳಿಸಲು ಮತ್ತು ಭಾರತದ ಕ್ರಾಂತಿಕಾರೀ ಪ್ರಕ್ರಿಯೆಯಲ್ಲಿ ದಲಿತರ ಮುಖ್ಯ ಪಾತ್ರವಿದೆ ಎಂಬುದನ್ನು ಮನಗಂಡು ಅಂಬೇಡ್ಕರ್ ರವರ ಜೊತೆ ಮತ್ತು ಅವರು ನೇತೃತ್ವ ವಹಿಸಿದ ಹೋರಾಟಗಳ ಜೊತೆ ಬಾಂಧವ್ಯವನ್ನು ಬೆಳೆಸಲು ಕಮ್ಯೂನಿಸ್ಟ್ ಪಕ್ಷ ಪ್ರಯತ್ನಿಸಲಿಲ್ಲ ಎಂಬುದು ಅತ್ಯಂತ ವಿಷಾದಕರವಾದದ್ದು ಎಂಬುದನ್ನು ಕಮ್ಯೂನಿಸ್ಟ್ ಪಕ್ಷ ವಿಮರ್ಶೆ ಮಾಡಿಕೊಂಡಿದೆ. ಆದರೆ ಈ ಕಹಿ ಭಾವನೆಗಳು ಎಂತಹ ಮಟ್ಟಕ್ಕೆ ಹೋಯಿತೆಂದರೆ ಕಮ್ಯೂನಿಸ್ಟ್ ಚಳುವಳಿಗಳಲ್ಲಿ ಭಾಗವಹಿಸಿದ ಅಸ್ಪೃಶ್ಯ ಕಾರ್ಯಕರ್ತರನ್ನು ಅವರ ಜಾತಿಗಳಿಂದ ಬಹಿಷ್ಕರಿಸಲಾಯಿತು. ಅದಕ್ಕೆ ಮಹಾಡ್ ಸತ್ಯಾಗ್ರಹದಲ್ಲಿ ಅದರ ಮುಖ್ಯ ಸಂಘಟಕರಾದ, ಖೋತಿ ಮತ್ತು ಮಹಾರ್ ವತನ್ ಚಳುವಳಿಯಲ್ಲಿಯೂ ಭಾಗವಹಿಸಿದ್ದ ಅಂಬೇಡ್ಕರ್‌ರವರ ಸಹಾಯಕರಾಗಿದ್ದ ರಾಮಚಂದ್ರ ಮೋರೆಯಂತಹವರನ್ನೂ ಕೂಡ ಗುರಿಪಡಿಸಲಾಯಿತು.

ಮೊದಲ ಚುನಾವಣೆಗಳು

ಮುಂದೆ 1952 ರಲ್ಲಿ ಭಾರತ ಗಣರಾಜ್ಯದ ಮೊದಲ ಸಂಸತ್ತಿಗೆ ಚುನಾವಣೆಗಳು ನಡೆಯುವ ಸಮಯಕ್ಕೆ ಕಮ್ಯೂನಿಸ್ಟ್ ಪಕ್ಷಕ್ಕೆ ಸಂದಿಗ್ಧ ಕಾಲ. ಎರಡನೇ ಮಹಾಯುದ್ಧದ ಸಮಯದಲ್ಲಿ ಚಲೇಜಾವ್ ಚಳುವಳಿಯನ್ನು ವಿರೋಧಿಸಿ ಹಿಟ್ಲರ್ ನನ್ನು ಸೋಲಿಸುವುದೇ ಮಹತ್ವದ ಕರ್ತವ್ಯ ಎಂದುದಕ್ಕಾಗಿ ದೇಶದ್ರೋಹಿಗಳು ಎಂಬ ಕಾಂಗ್ರೆಸ್ ಅಪಪ್ರಚಾರಕ್ಕೆ ಹಲವು ಕಡೆ ಪಕ್ಷದ ಕಛೇರಿಗಳ ಮೇಲೆ ದಾಳಿಯಾಗಿತ್ತು. ಅದನ್ನು ಎದುರಿಸಿ 1945 ರಲ್ಲಿ ಎರಡನೇ ಮಹಾಯುದ್ಧ ಕೊನೆಯಾಗುವ ಸಮಯದಿಂದ ದೇಶದ ಹಲವು ಕಡೆಗಳಲ್ಲಿ ವ್ಯಾಪಕ ಮತ್ತು ಸಮರಧೀರ ರೈತ ಚಳುವಳಿಗೆ ನೇತೃತ್ವ ಕೊಟ್ಟು ಅಲ್ಲೆಲ್ಲ ಜಮೀನುದಾರಿಕೆಗೆ ದೊಡ್ಡ ಪೆಟ್ಟು ನೀಡಿತ್ತು. ಕಾರ್ಮಿಕ ಚಳುವಳಿಗಳೂ ಉಕ್ಕಿ ಹರಿದವು. ಆದರೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಈ ಚಳುವಳಿಗಳ ತೀವ್ರತೆಗೆ ಬೆದರಿದ ನೆಹರೂ ಸರ್ಕಾರ ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿತು. ತೆಲಂಗಾಣ ಹೋರಾಟವನ್ನು ಬಗ್ಗು ಬಡೆಯಲು ಸೈನ್ಯವನ್ನೇ ನುಗ್ಗಿಸಿತು. ಈ ಎಲ್ಲ ಸಂಗತಿಗಳು ಪಕ್ಷದ ನಾಯಕತ್ವದಲ್ಲಿ ತೀವ್ರ ಬಿಕ್ಕಟ್ಟಿಗೆ ಮತ್ತು ಅಂತರಿಕ ಸಂಘರ್ಷಕ್ಕೆ ಕಾರಣವಾಗಿತ್ತು. 1948 ರಿಂದ 1952 ರವರೆಗೂ ಈ ನಿಷೇಧದ ಫಲವಾಗಿ ಸಾವಿರಾರು ಕಮ್ಯೂನಿಸ್ಟ್ ಕಾರ್ಯಕರ್ತರು, ನಾಯಕರು ಜೈಲು ಪಾಲಾದರು. ನೂರಾರು ಕಮ್ಯೂನಿಸ್ಟರು ಜೈಲು ಅಧಿಕಾರಿಗಳ ಹಿಂಸಾಚಾರಕ್ಕೆ ಪ್ರಾಣ ತೆತ್ತರು. ಕಮ್ಯೂನಿಸ್ಟ್ ಪಕ್ಷದ ಮೇಲಿನ ಈ ನಿಷೇಧವನ್ನು ಅಂದು ನೆಹರೂ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಅಂಬೇಡ್ಕರ್ ರವರು ವಿರೋಧಿಸಲಿಲ್ಲ. ಜೈಲುಗಳಲ್ಲಿ ಕಮ್ಯೂನಿಸ್ಟರ ಮೇಲೆ ನಡೆಸಿದ ಹಿಂಸಾಚಾರವನ್ನು ಖಂಡಿಸಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ 1952ರಲ್ಲಿ ಮೊದಲ ಮಹಾ ಚುನಾವಣೆಗಳು ಘೋಷಿತವಾದವು. ಇಂತಹ ಮಹಾ ಸವಾಲುಗಳನ್ನು ಎದುರಿಸಿಯೂ ಅಂದು ದೇಶದ ಹಲವು ರಾಜ್ಯಗಳಲ್ಲಿ ನೆಲೆಯನ್ನು ಹೊಂದಿದ್ದ ಮತ್ತು ಕಾಂಗ್ರೆಸ್ ಪಕ್ಷದ ಜನಪ್ರಿಯತೆಯನ್ನೂ ಬೇಧಿಸುವ ಶಕ್ತಿಯಿದ್ದ ರಾಜಕೀಯ ಪಕ್ಷವೆಂದರೆ ಕಮ್ಯೂನಿಸ್ಟ್ ಪಕ್ಷ ಮಾತ್ರವೇ. ಆದರೆ ಅಂಬೇಡ್ಕರ್ ರವರು ಕಾಂಗ್ರೆಸ್ ಮಾತ್ರವೇ ಅಲ್ಲ ಕಮ್ಯೂನಿಸ್ಟ್ ಪಕ್ಷದ ಜೊತೆಗೂ ಯಾವುದೇ ಚುನಾವಣಾ ಮೈತ್ರಿ ಮಾಡಿಕೊಳ್ಳುವುದಿಲ್ಲವೆಂದು ಘೋಷಿಸಿದರು. ಇನ್ನು ಎಡಪಕ್ಷಗಳಲ್ಲಿ ಒಂದಾದ ಸಮಾಜವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡರು. ಹೀಗೆ ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ರವರ ಮತ್ತು ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗಳು ಮುಖಾಮುಖಿಯಾದರು. ಆ ಚುನಾವಣೆಗಳಲ್ಲಿ ಒಂದೇ ಕ್ಷೇತ್ರದಿಂದ ಎರಡು ಸದಸ್ಯರ ಆಯ್ಕೆಗೆ, ಪ್ರತಿ ಮತದಾರರಿಗೂ ಎರಡು ಮತಗಳು ಇದ್ದ ಕೆಲವು ಲೊಕಸಭಾ ಕ್ಷೇತ್ರಗಳಿದ್ದವು. ಅದರಲ್ಲಿ ಅಂಬೇಡ್ಕರ್ ರವರು ಮತ್ತು ಕಮ್ಯೂನಿಸ್ಟ್ ಪಕ್ಷ ಮುಖಾಮುಖಿಯಾಗಿದ್ದ ಲೋಕಸಭಾ ಕ್ಷೇತ್ರವೂ ಒಂದು. ಆಗ ಕಮ್ಯೂನಿಸ್ಟ್ ಪಕ್ಷದೊಡನೆ ಮೈತ್ರಿಯನ್ನು ನಿರಾಕರಿಸಿದ್ದರೂ ಕೂಡ ಎರಡು ಮತಗಳಲ್ಲಿ ಒಂದು ಮತವನ್ನು ಅಂಬೇಡ್ಕರ್ ರವರಿಗೆ ಕೊಡುವ ಅವಕಾಶವಿತ್ತು. ಆದರೆ ಕಮ್ಯೂನಿಸ್ಟ್ ಪಕ್ಷದೊಂದಿಗೆ ಮೈತ್ರಿ ನಿರಾಕರಿಸಿದ್ದರೆಂಬ ಕಾರಣ–ಕ್ಕೆ ಒಂದೇ ಮತ ಚಲಾಯಿಸಲಾಯಿತು. ಇದು ಕಮ್ಯೂನಿಸ್ಟ್ ಪಕ್ಷದ ಅಂದಿನ ಮಹರಾಷ್ಟ್ರ ನಾಯಕ–ರಿಂದ ಘಟಿಸಿದ ತಪ್ಪು. ಮೇಲೆ ಹೇಳಿದಂತೆ ಆಗ ಪಕ್ಷದಲ್ಲಿ ಅನೇಕ ವಿಷಯಗಳಿಗೆ ಸಂಬಂಧಿಸಿ ಮೂಡಿದ್ದ ಗೊಂದಲ, ನಾಯಕತ್ವ ಪದೇ ಪದೇ ಬದಲಾವಣೆಗಳಾಗಿದ್ದು ಕೂಡ ಪಕ್ಷದ ಕೇಂದ್ರ ನಾಯಕತ್ವ ಗಮನ ನೀಡಿ ಸರಿಯಾದ ನಿರ್ಣಯ ಕೈಗೊಳ್ಳುವುದಕ್ಕೆ ಅಡ್ಡಿಯಾದಂತೆ ಕಾಣುತ್ತದೆ. ಈ ಪ್ರಸಂಗ ಅಂದಿನಿಂದ ಇಂದಿನವರೆಗೂ, ಈ ಎಲ್ಲಾ ಚಾರಿತ್ರಿಕ ಹಿನ್ನೆಲೆ ಗೊತ್ತಿಲ್ಲದವರ ಮುಂದೆ ಅಂಬೇಡ್ಕರ್ ರವರನ್ನು ಕಮ್ಯೂನಿಸ್ಟರು ಸೋಲಿಸಿದರು ಎಂಬ ಅಪಪ್ರಚಾರ ಮಾಡುವುದಕ್ಕೆ ಕಾರಣವಾಗಿದೆ.

ಕಮ್ಯೂನಿಸ್ಟ್ ಪಕ್ಷದ ಕೇಂದ್ರ ನಾಯಕರೂ ಸೇರಿದಂತೆ ಅನೇಕ ನಾಯಕರು ಜೈಲಿನೊಳಗಿಂದಲೇ ಚುನಾವಣೆಗಳಲ್ಲಿ ಸ್ಪರ್ಧಿಸುವ ಕಠಿಣ ಪರಿಸ್ಥಿತಿಯಲ್ಲಿಯೂ, ಸರಿಯಾದ ಪ್ರಚಾರ ಸಂಘಟಿಸಲಾಗದೆಯೂ ದೇಶದಲ್ಲಿ ಕಾಂಗ್ರೆಸ್ ಬಿಟ್ಟರೆ ಕಮ್ಯೂನಿಸ್ಟ್ ಪಕ್ಷವೇ ದೊಡ್ಡ ಪಕ್ಷವಾಗಿ ಗೆದ್ದು ಬಂದಿತು. ಲೋಕಸಭೆಯಲ್ಲಿಯೂ ಹಲವು ರಾಜ್ಯಗಳಲ್ಲಿಯೂ ಕೂಡ ಪ್ರಮುಖ ವಿರೋಧ ಪಕ್ಷವಾಯಿತು. ಮುಂದಿನ ಚುನಾವಣೆಗಳಲ್ಲಿ ಅಂ–ದರೆ 1957 ರಲ್ಲಿ ಮೊತ್ತ ಮೊದಲ ಬಾರಿಗೆ ಕಾಂಗ್ರೆಸ್ ಎಂಬ ಅಗಾಧ ಶಕ್ತಿಯನ್ನು ಸೋಲಿಸಿತೆಂಬ ಭಾರತ ಪ್ರಸಿದ್ದ ಹಾಗೂ ಚುನಾವಣೆಗಳ ಮೂಲಕ ಅಧಿಕಾರ ಪಡೆದ ಏಕಮಾತ್ರ ಕಮ್ಯೂನಿಸ್ಟ್ ಪಕ್ಷವೆಂಬ ವಿಶ್ವ ಪ್ರಸಿದ್ಧ ಕೀರ್ತಿಗೆ ಪಾತ್ರವಾಗಿದ್ದು ಈಗ ಇತಿಹಾಸ.

ಸ್ವಾತಂತ್ರ್ಯಾನಂತರ

ಸ್ವಾತಂತ್ರ್ಯಾನಂತರ ಕಾಲಘಟ್ಟದ ಭಾರತದಲ್ಲಿ ಸಮಾನತೆಯನ್ನು ಸಾಧಿಸಲು ಅಂಬೇಡ್ಕರ್ ರವರು ಒಂದು ಮುನ್ನೋಟವನ್ನು ಹೊಂದಿದ್ದರು. ಸಂವಿಧಾನ ರಚನೆಯಲ್ಲಿ ಅಪಾರ ಶ್ರಮ ಹಾಕಿದ ಅಂಬೇಡ್ಕರ್ ರವರು ಅದರ ಅನೇಕ ಅನುಚ್ಛೇದಗಳ ಮೂಲಕ ಕಾನೂನಿನ ಮುಂದೆ ಸಮಾನತೆಯನ್ನು ಮತ್ತು ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ರಂಗಗಳಲ್ಲಿ ಮೀಸಲಾತಿ , ಅಸ್ಪೃಶ್ಯತೆಯ ನಿಷೇಧ, ಕಡ್ಡಾಯ ಶಿಕ್ಷಣ ಮೊದಲಾದ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ವಾಸ್ತವಕ್ಕಿಳಿಸಲು ಪ್ರಯತ್ನಿಸಿದರು. ಆದರೆ ಅವರಿಗೆ ಇಷ್ಟೇ ಕ್ರಮಗಳ ಮೂಲಕ ಜಾತಿ ವಿನಾಶವಾಗುವುದಿಲ್ಲ ಮತ್ತು ದಲಿತ ಮತ್ತಿತರ ಹಿಂದುಳಿದ ಜಾತಿಗಳ ಜನ ಸಮುದಾಯಗಳಿಗೆ ಸಮಾನತೆ ದಕ್ಕುವುದಿಲ್ಲವೆಂಬ ಬಗ್ಗೆ ಬಹಳ ಸ್ಪಷ್ಟ ಅರಿವಿತ್ತು. ಪೂರ್ಣ ಸಂವಿಧಾನವನ್ನು ಮಂಡಿಸುವಾಗ ಅವರು ಹೇಳಿದ ಮಾತುಗಳು ಮತ್ತೆ ಮತ್ತೆ ಉಲ್ಲೇಖಗೊಂಡಿವೆ. ಆದರೆ ಅವು ಭಾರತದೆಲ್ಲ ದಲಿತ ಮತ್ತಿತರ ಸಾಮಾಜಿಕ ಚಳುವಳಿಗಳು ಯಾವಾಗಲೂ ತಮ್ಮ ಕಾರ್ಯಸೂಚಿಯ ಭಾಗವಾಗಿಸಿಕೊಳ್ಳಬೇಕಾದ ಗುರಿಯಾಗಿವೆ :

"1956 ರ ಜನವರಿ 26 ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕಿಗೆ ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಪಡೆದಿರುತ್ತೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆ ಮುಂದುವರೆದಿರುತ್ತದೆ."

"ಸಾಮಾಜಿಕ ಪ್ರಜಾತಂತ್ರವಿಲ್ಲದಿದ್ದಲ್ಲಿ ಔಪಚಾರಿಕ ಪ್ರಜಾತಂತ್ರಕ್ಕೆ ಯಾವ ಬೆಲೆಯೂ ಇಲ್ಲ ಮತ್ತದು ಅಸಂಗತವೂ ಆಗಿರುತ್ತದೆ."

ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ನಿವಾರಿಸುವ ಆ ಮೂಲಕ ಸಮಾನತೆಯನ್ನು ಸಾಧಿಸುವ ಬಗ್ಗೆ ತಮ್ಮ ಮುನ್ನೋಟವನ್ನು ಅವರು ತಮ್ಮ ಅಂದಿನ ಸಂಘಟನೆಯಾದ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಪರವಾಗಿ 19466ಲ್ಲಿಯೇ ಸಂವಿಧಾನ ಸಮಿತಿಗೆ ಒಪ್ಪಿಸಿದರು. ಸಂವಿಧಾನ ಕರಡು ರಚನ ಸಮಿತಿಯ ಅಧ್ಯಕ್ಷರಾದ ಅಂಬೆಡ್ಕರ್ ರವರ ಈ ಪ್ರಸ್ತಾವಗಳನ್ನು ಸಂವಿಧಾನ ಸಮಿತಿ ಚರ್ಚೆಗೆ ಎತ್ತಿಕೊಳ್ಳಲಿಲ್ಲ ಎಂಬುದು ಅಸಮಾನತೆಯನ್ನು ಹೋಗಲಾಡಿಸುವ ವಿಷಯದಲ್ಲಿ ತೀವ್ರ ನಿಷ್ಕಾಳಜಿ ತೋರಿದ ಸಂವಿಧಾನ ಸಭೆಯ ಮತ್ತು ಕಾಂಗ್ರಸ್ ಪಕ್ಷದ ಸ್ವರೂಪದ ಲಕ್ಷಣವನ್ನು ಎತ್ತಿ ತೋರಿಸುತ್ತದೆ.

ಆರ್ಥಿಕ ಚಿಂತನೆಯಲ್ಲಿ ಸಾಮ್ಯ

ದಲಿತ ಸಮುದಾಯಕ್ಕೆ ಸಂಪತ್ತಿನ ಹಂಚಿಕೆಯಾಗುಂತೆ ಮತ್ತು ಸಮಾನತೆ ಸಾಧಿಸಲನುವಾಗುವಂತೆ ಅಂಬೇಡ್ಕರ್ ಚಿಂತಿಸಿದ ಹಾಗೂ ಸೂಚಿಸಿದ ಕ್ರಮಗಳಿಗೂ ಕಮ್ಯೂನಿಸ್ಟ್ ಪಕ್ಷ ಸೂಚಿಸಿದ ಕ್ರಮಗಳಿಗೂ ಸಮಾಜವಾದಿ ಪಕ್ಷವೂ ಸೇರಿದಂತೆ ಬೇರಾವ ಪಕ್ಷಗಳಿಗಿಂತ ಹೆಚ್ಚು ಸಾಮ್ಯತೆ ಇದೆ. 'ಪ್ರಭುತ್ವ ಮತ್ತು ಅಲ್ಪಸಂಖ್ಯಾತರು' ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಸಂವಿಧಾನ ಸಭೆಗೆ ಅಂಬೇಡ್ಕರ್ ರವರು ನೀಡಿದ ಪ್ರಸ್ತಾವದಲ್ಲಿ ಎಲ್ಲ ಕೃಷಿ ಭೂಮಿಯ ರಾಷ್ಟ್ರೀಕರಣ ಮತ್ತು ಹಳ್ಳಿಯ ಎಲ್ಲರಿಗೆ ಸಮಾನ ಹಂಚಿಕೆ ಮತ್ತು ಸರ್ಕಾರ ಕೃಷಿ ಸಾಮಗ್ರಿಗಳನ್ನು ಒದಗಿಸುವುದರೊಂದಿಗೆ ಸಾಮೂಹಿಕ ಕೃಷಿ, ವಿಮೆ, ಬ್ಯಾಂಕ್ ಮತ್ತು ಪ್ರಧಾನ ಮತ್ತು ಮೂಲಭೂತ ಕೈಗಾರಿಕೆಗಳ ಮೇಲೆ ಸರ್ಕಾರದ ಒಡೆತನ ಪ್ರಮುಖವಾಗಿವೆ. ಪ್ರಭುತ್ವ ಸಮಾಜವಾದ ಎಂಬ ತತ್ವಕ್ಕೆ ಅನುಗುಣವಾಗಿ ಅವರು ರೂಪಿಸಿದ ಈ ಅಂಶಗಳು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವಂತೆ ಸ್ವಾತಂತ್ರ್ಯ ಬಂದಾಗಿನಿಂದ ಕಮ್ಯೂನಿಸ್ಟ್ ಪಕ್ಷಗಳ ಹೋರಾಟಗಳ ಭಾಗವಾಗಿವೆ. ಆರ್ಥಿಕತೆಯ ಜೀವಾಳವಾದ ಅಂಗಗಳು ಸರ್ಕಾರದ ಅಧೀನದಲ್ಲಿದ್ದರೆ ಮಾತ್ರ ಮೀಸಲಾತಿ ಅವಕಾಶಗಳು ಪೂರ್ಣವಾಗಿ ಲಭ್ಯವಾಗುವುದು ಎಂಬ ಬಗ್ಗೆ ಅವರಿಗೆ ಚೆನ್ನಾಗಿ ಅರಿವಿತ್ತು ಎಂಬುದನ್ನು ಇದು ತೋರಿಸುತ್ತದೆ. ಅದೇ ರೀತಿ ಭೂಮಿಯ ಸಮಾನ ಹಂಚಿಕೆ ಮತ್ತು ಸಮುದಾಯ ಕೃಷಿ ಮಾತ್ರವೇ ಗ್ರಾಮೀಣ ದಲಿತರಿಗೆ ಸಮಾನತೆಯನ್ನು ತಂದುಕೊಡಬಲ್ಲದು ಎಂಬುದು ಅವರ ಅಭಿಪ್ರಾಯವಾಗಿತ್ತು.

ಕಮ್ಯೂನಿಸ್ಟರು ನಿರಂತರವಾಗಿ ಮೀಸಲಾತಿಯ ವಿವಿಧ ಆಯಾಮಗಳ ಬೆಂಬಲಿಗರಾಗಿದ್ದಾರೆ. ಮೀಸಲಾತಿ ವಿರೋಧಿಗಳನ್ನು ಎದುರಿಸುತ್ತಾ ಬಂದಿದ್ದಾರೆ. ಖಾಸಗಿ ವಲಯದಲ್ಲಿ ಮೀಸಲಾತಿಗಾಗಿಯೂ ಒತ್ತಾಯ, ಹೋರಾಟ ನಡೆಸಿದ್ದಾರೆ. ಅದೇ ಸಮಯದಲ್ಲಿ ಮೀಸಲಾತಿ ಒಂದು ತಕ್ಷಣದ ಪರಿಹಾರ ಮಾತ್ರ. ಭೂ ಹಂಚಿಕೆ ಅಂದರೆ ಭೂಮಿ ಮತ್ತಿತರ ಸಂಪತ್ತಿನಲ್ಲಿ ಮೀಸಲಾತಿ ಮಾತ್ರವೇ ದಲಿತರಿಗೆ ನೈಜ ಸಮಾನತೆಯನ್ನು ನೀಡುತ್ತದೆ. ಮಾತ್ರವಲ್ಲ, ಸಮಾಜದ ಮೇಲಿನ ಪಾಳೆಯಗಾರೀ–ಪುರೋಹಿತಶಾಹೀ ಶಕ್ತಿಗಳ ಗೋಣು ಮುರಿದು ಜಾತಿ ವ್ಯವಸ್ಥೆಯನ್ನು ನಿರ್ಮೂಲ ಮಾಡುವ ಸಾಧನವಾಗುತ್ತದೆ ಎಂಬುದು ಕಮ್ಯೂನಿಸ್ಟರ ದೃಢ ವಿಶ್ವಾಸ. ಕೇರಳ ಮತ್ತು ಪ.ಬಂಗಾಳಗಳಲ್ಲಿ ದಲಿತರಿಗೆ ಭೂ ಹಂಚಿಕೆಯ ಮೂಲಕ ಹಳ್ಳಿಗಳಲ್ಲಿ ಪಾಳೆಯಗಾರೀ ಹಿಡಿತವನ್ನು ಸಡಿಲಗೊಳಿಸುವ ಮೂಲಕ ಜಾತಿ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಸಡಿಲಗೊಳಿಸಲು ಸಾಧ್ಯವಾಗಿದೆ. ಅಸ್ಪೃಶ್ಯತೆಯ ಆಚರಣೆಗಳನ್ನು ನಿರ್ಬಂಧಿಸಲು ಸಾಧ್ಯವಾಗಿದೆ. ಖೋತಿ ಮತ್ತು ಮಹಾರ್ ವತನ್ ಗಳ ವಿರುದ್ಧ ಹೋರಾಟ ಕೈಗೊಂಡ ಅಂಬೇಡ್ಕರ್ ಮತ್ತು ಭೂಮಿಯ ಸಮಾನ ಹಂಚಿಕೆಯನ್ನು ಬಯಸುವ ಅಂಬೆಡ್ಕರ್‌ರವರ ಚಿಂತನೆಗೂ ಕಮ್ಯೂನಿಸ್ಟರ ಚಿಂತನೆಗೂ ವ್ಯತ್ಯಾಸವೆಲ್ಲಿದೆ.?

(ಮುಂದಿನ ಸಂಚಿಕೆಯಲ್ಲಿ ಕೊನೆ ಭಾಗ)



ರೇಗಾ ಕೆಲಸಕ್ಕೆ ಗ್ರಾಮ ಪಂಚಾಯತ್ ಗೆ ಘೇರಾವ್

ತೀವ್ರ ಬರದ ಕಾರಣವಾಗಿ ನೀರಿನ ಹಾಹಾಕಾರದೊಂದಿಗೆ ಕೆಲಸವೂ ಇಲ್ಲದೆ ಬಡತನವು ಜನರನ್ನು ಕಂಗೆಡಿಸಿದೆ. ಬರದ ಹೊತ್ತಿನಲ್ಲಿಯೂ ಕೆಲಸ ಕೊಡದೆ ಸತಾಯಿಸುವಂಥ ಸರಕಾರದ ನಿರ್ಲಕ್ಷ್ಯ ಪ್ರತಿಭಟಿಸಿ ಗುಲ್ಬರ್ಗ ಜಿಲ್ಲೆಯ ಆಳಂದ ತಾಲೂಕಿನ ಕಡಗಂಚಿ ಮತ್ತು ಬೆಳಮಗಿ ಗ್ರಾಮದ ನೂರಾರು ಕೂಲಿ ಕಾರ್ಮಿಕರು ಗ್ರಾಮ ಪಂಚಾಯತ್ ಕಚೇರಿಗೆ ಘೇರಾವ್ ಮಾಡಿದ ವರದಿಗಳು ಬಂದಿವೆ. ಕಡಗಂಚಿಯಲ್ಲಿ 22 ಎಪ್ರಿಲ್ ರಂದು ಮತ್ತು ಬೆಳಮಗಿ ಗ್ರಾಮದಲ್ಲಿ 25 ಎಪ್ರಿಲ್ ರಂದು ಈ ಘೇರಾವ್ ನಡೆದಿದೆ.

ಕಡಗಂಚಿಯಲ್ಲಿ

ಕಡಗಂಚಿಯಲ್ಲಿ ಒಂದು ತಿಂಗಳ ಹಿಂದೆ 160 ಜನ ಫಾರಂ–6 ಅರ್ಜಿ ಕೊಟ್ಟರೆ ಕೇವಲ 70 ಕಾರ್ಮಿಕರಿಗೆ ಮಾತ್ರ ಎನ್ ಎಂ ಆರ್ ಜನರೇಟ್ ಮಾಡಿರುವರು. ಗ್ರಾಮದ ವ್ಯಾಪ್ತಿಯಲ್ಲಿ ಮೂರು ಕೆರೆಗಳಿದ್ದು ಅವುಗಳಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಮಾಡಲು ಸಾಧ್ಯತೆ ಇದೆ. ಬರುವ ಮಳೆಗಾಲದೊಳಗಾಗಿ ಕೆರೆಗಳ ಹೂಳೆತ್ತಿದರೆ ನೀರಿನ ಅಂತರ್ಜಲದ ಮಟ್ಟವೂ ಹೆಚ್ಚುವುದು. ಈಗಾಗಲೇ ಕಡಗಂಚಿಯಲ್ಲಿಯೇ ಇರುವ ಕೇಂದ್ರೀಯ ವಿಶ್ವವಿದ್ಯಾಲಯವು ನೀರಿನ ಕೊರತೆಯು ಅನುಭವಿಸುತ್ತಿದೆ. ಮೂರು ಕೆರೆಗಳು ತುಂಬಿದರೆ ಅಂತರ್ಜಲ ಹೆಚ್ಚಾಗಿ ಕಡಗಂಚಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬೋರವೆಲ್‌ಗಳಲ್ಲಿ ಸಹ ನೀರು ಬರುವುದು. ಇಂತಹ ಯಾವುದೇ ದೂರ ದೃಷ್ಟಿಯಿಲ್ಲದ ಗ್ರಾಮಪಂಚಾಯತ್ತು ಕಾಟಾಚಾರಕ್ಕೆ ಎಂಬಂತೆ ಒಂದು ಕೆರೆಯಲ್ಲಿ ಮಾತ್ರ ಕೆಲಸ ಆರಂಭಿಸಿದೆ ಎಂದು ಹೇಳಲಾಯಿತು.

ಈಗಾಗಲೇ 80ಕ್ಕೂ ಹೆಚ್ಚು ಜನರು ಫಾರಂ 6 ತುಂಬಿ ಹದಿನೈದು ದಿನಗಳು ಮುಗಿದಿರುವುದರಿಂದ 9 ದಿನಗಳ ನಿರುದ್ಯೋಗ ಭತ್ತೆಯನ್ನು ಕೂಡಲೇ ಪಾವತಿಸಬೇಕು. ಕೆಲಸ ಒದಗಿಸಲು ಮತ್ತು ಎನ್.ಎಂ.ಆರ್ ಜನರೇಟ್ ಮಾಡಲು ಅನಾವಶ್ಯಕ ವಿಳಂಬ ಮಾಡುತ್ತಿರುವ ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಬೇಕು. ಕೆಲಸದ ಸ್ಥಳದಲ್ಲಿ ರೇಗಾ ನಿಯಮದ ಅನುಸಾರ ಇರುವ ನೀರಿನ ವ್ಯವಸ್ಥೆ, ಟೆಂಟಿನ ಆಸರೆ ಮತ್ತು ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಇರುವ ವ್ಯವಸ್ಥೆಯನ್ನು ಕೂಡಲೇ ಒದಗಿಸಬೇಕು. ಗ್ರಾಮದಲ್ಲಿ ಡಂಗುರ ಸಾರಿ ರೇಗಾದಡಿಯಲ್ಲಿ ಕೆಲಸ ಕೊಡುವ ಭರವಸೆಯನ್ನು ಗ್ರಮ ಪಂಚಾಯತ್ತು ಮಾಡಬೇಕೆಂದು ಆಗ್ರಹಿಸಲಾಯಿತು.

ಸಮಸ್ಯೆಗಳನ್ನು ವಾರದೊಳಗೆ ಪರಿಹರಿಸಿ ಎಲ್ಲರಿಗೂ ಕೆಲಸ ಕೊಡುವುದಾಗಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಯಾದ ಮಂಜುಳ ಪಾಟಿಲ ಇವರು ಭರವಸೆ ಕೊಟ್ಟರು. ಕೂಲಿಕಾರ್ಮಿಕರನ್ನುದ್ದೇಶಿಸಿ ಡಾ. ಕಾಶಿನಾಥ ಅಂಬಲಗೆ, ಡಾ. ಪ್ರಭು ಖಾನಾಪುರೆ ಮತ್ತು ನೀಲಾ ಕೆ ಇವರು ಮಾತನಾಡಿದರು. ಸುಮಂಗಲಾ ಪಾಟಿಲ. ಪ್ರಮೋದ ಡೋಣಿ, ಗ್ರಾ.ಪಂ. ಉಪಾಧ್ಯಕ್ಷರು ಹಾಜರಿದ್ದರು.

ಬೆಳಮಗಿ ಗ್ರಾಮದಲಿ

ಬೆಳಮಗಿ ಗ್ರಾಮದಲ್ಲಿ ಒಂದು ತಿಂಗಳ ಹಿಂದೆ–ಯೇ ಜಾಬ್ ಕಾರ್ಡಿಗಾಗಿ ಅರ್ಜಿ ಗುಜರಾಯಿಸಿದರೂ ಕಾರ್ಡು ಒದಗಿಸದೆ ವಿಳಂಬ ಮಾಡುತ್ತಿರುವ ಬಗ್ಗೆ ಕೂಲಿಕಾರ್ಮಿಕರು ದೂರಿದರು. ಜಾಬ್ ಕಾರ್ಡು ಇಲ್ಲದಿದ್ದರೆ ಉದ್ಯೋಗ ಖಾತ್ರಿಯಲ್ಲಿ ಕೆಲಸ ದೊರೆಯುವುದಿಲ್ಲ. ಎನ್.ಎಂ.ಆರ್. ಜನರೇಟ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ಕೆಲಸ ಅಪೇಕ್ಷಿಸಿ ಅರ್ಜಿ ಕೊಟ್ಟರೂ ಜಾಬ್ ಕಾರ್ಡು ಒದಗಿಸದಿರುವದನ್ನು ಖಂಡಿಸಲಾಯಿತು.

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ದೊಡ್ಡದಾದ ಕೆರೆಯಿದ್ದು ಕೆರೆಯಲ್ಲಿ ಕೆಲಸ ಕೊಡಲು ಆಗ್ರಹಿಸಲಾಯಿತು. ಇಷ್ಟೊಂದು ಭೀಕರ ಬರವಿದ್ದರೂ ಉದ್ಯೋಗ ಖಾತ್ರಿ ಕಾಮಗಾರಿ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ. ಮಳೆಗಾಲ ಬರುವುದರೊಳಗಾಗಿ ಕೆರೆಯ ಹೂಳೆತ್ತಿದರೆ ಮಳೆ ನೀರು ಸಂಗ್ರಹವಾಗಿ ಅಂತರ್ಜಲ ಮಟ್ಟ ಹೆಚ್ಚಾಗುವುದು. ಹಾಗೂ ಇದೇ ಸಂದರ್ಭದಲ್ಲಿ ಜನರ ಕೈಗೆ ಕೆಲಸ ಸಿಕ್ಕು ವಲಸೆ ತಪ್ಪುವುದು. ಈ ದಿಕ್ಕಿನಲ್ಲಿ ಗ್ರಾಮ ಪಂಚಾಯತ್ತು ಬದ್ಧತೆಯಿಂದ ಕರ್ತವ್ಯ ನಿರ್ವಹಿಸಬೇಕೆಂದು ಒತ್ತಾಯಿಸಲಾಯಿತು.

ಸುಮಾರು ನಾಲ್ಕು ಗಂಟೆಗಳ ಕಾಲ ಗ್ರಾಮ ಪಂಚಾಯತ್ ಮುಂದೆ ಪ್ರತಿಭಟನೆ ನಡೆಸಿ ಘೇರಾವ್ ಮಾಡಿದ ಕಾರ್ಮಿಕರಿಗೆ ಗ್ರಾಮಪಂಚಾಯತ್ ಅಧಿಕಾರಿಗಳು ಜಾಬ್ ಕಾರ್ಡು ದೊರೆತವರಿಗೆ ನಾಳೆಯೇ ಕೆರೆಯಲ್ಲಿ ಕೆಲಸ ಕೊಡುವುದಾಗಿ ಆಶ್ವಾಸನೆ ಕೊಟ್ಟರು. ಸ್ಥಳದಲ್ಲಿಯೇ ಐವತ್ತು ಕಾರ್ಮಿಕರು ಫಾರಂ ನಂ 6 ನ್ನು ಭರ್ತಿ ಮಾಡಿ ಸಲ್ಲಿಸಲಾಯಿತು.

ಭೀಕರ ಬರವಿದ್ದರೂ ರೇಗಾ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸದಿರುವುದನ್ನು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ ನೀಲಾ ಖಂಡಿಸಿದರು. ಭೀಕರ ಬರದ ಹೊತ್ತಿನಲ್ಲಿ ಕಾರ್ಮಿಕರ ಕೈಗೆ ಕೆಲಸ ಕೊಡದೆ ಸಬೂಬುಗಳನ್ನು ಹೇಳುವುದು ತರವಲ್ಲ ಎಂದು ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಉಪಾಧ್ಯಕ್ಷರಾದ ಡಾ. ಪ್ರಭು ಖಾನಾಪುರೆ ಹೇಳಿದರು. ಪ್ರಜ್ಞಾ ಮಹಿಳಾ ಸಮಿತಿಯ ಮುಖಂಡರಾದ ಮತ್ತು ಚನ್ನಮ್ಮ ಮಹಿಳಾ ಸಂಘಟನೆಯ ಅಧ್ಯಕ್ಷರಾದ ನಂದಾದೇವಿಯವರು ಮಾತಾಡಿದರು. ಹೋರಾಟದಲ್ಲಿ ಸರಸ್ವತಿ ಗುಂಜಬಲಾದ ಭಾಗವಹಿಸಿದ್ದರು.

– ಕೆ. ನೀಲಾ

ಕೋಟೆಕಾರ್, ಬೊಮ್ಮಸಂದ್ರ : ಸಿಪಿಐ(ಎಂ) ಜಯ



ಮೇಲ್ದರ್ಜೆಗೇರಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಏಪ್ರಿಲ್ 24ರಂದು ಚುನಾವಣೆ ನಡೆಯಿತು. 32 ಪಟ್ಟಣ ಪಂಚಾಯತಿ ಹಾಗೂ 18 ಪುರಸಭೆಗಳಿಗೆ ನಡೆದ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟೆಕಾರ್ ಪಟ್ಟಣ ಪಂಚಾಯತ್ ಚುನಾವಣೆಯಲ್ಲಿ ವಾರ್ಡ್ ನಂ.8ರಲ್ಲಿ ಸಿಪಿಐ(ಎಂ) ಪಕ್ಷದಿಂದ ಸ್ಪರ್ಧಿಸಿದ್ದ ಶ್ರೀಮತಿ ಸುಮತಿ ಅವರು 206 ಮತಗಳನ್ನು ಪಡೆದ ಜಯಶೀಲರಾಗಿದ್ದಾರೆ.



ಬೆಂಗಳೂರು ನಗರದ ಆನೇಕಲ್ ಪ್ರದೇಶದ ಬೊಮ್ಮಸಂದ್ರ ಪುರಸಭೆಯ 9ನೇ ವಾರ್ಡ್‌ನಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮೋಹನ್ ಎನ್.ರವರು 413 ಮತಗಳನ್ನು ಪಡೆದ 152 ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿ ಜಯಶೀಲಾಗಿದ್ದಾರೆ.

ಗುಂಡಾರ : ಸತ್ತರೂ ದಲಿತರ ಬೆನ್ನು ಬಿಡದ ಅಸ್ಪೃಶ್ಯತೆ

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಗುಂಡಾರ ಎಂಬ ಹಳ್ಳಿಯಲ್ಲಿ 70 ಕುಟುಂಬ ಇರುವ ದಲಿತರ ಮನೆಗಳಿವೆ. ಹತ್ತಿರದಲ್ಲೇ ದಲಿತರಿಗಾಗಿ ಎರಡು ಎಕರೆಯಷ್ಟು ಜಾಗದಲ್ಲಿ ಸ್ಮಶಾನ ಇದೆ. ಹಲವು ವರುಷಗಳಿಂದ ಇಲ್ಲಿಯೇ ಶವಸಂಸ್ಕಾರಕ್ಕಾಗಿ ಉಪಯೋಗವಾಗುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಮೇಲ್ವರ್ಗದ ಜನರು ಆ ಜಾಗವನ್ನು ಕಬಳಿಸಲು ಪ್ರಯತ್ನಿದ್ದಾರೆ ಮಾತ್ರವಲ್ಲ ಜಾಗಕ್ಕೆ ಬೇಲಿಯನ್ನು ಹಾಕಿ ದಲಿತರು ಶವಸಂಸ್ಕಾರ ಮಾಡಲು ಅವಕಾಶ ನೀಡುತ್ತಿಲ್ಲ.

ಇತ್ತೀಚಿಗೆ ಗುಂಡಾರ ಹಳ್ಳಿಯ ಹನುಮಂತರಾಯಪ್ಪ ನಿಧನರಾದರು. ಶವವನ್ನು ಹೂಳಲು ಭೂಮಿ ಇಲ್ಲದೆ ಎರಡು ದಿನಗಳ ಕಾಲ ಪರದಾಡಿರುವುದು ಸಾಕ್ಷಿ ಆಗಿದೆ. ಪ್ರತಿಭಟನೆ ನಡೆಸಿದ ಗ್ರಾಮದ ದಲಿತರು ನಮಗೆ ಮೀಸಲಾದ ಜಾಗದಲ್ಲಿ ನಾವು ಶವಸಂಸ್ಕಾರ ಮಾಡುತ್ತೇವೆ ಎಂದು ಪಟ್ಟು ಹಿಡಿದರು. ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಒಳಗೊಂಡು ತಾಲ್ಲೂಕಿನ ಅಧಿಕಾರಿಗಳು ರಾಜಕೀಯ ಒತ್ತಡಗಳಿಗೆ ಮಣಿದಿದ್ದು ಮತ್ತು ಮೇಲ್ವರ್ಗದ ಜನತೆ ಪರವಾಗಿ ನಿಂತಿದ್ದಾರೆ. ಹನುಮಂತರಾಯಪ್ಪ ರವರ ಶವವನ್ನು ಸ್ಮಶಾನದ ಹತ್ತಿರದಲ್ಲಿ ಶವಸಂಸ್ಕಾರ ಮಾಡಲಾಗಿದೆ.

ವಿವಾದಗಳು ಹೆಚ್ಚಾದಂತೆ ದಲಿತರಿಗಾಗಿ ಸ್ಮಶಾಣಕ್ಕಾಗಿ ಊರಿನಿಂದ 6 ಕಿ.ಮೀ. ದೂರದಲ್ಲಿ ಜಾಗ ನೀಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಒಪ್ಪದ ದಲಿತರು ನಾವು ಈಗಾಗಲೇ ಇರುವ ನಮ್ಮ ಜಾಗ ನಮಗೆ ವಾಪಸ್ಸು ಮಾಡಿ 6 ಕಿ.ಮೀ. ದೂರದಲ್ಲಿ ನಾವು ಹೋಗುವುದಿಲ್ಲ ಎಂದು ಹೇಳಿದ್ದಾರೆ. ಕ್ಷೇತ್ರದ ಜೆ.ಡಿ.ಎಸ್. ಶಾಸಕರಾದ ತಿಮ್ಮರಾಯಪ್ಪ ನವರು ಸಹ ದಲಿತರಾಗಿದ್ದರೂ ಸಹ ದಲಿತರಿಗೆ ನ್ಯಾಯ ಒದಗಿಸದೆ ಮೇಲ್ವರ್ಗದ ಜನರ ಪರವಾಗಿ ನಿಂತಿದ್ದಾರೆ.

ಗುಂಡಾರ ಹಳ್ಳಿಗೆ ಭೇಟಿ ನೀಡಿದ ದಲಿತ ಹಕ್ಕುಗಳ ಸಮಿತಿಯ ನಿಯೋಗವು ದಲಿತರಿಗೆ ಮೀಸಲಾದ ಜಾಗ ನೀಡಬೇಕೆಂದು ಆಗ್ರಹಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ದಲಿತ ಮುಖಂಡರಾದ ಶಿವಣ್ಣ, ನರಸಪ್ಪ, ರೈತ ಮುಖಂಡರಾದ ಹನುಮಂತರಾಯಪ್ಪ, ಲಕ್ಷ್ಮೀದೇವಮ್ಮ ಮುಂತಾದವರು ನಿಯೋಗದಲ್ಲಿ ಇದ್ದರು.




ತಾಲ್ಲೂಕಿನ ಅಧಿಕಾರಿಗಳು ಮತ್ತು ಮೇಲ್ವರ್ಗದ ಜನ ಇದ–ಕ್ಕೆ ಒಪ್ಪಿಕೊಳ್ಳದೆ ಇರುವುದರಿಂದ ಮೇ 4ರಂದು ತುಮಕೂರು ಜಿಲ್ಲಾಧಿಕಾರಿಗಳನ್ನು ದಲಿತ ಹಕ್ಕುಗಳ ಸಮಿತಿ ಮತ್ತು ಗ್ರಾಮದ ದಲಿತರ ನಿಯೋಗವು ಭೇಟಿ ಮಾಡಿ ದಲಿತರಿಗೆ ಮೀಸಲಾದ ಜಮೀನನ್ನು ಮತ್ತೆ ಪಡೆಯಲಾಗುವುದೆಂದು ಎಂದು ತಿಳಿಸಿದರು.

– ಶಿವಣ್ಣ ಇ.

ಸಿಗರನಹಳ್ಳಿಯಲ್ಲಿ ದಲಿತರು ದೇವಸ್ಥಾನ ಪ್ರವೇಶ ಮಾಡುವಂತೆ ನಡೆಸಿದ ಹೋರಾಟ ಸ್ತರಣೀಯ. ಆ ಹೋರಾಟ ನೇತೃತ್ವ ವಹಿಸಿದ ಮಾರ್ಕ್ಸವಾದಿ ಗೆಳೆಯರು ನಿಜಕ್ಕೂ ಅಭಿನಂದನೀಯರು. ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಜಾತಿ ಎಲ್ಲಿದೆ? ಜಾತಿ ಒಂದು ಭ್ರಮೆ. ವರ್ಗ ಹೋರಾಟ ಮಾಡಬೇಕೆಂದು ನಮ್ಮೊಡನೆ ವಾದ ಮಾಡುತ್ತಲೇ ಪರಸ್ಪರ ಹೋರಾಟಗಳಲ್ಲಿ ಭಾಗಿಯಾದದ್ದು ಈಗ ಇತಿಹಾಸ. ಆದರೆ ಈಗ ಮಾರ್ಕ್ಸ್‌ವಾದಿಗಳು ಬದಲಾಗಿದ್ದಾರೆ. ಬದಲಾವಣೆ ಅನಿವಾರ್ಯ. ಇಲ್ಲವಾದರೆ ನಿಂತ ನೀರಿನಂತೆ ಕೊಳೆಚೆ ಗುಂಡಿ ಆಗಿಬಿಡುವ ಅಪಾಯವಿರುತ್ತದೆ. ಸಿಗರನಹಳ್ಳಿ ದೇವಾಲಯ ಪ್ರವೇಶದ ಹೋರಾಟದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಲೇ ಬೇಕು. ಇದಕ್ಕಿಂತ ನನಗೆ ಮುಖ್ಯವಾದದು ದೇವೇಗೌಡರ 'ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿಯ ನಿಧಿ'ಯಿಂದ ಅಂದರೆ ಕೇಂದ್ರ ಸರ್ಕಾರದ ಹಣದಿಂದ ನಿರ್ಮಿಸಲಾಗಿದ್ದ 'ಒಕ್ಕಲಿಗರ ಸಮುದಾಯ ಭವನ'ದ ಹೆಸರನ್ನು ಈಗ ಒಕ್ಕಲಿಗರ ಎನ್ನುವ ಜಾತಿ ಪದವನ್ನು ತೆಗೆಸಿ ಬರೇ 'ಸಮುದಾಯ ಭವನ'ಎಂದು ಬದಲಾವಣೆ ಮಾಡಿಸಿರುವುದು ನಿಜಕ್ಕೂ ಸಾಧನೆಯೇ. ಈ ಬದಲಾವಣೆಯಿಂದ ದೇವೇಗೌಡರ ಮನಸ್ಥಿತಿ ಮತ್ತು ಸಿಟ್ಟು ಹೇಗಿರಬಹುದು ಎನ್ನುವುದನ್ನು ಅವರನ್ನು ಹತ್ತಿರದಿಂದ ಬಲ್ಲವರಿಗೆ ಮಾತ್ರ ಅರ್ಥವಾದೀತು.

– ಶಿವಾಜಿ ಗಣೇಶನ್



ಬರ ಪರಿಸ್ಥಿತಿ: "ತುರ್ತಾಗಲೀ, ಅನುಕಂಪವಾಗಲೀ ಇಲ್ಲದ ಉತ್ಸಾಹಶೂನ್ಯ ಸ್ಪಂದನೆ:" 170 ಪ್ರತಿಷ್ಠಿತರ ಬಹಿರಂಗ ಪತ್ರ

'ಅಚ್ಛೇ ದಿನ್' ಬಗ್ಗೆ ಕೆಲವರಲ್ಲಾದರೂ ಉಳಿದುಕೊಂಡಿರುವ ಭ್ರಮೆಯನ್ನು ಕೇಂದ್ರದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಬರದ ಪರಿಸ್ಥಿತಿಗೆ ಸ್ಪಂದಿಸಿದ, ಅಂದರೆ, ಸ್ಪಂದಿಸದಿರುವ ರೀತಿ ಸಂಪೂರ್ಣವಾಗಿ ಹರಿದು ಬಿಟ್ಟಿದೆ.

ದೇಶದ ಸರ್ವೋಚ್ಚ ನ್ಯಾಯಾಲಯದ ನಂತರ ಆರ್ಥಿಕ ತಜ್ಞರು, ಸಮಾಜಶಾಸ್ತ್ರಜ್ಞರು ಈ ಸರಕಾರವನ್ನು ತರಾಟೆಗೆ ತಗೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ಬಹುಪಾಲು ಗ್ರಾಮೀಣ ಜನತೆ ಎದುರಿಸುತ್ತಿರುವ ಬರದ ಬವಣೆಗಳಿಗೆ ಕೇಂದ್ರ ಸರಕಾರದ್ದು "ಉತ್ಸಾಹಶೂನ್ಯವಾದ, ತುರ್ತಾಗಲೀ, ಅನುಕಂಪವಾಗಲೀ ಇಲ್ಲದ" ಸ್ಪಂದನೆ ಎಂದು ದೇಶದ 170 ಪ್ರತಿಷ್ಠಿತ ವ್ಯಕ್ತಿಗಳು, ಮುಖ್ಯವಾಗಿ ಆರ್ಥಿಕ ತಜ್ಞರು ಅಪಾರ ಖೇದ ವ್ಯಕ್ತ ಪಡಿಸಿದ್ದಾರೆ. ಈ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಒಂದು ಖಾರವಾದ ಬಹಿರಂಗ ಪತ್ರವನ್ನು ಬರೆಯುವಷ್ಟು ಆತಂಕ, ಬೇಸರ ಈ 'ಒಳ್ಳೆಯ ದಿನ'ಗಳ ಭರವಸೆ ಕೊಟ್ಟ, ಉತ್ತಮ ಆಳ್ವಿಕೆಯ ಭರವಸೆ ಕೊಟ್ಟ ಸರಕಾರದಿಂದ ಅವರಿಗೆ ಆಗಿರುವಂತೆ ಕಾಣುತ್ತದೆ.

ಇದನ್ನು ತ್ವರಿತವಾಗಿ ಸರಿಪಡಿಸಬೇಕು, ಇದಕ್ಕಾಗಿ ಸಂಪ್ರದಾಯದಂತೆ ಕೈಗೊಳ್ಳುವ ಎಲ್ಲ ಪರಿಹಾರ ಕ್ರಮಗಳನ್ನು ಜಾರಿಗೆ ತರಬೇಕು, ರಾಷ್ಟ್ರೀಯ ಆಹಾರ ಭದ್ರತಾ ಕಾನೂನು, 2013 ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನನ್ನು ಕಾಯಾ, ವಾಚಾ,ಮನಸಾ ಸಂಪೂರ್ಣವಾಗಿ ಜಾರಿಗೆ ತರಬೇಕು ಎಂದು ಕಳಕಳಿಯಿಂದ ಪ್ರಧಾನ ಮಂತ್ರಿಗಳನ್ನು ಅವರು ಆಗ್ರಹಿಸಿದ್ದಾರೆ.

ಭಾರತದ ಗ್ರಾಮೀಣ ಪ್ರದೇಶಗಳ ಹಲವಾರು ಭಾಗಗಳಲ್ಲಿ ಗ್ರಾಮೀಣ ಬಡವರು ಸತತ ಎರಡನೇ ವರ್ಷ, ಕೆಲವೆಡೆಗಳಲ್ಲಿ ಮೂರನೇ ವರ್ಷವೂ ಎದುರಿಸುತ್ತಿರುವ ಬೃಹತ್ ಸ್ವರೂಪದ ಬರದ ಪರಿಸ್ಥಿತಿ ಉಂಟು ಮಾಡಿರುವ ಅಪಾರ ಸಂಕಟಗಳ ಬಗ್ಗೆ ತಮ್ಮ ಸಾಮೂಹಿಕ ಆತಂಕವನ್ನು ಪ್ರಧಾನ ಮಂತ್ರಿಗಳ ಮುಂದೆ ಇಟ್ಟಿರುವ ಈ ಪ್ರತಿಷ್ಠಿತ ವ್ಯಕ್ತಿಗಳು ತಮ್ಮ ಈ ಬಹಿರಂಗ ಪತ್ರದಲ್ಲಿ ಕಳೆದ ಕೆಲವು ವರ್ಷಗಳಿಂದ ನಮ್ಮ ಕೃಷಿ ಬೆಳವಣಿಗೆಯನ್ನು ಬಾಧಿಸಿರುವ ನಿಧಾನ ಗತಿಯಿಂದಾಗಿ ಉಂಟಾಗಿರುವ ಕೃಷಿ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿರುವುದರತ್ತ ಪ್ರಧಾನಿಗಳ ಗಮನ ಸೆಳೆದಿದ್ದಾರೆ.



ಬರದೊಂದಿಗೂ ಸೆಲ್ಫಿಯ ದಿನಗಳು!
ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಇದರ ಪರಿಣಾಮವಾಗಿ ಜನ ಹತಾಶರಾಗಿ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಿದ್ದಾರೆ, ಹಲವರ ಬಾಲ್ಯ ಕುಂಠಿತವಾಗುತ್ತಿದೆ, ಶಿಕ್ಷಣಕ್ಕೆ ಅಡ್ಡಿಯುಂಟಾಗುತ್ತಿದೆ, ಶಿಬಿರಗಳಲ್ಲಿ, ನಗರಗಳ ಫುಟ್‌ಪಾತ್‌ಗಳಲ್ಲಿ, ಜನನಿಬಿಡ ಕೇರಿಗಳಲ್ಲಿ ಬದುಕು ಸಾಗಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಇವರು ತಮ್ಮೊಂದಿಗೆ ಒಯ್ಯಲಾಗದೆ ಊರುಗಳಲ್ಲಿ ಜನ ಬಿಟ್ಟು ಹೋದ ವೃದ್ಧರು, ದುರ್ಬಲರು ಅನ್ನಕ್ಕಾಗಿ ಕೈಚಾಚುವ ಅಥವ ಗಂಟಲು ಪಸೆ ನೀಗಿಸುವಷ್ಟೂ ನೀರಿಲ್ಲದೆ ತಣ್ಣಗೆ ಪ್ರಾಣ ಬಿಡುವ ಪರಿಸ್ಥಿತಿ ಉಂಟಾಗಿದೆ. ದನಕರುಗಳನ್ನಂತೂ ಅವುಗಳ ಅದೃಷ್ಟಕ್ಕೇ ಬಿಡಲಾಗುತ್ತಿದೆ

ಇಂತಹ ಘೋರ ಪರಿಸ್ಥಿತಿಯ ಎದುರು ಕೇಂದ್ರ ಮತ್ತು ರಾಜ್ಯ ಸರಕಾರಗಳು ಯಾವುದೇ ತುರ್ತಾಗಲೀ, ಅನುಕಂಪವಾಗಲೀ ಇಲ್ಲದೆ ಅತ್ಯಂತ ಜಡತೆಯಿಂದ ಸ್ಪಂದಿಸುತ್ತಿರುವುದು ಅತ್ಯಂತ ಬೇಸರದ ಸಂಗತಿ ಎಂದಿರುವ ಈ ಬಹಿರಂಗ ಪತ್ರ, 2013ರಲ್ಲಿ ಸಂಸತ್ತು ಅಂಗೀಕರಿಸಿದ ರಾಷ್ಟ್ರೀಯ ಆಹಾರ ಭದ್ರತಾ ಕಾನೂನನ್ನು ಜಾರಿಗೆ ತರಲೂ ಕೂಡ ಏನೂ ಮಾಡಲಾಗುತ್ತಿಲ್ಲ. ಇದರ ಸರಿಯಾದ ಅನುಷ್ಠಾನವಾಗಿದ್ದರೆ ಬಡ ರಾಜ್ಯಗಳ 80ಶೇ. ಬಡ ಹಳ್ಳಿಗರಿಗೆ ಒಂದು ಹೊತ್ತಾದರೂ ಹೊಟ್ಟೆಗೆ ಹಿಟ್ಟು ಸಿಗುತ್ತಿತ್ತು ಎಂದಿದೆ.

ಐಸಿಡಿಎಸ್‌ನ್ನು ಬರಪೀಡಿತ ಪ್ರದೇಶಗಳಲ್ಲಿ ಮೇಲ್ದರ್ಜೆಗೆ ಏರಿಸಿ ವಲಸೆ ಹೋಗಲಾರದ ವೃದ್ಧರಿಗೆ, ದುರ್ಬಲರಿಗೆ, ಮಕ್ಕಳಿಗೆ ತುರ್ತು ಆಹಾರ ಪೂರೈಸ ಬಹುದಾಗಿತ್ತು. ಸಾಮಾನ್ಯವಾಗಿ ಬರದ ಪರಿಸ್ಥಿತಿಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ, ಹಸುಗಳಿಗೆ ಮೇವಿಗೆ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ಈ ಬಾರಿ ಅವು ಯಾವುದನ್ನೂ ಪರಿಗಣಿಸುತ್ತಲೂ ಇಲ್ಲ ಎಂದು ಈ ತಜ್ಞರು ಖೇದ ವ್ಯಕ್ತ ಪಡಿಸಿದ್ದಾರೆ.

ಇಂತಹ ಬರಪೀಡಿತ ಹಳ್ಳಿಗಳಲ್ಲೆಲ್ಲ ಹೆಚ್ಚಿನ ಉದ್ಯೋಗಗಳನ್ನು ನಿರ್ಮಿಸಲಿಕ್ಕೆ ಕೇಂದ್ರ ಸರಕಾರ ಆದ್ಯತೆ ನೀಡಬೇಕಾಗಿತ್ತು. ಆದರೆ ಈ ಸರಕಾರ ಕಳೆದ ವರ್ಷದಷ್ಟೂ ಕೆಲಸಗಳನ್ನು ಲಭ್ಯಗೊಳಿಸಲು ಅಗತ್ಯವಾದ ಹಣವನ್ನೂ ಕೊಟ್ಟಿಲ್ಲ. ವಾಸ್ತವವಾಗಿ ಕನಿಷ್ಠ 50,000 ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು. ಆದರೆ ಅದು ಕೊಟ್ಟಿರುವುದು 38,500 ಕೋಟಿ ರೂ. ಮಾತ್ರ. ಇದರಲ್ಲಿ 12,000 ಕೋಟಿ ರೂ. ಕಳೆದ ವರ್ಷದ ಕೂಲಿ ಬಾಕಿಯನ್ನು ಕೊಡಲಿಕ್ಕೇ ಹೋಗುತ್ತದೆ. ಇಷ್ಟೊಂದು ಕೂಲಿ ಬಾಕಿಯಿದೆ ಎನ್ನುವುದೇ ಈ ಹಳ್ಳಿಗರು ಎಂತಹ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ತೋರಿಸುತ್ತದೆ, ಇಂತಹ ಪರಿಸ್ಥಿತಿಗಳಲ್ಲಿ 'ಮನರೇಗ'ವನ್ನು ವಿಸ್ತರಿಸುವ ಬದಲು ಸಂಕುಚಿತಗೊಳಿಸಲಾಗುತ್ತಿದೆ ಎಂಬುದನ್ನು ಈ ತಜ್ಞರು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

"ಕೋಟ್ಯಂತರ ಜನರ ಆಹಾರ, ಕುಡಿಯುವ ನೀರು, ಕೆಲಸ, ಹಸುಗಳಿಗೆ ಮೇವು ಮತ್ತು ಘನತೆಗೆ ಎರಗಿರುವ ಅಗಾಧ ಪ್ರಮಾಣದ ಸಂಕಟವನ್ನು ಒಪ್ಪಲು ಸಾಧ್ಯವಿಲ್ಲ. ನಿಮ್ಮ ನೇತೃತ್ವದಲ್ಲಿ ಕೇಂದ್ರ ಸರಕಾರ ಈ ವಿಫಲತೆಗಳನ್ನು ಒಪ್ಪಿಕೊಂಡು ಇದನ್ನು ತ್ವರಿತವಾಗಿ ಸರಿಪಡಿಸಬೇಕು, ಇದಕ್ಕಾಗಿ ಸಂಪ್ರದಾಯದಂತೆ ಕೈಗೊಳ್ಳುವ ಎಲ್ಲ ಪರಿಹಾರ ಕ್ರಮಗಳನ್ನು ಜಾರಿಗೆ ತರಬೇಕು, ರಾಷ್ಟ್ರೀಯ ಆಹಾರ ಭದ್ರತಾ ಕಾನೂನು, 2013 ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನನ್ನು ಕಾಯಾ, ವಾಚಾ,ಮನಸಾ ಸಂಪೂರ್ಣವಾಗಿ ಜಾರಿಗೆ ತರಬೇಕು" ಎಂದು ಆಗ್ರಹಿಸಿದ್ದಾರೆ.

ಕಳೆದೆರಡು ವರ್ಷಗಳಿಂದ ತಮ್ಮ ಮನದ ಮಾತುಗಳನ್ನು ಮಾತ್ರ ಹೇಳುತ್ತ ಬಂದಿರುವ ಪ್ರಧಾನಿಗಳು ಈ 170 ತಜ್ಞರ ಕಳಕಳಿಪೂರ್ಣ ಮನದ ಮಾತುಗಳನ್ನು ಈಗಲಾದರೂ ಕೇಳಿಯಾರೇ? ಅಂತಹ ಲಕ್ಷಣಗಳೇನೂ ಕಾಣುತ್ತಿಲ್ಲ.

ಬದಲಿಗೆ, ಕೋಟ್ಯಂತರ ಗ್ರಾಮೀಣ ಜನರ ಸಂಕಟಗಳ ನಡುವೆಯೂ ಅವರ ಸರಕಾರದ ಎರಡನೇ ವಾರ್ಷಿಕೋತ್ಸವ ಆಚರಣೆಯ ಸಿದ್ಧತೆಗಳು ಭರದಿಂದ ಆರಂಭವಾಗಿವೆಯಂತೆ, ಅದರ ಮೆರಗನ್ನು ಹೆಚ್ಚಿಸಲು ಇದುವರೆಗೆ ಅವರ ಅನುಯಾಯಿಗಳು ಪಾಕಿಸ್ತಾನಕ್ಕೆ ಕಳಿಸಲು ಉತ್ಸುಕರಾಗಿದ್ದ ಬಾಲಿವುಡ್‌ನ ಖಾನ್‌ತ್ರಯರನ್ನು ಆಹ್ವಾನಿಸ ಲಾಗುತ್ತಿದೆಯಂತೆ!

ಇವೆಂತಾ ದಿನಗಳು!- ಕೆಲಸಕ್ಕಾಗಿ ಶೈಕ್ಷಣಿಕ ಸಾಲ ಮಾಡಿದವರೂ ವಿಜಯಮಲ್ಯ ಸಾಲಿಗೆ!

ಭಾರೀ ಕಾರ್ಪೋರೇಟ್ ಕುಳಗಳಿಗೆ ಭಾರೀ ಸಾಲಗಳನ್ನು ಕೊಟ್ಟು ಅವನ್ನು ಹಿಂದಕ್ಕೆ ಪಡೆಯಲು ಅಸಮರ್ಥವಾಗಿರುವವರು ಆ ಸಿಟ್ಟನ್ನು ಗುಮಾಸ್ತರ ಕೆಲಸಕ್ಕೆ ಅರ್ಜಿ ಹಾಕುವ ಬಡಪಾಯಿಗಳ ಮೇಲೆ ತೀರಿಸಿಕೊಳ್ಳಲು ಮುಂದಾಗಿದೆಯೇ?

ಗುಮಾಸ್ತ ಹುದ್ದೆಗೆ ಅರ್ಜಿಗಳನ್ನು ಕರೆದಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ ಜಾಹೀರಾತನ್ನು ನೋಡಿದರೆ ಈ ಸಂದೇಹ ಬರದಿರದು. "ಸಾಲ ಮರುಪಾವತಿ/ಕ್ರೆಡಿಟ್ ಕಾರ್ಡ್ ಬಾಕಿಗಳು ಮತ್ತು/ಅಥವ ಸಿಬಿಲ್ ಮತ್ತಿತರ ಹೊರಗಣ ಏಜೆನ್ಸಿಗಳ ಪ್ರತಿಕೂಲ ವರದಿಗಳಿರುವ ಅಭ್ಯರ್ಥಿಗಳು ಈ ಹುದ್ದೆಗೆ ಅರ್ಜಿ ಹಾಕಲು ಅರ್ಹರಲ್ಲ" ಎಂದು ಆ ಜಾಹೀರಾತಿನಲ್ಲಿ ಹೇಳಲಾಗಿದೆ.

ಇದನ್ನು ಗಮನಿಸಿರುವ ಬ್ಯಾಂಕ್ ನೌಕರರ ಒಕ್ಕೂಟ, ಬಿಇಎಫ್‌ಐ, ಬ್ಯಾಂಕಿನ ಗುಮಾಸ್ತ ಹುದ್ದೆಗೆ ಅರ್ಜಿ ಹಾಕುವವರಲ್ಲಿ ಸಾಕಷ್ಟು ಮಂದಿ ಉದ್ಯೋಗ ಪಡೆಯಲು ಅರ್ಹರಾಗುವ ಶಿಕ್ಷಣ ಪಡೆಯುವುದಕ್ಕಾಗಿಯೇ ಸ್ಟೇಟ್ ಬ್ಯಾಂಕ್‌ನಿಂದಲೇ ಅಥವ ಇತರ ಬ್ಯಾಂಕುಗಳಿಂದ , ಸಂಸ್ಥೆಗಳಿಂದ ಸಾಲ ಮಾಡಿರುತ್ತಾರೆ. ಅವರನ್ನು ಕೂಡ 'ಉದ್ದೇಶಪೂರ್ವಕವಾಗಿ ಸುಸ್ತಿದಾರ'ರಾಗುವ ಭಾರೀ ಕುಳಗಳ ಸಾಲಿನಲ್ಲಿ ನಿಲ್ಲಿಸುವುದು ಸರಿಯಲ್ಲ ಎಂದು ಬ್ಯಾಂಕ್ ಆಡಳಿತಗಾರರ ಗಮನಕ್ಕೆ ತಂದಿದೆ.

ಇಂತಹ ಸಾಲಗಾರರು ಮರುಪಾವತಿ ಆರಂಭಿಸಬೇಕಾದರೆ ಅವರಿಗೆ ಸಾಕಷ್ಟು ಆದಾಯ ತರುವ ನೌಕರಿ ಸಿಗಲೇ ಬೇಕಾಗುತ್ತದೆ. ಅಂತವರಿಗೆ ನೌಕರಿಯ ಬಾಗಿಲು ಮುಚ್ಚುವುದು ಅವರನ್ನು ಸಂಕಟಗಳಿಗೆ ಗುರಿಮಾಡುತ್ತದಷ್ಟೇ ಅಲ್ಲ, ಸಂಬಂಧಪಟ್ಟ ಸಂಸ್ಥೆಗಳು ತಾವು ನೀಡಿದ ಸಾಲಗಳನ್ನು ಮರಳಿ ಪಡೆಯುವ ಅವಕಾಶಗಳ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಬಿಇಎಫ್‌ಐ ಹೇಳಿದೆ.

ಇಂತಹ ಸನ್ನಿವೇಶದಲ್ಲಿ ಈ ಜಾಹೀರಾತನ್ನು ಸೂಕ್ತವಾಗಿ ಬದಲಿಸಬೇಕು, 'ಶೈಕ್ಷಣಿಕ ಸಾಲ" ಪಡೆದವರನ್ನು ಅನರ್ಹ ಸುಸ್ತಿದಾರರ ಪಟ್ಟಿಯಿಮದ ಹೊರತು ಪಡಿಸುವಂತಹ ಅಂಶವನ್ನು ಸೇರಿಸಬೇಕು ಎಂದು ಎಸ್‌ಬಿಐ ಆಡಳಿತಗಾರರಲ್ಲಿ ಬಿಇಎಫ್‌ಐ ಮನವಿ ಮಾಡಿಕೊಂಡಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

'ಒಳ್ಳೆಯ ದಿನ'ಗಳ ಮಂತ್ರಿಗೆ ಮತ್ತು ಎಂ.ಪಿ.ಗೆ ಸಾಲ ಬಾಕಿಗೆ ವಾರಂಟ್, ಹಲ್ಲೆಗಾಗಿ 3 ವರ್ಷಗಳ ಜೈಲು!

ಕೇಂದ್ರ ಮಂತ್ರಿ ವೈ ಎಸ್ ಚೌಧುರಿಗೆ ಹೈದರಾಬಾದಿನ ಹನ್ನೆರಡನೇ ಅಡಿಶನಲ್ ಚೀಫ್ ಮೆಟ್ರೊಪೊಲಿಟನ್ ಮ್ಯಾಜಿಸ್ಟ್ರೇಟ್ ಎಪ್ರಿಲ್ 7ರಂದು ಜಾಮೀನು ರಹಿತ ವಾರಂಟ್ ಹೊರಡಿಸಿರುವುದಾಗಿ ಡೆಕ್ಕನ್ ಕ್ರಾನಿಕಲ್ ಪತ್ರಿಕೆ ವರದಿ ಮಾಡಿದೆ. ಈ ವಾರಂಟ್ ಆತ ಯಾವುದೇ ಜನಪರ ಕೆಲಸಕ್ಕಾಗಿ ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ ಖಂಡಿತ ಅಲ್ಲ, ಬದಲಿಗೆ 106 ಕೋಟಿ ರೂ.ಗಳ ಬ್ಯಾಂಕ್ ಸಾಲ ವಾಪಾಸು ಮಾಡದ ಕೇಸಿನಲ್ಲಿ!

ಈತ ಸುಜನ ಯುನಿವರ್ಸಲ್ ಇಂಡಸ್ಟ್ರೀಸ್ ಎಂಬುದರ ಒಬ್ಬ ನಿರ್ದೇಶಕರು. ಮಾರಿಷಸ್ ಕಮರ್ಷಿಯಲ್ ಬ್ಯಾಂಕ್ 106 ಕೋಟಿ ರೂ. ಸಾಲ ವಸೂಲಿಗೆ ಹಾಕಿದ ಕೇಸಿನಲ್ಲಿ ಇತರ ಇಬ್ಬರು ನಿರ್ದೇಶಕರುಗಳು ಹಾಜರಾದರೂ ಈ ಮಂತ್ರಿ ಮೂರನೇ ಬಾರಿಯೂ ಹಾಜರಾಗದ್ದರಿಂದ ಈ ಸಮನ್ಸ್ ಎನ್ನಲಾಗಿದೆ.

'ಒಳ್ಳೆಯ ದಿನ'ಗಳ ಮಾದರಿ ರಾಜ್ಯ ಗುಜರಾತಿನ ಅಮ್ರೇಲಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ನರನ್ ಕಚಾಡಿಯ ಎಂಬವರಿಗೆ ಮೂರು ವರ್ಷಗಳ ಜೈಲು ಶಿಕ್ಷೆಯಾಗಿದೆ. ಡ್ಯೂಟಿಯಲ್ಲಿದ್ದ ಸರಕಾರಿ ಡಾಕ್ಟರ್ ಮೇಲೆ ಹಲ್ಲೆ ಮಾಡಿದ್ದಕ್ಕಾಗಿ ಈ ಶಿಕ್ಷೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಎಪ್ರಿಲ್ 13 ರಂದು ವರದಿ ಮಾಡಿದೆ. ಈ ಡಾಕ್ಟರು ತಾನು ಹೇಳಿದಂತೆ ಮಾಡಲಿಲ್ಲ ಎಂದು ಈ ಎಂಪಿ ಹಲ್ಲೆ ನಡೆಸಿರುವುದಾಗಿ ವರದಿಯಾಗಿದೆ.

ಟಾಟಾ ನ್ಯಾನೊ 'ಗುಜರಾತ್ ಮಾದರಿ': ಒಂದು ಲಕ್ಷ ಉದ್ಯೋಗವೂ ಇಲ್ಲ, ಕೈಗಾರಿಕಾ ಅಭಿವೃದ್ಧಿಯೂ ಇಲ್ಲ

ಟಾಟಾ ಕಂಪನಿಯ ಸಣ್ಣ ಕಾರು ನ್ಯಾನೊ ಯೋಜನೆಯನ್ನು ಪಶ್ಚಿಮ ಬಂಗಾಲದ ಸಿಂಗೂರಿನಿಂದ ಗುಜರಾತಿನ ಸಾನಂದ್‌ಗೆ ತರಲು ಆಗ ಅಲ್ಲಿನ (ಈಗಿನ ಪ್ರಧಾನಿಗಳ ನೇತೃತ್ವದಲ್ಲಿದ್ದ) ಸರಕಾರ ಟಾಟಾ ಕಂಪನಿಗೆ 30,000 ಕೋಟಿ ರೂ.ಗಳ ಬಡ್ಡಿಯಿಲ್ಲದ ಸಾಲ, ರಿಯಾಯ್ತಿ ದರದಲ್ಲಿ ಭೂಮಿ ಮತ್ತು ವಿದ್ಯುತ್ ಸಬ್ಸಿಡಿ ಎಲ್ಲವನ್ನೂ ಕೊಟ್ಟಿತು. ಒಂದು ಲಕ್ಷ ಉದ್ಯೋಗ ಸೃಷ್ಟಿಗಾಗಿ ಇವೆಲ್ಲ ಎಂದು ಜನಗಳಿಗೆ ಹೇಳಿತು.

ಅದಾಗಿ ಆರು ವರ್ಷಗಳಾಗಿವೆ. ಈ 6 ವರ್ಷಗಳ ಸಾಧನೆಯೇನು?

* ಈ ಯೋಜನೆ ಇನ್ನೂ ಪ್ರಾಥಮಿಕ ಹಂತದಲ್ಲೇ ಇದೆ. ಆದ್ದರಿಂದ ಒಂದು ಲಕ್ಷ ಉದ್ಯೋಗದ ಭರವಸೆ ಕಾಗದದ ಮೇಲೇ ಉಳಿದಿದೆ.
* 85ಶೇ. ಉದ್ಯೋಗಾವಕಾಶಗಳನ್ನು ಸ್ಥಳೀಯರಿಗೆ ಮೀಸಲಿಡುವ ಧೋರಣೆಯಿಂದ ವಿನಾಯ್ತಿ ಕೊಟ್ಟರೂ ಪ್ರಯೋಜನವಾಗಿಲ್ಲ. ಭೂಮಿ ಬಿಟ್ಟುಕೊಟ್ಟ ರೈತರಿಗೆ ಉದ್ಯೋಗದ ಭರವಸೆಯೂ ಈಡೇರಿಲ್ಲ.
* ಅಡುಗೆ ಕೋಣೆಯಿರುವ ಚಿಕ್ಕ ಗೂಡಿಗೂ 5000ರೂ. ಬಾಡಿಗೆ ಕೊಡಬೇಕಾದಲ್ಲಿ ಕಾರ್ಮಿಕರಿಗೆ ಸಂಬಳ-ತುಟ್ಟಿ ಭತ್ಯೆ ಸೇರಿ 8000ರೂ.
* ಕಾರ್ಮಿಕರು ಯೂನಿಯನ್ ಕಟ್ಟಿಕೊಳ್ಳಲು ಪ್ರಯತ್ನಿಸಿದಾಗ ಅದನ್ನು ನೊಂದಾಯಿಸಲು ಗುಜರಾತ್ ಸರಕಾರದ ನಕಾರ. ತೀವ್ರ ದಮನ. ಈಗಲೂ 28 ಮಂದಿ ಜೈಲಿನಲ್ಲಿದ್ದಾರೆ. ಟಾಟಾ ವಿರುದ್ಧ ಮತಪ್ರದರ್ಶನಗಳಿಗೆ ನಿಷೇಧ.

ಅಂದರೆ 30,000 ಕೋಟಿ ರೂ.ಗಳನ್ನು ಸುರಿದ ನಂತರವೂ ಉದ್ಯೋಗವೂ ಇಲ್ಲ, ಉತ್ಪಾದನೆಯೂ ಇಲ್ಲ- ಬಹುಶಃ ಇದೆ 'ಗುಜರಾತ್ ಮಾದರಿ' ಇರಬೇಕು.

ಆದರೆ ಇತ್ತೀಚೆಗೆ ಕಾರ್ಮಿಕರ ಹೋರಾಟ ಮತ್ತೆ ಭುಗಿಲೆದ್ದಿದೆ. 26 ದಿನಗಳ ಮುಷ್ಕರ ನಡೆಯಿತು. ಸಿಐಟಿಯು ಮತ್ತು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು ಬೆಂಬಲ ನೀಡಿದವು. ಅಹಮದಾಬಾದಿನಲ್ಲಿ ಪೋಲೀಸರು ಅನುಮತಿ ನೀಡದಿದ್ದರೂ ಕಲೆಕ್ಟರ್ ಕಚೇರಿಯೆದುರು ಪ್ರತಿಭಟನೆ ನಡೆಯಿತು, 400ಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಲಾಯಿತು.ಸಾನಂದ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಲ್ಲದೆ, ಸ್ಥಳೀಯ ರೈತರೂ ಭಾಗವಹಿಸಿದರು, 500ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಯಿತು.


ಕೊನೆಗೂ ಕೇಂದ್ರ ಕಾರ್ಮಿಕ ಸಂಘಗಳ, ಅದರಲ್ಲೂ ಸಿಐಟಿಯು ಮತ್ತು ಹೆಚ್‌ಎಂಎಸ್ ಬೆಂಬಲದಿಂದ ಕಾರ್ಮಿಕ ಸಂಘಕ್ಕೆ ನೋಂದಾವಣೆ ಸಿಕ್ಕಿದೆ, ಅಮಾನತು ಮಾಡಲ್ಪಟ್ಟ ಕಾರ್ಮಿಕರನ್ನು ಮತ್ತೆ ತೆಗೆದುಕೊಳ್ಳಲಾಗಿದೆ.

ಜೀವ ಉಳಿಸುವ ಸಾಧನವನ್ನೂ ಕಿತ್ತುಕೊಳ್ಳುವ ಸರ್ಕಾರ!



ಕೆ.ಎಂ.ನಾಗರಾಜ್

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಇದೊಂದು ಹಕ್ಕುಗಳ ಮೇಲೆ ಆಧಾರಿತವಾದ ಮತ್ತು ಬೇಡಿಕೆಯ ಮೇಲೆ ಜಾರಿಯಾಗುವ ಕಾನೂನು. ಇದನ್ನು ಗಂಭೀರವಾಗಿ ಅನುಷ್ಠಾನಗೊಳಿಸುವ ಕಾಲ ಹತ್ತು ರಾಜ್ಯಗಳು ಬರದಿಂದ ಪೀಡಿತವಾಗಿರುವ ಈಗಲ್ಲದಿದ್ದರೆ ಯಾವಾಗ ಬರುತ್ತದೆ, ಈಗ ಗ್ರಾಮೀಣ ಜನತೆಗೆ ಸ್ವಲ್ಪವಾದರೂ ಪರಿಹಾರ ಒದಗಿಸುವುದು ತನ್ನ ಕರ್ತವ್ಯವೆಂದು ಕೇಂದ್ರ ಸರಕಾರ ತಿಳಿಯುವಂತೆ ಮಾಡುವುದು, ಮತ್ತು ಉದ್ಯೋಗ ಖಾತ್ರಿ ಯೋಜನೆಯ ಸಂಬಂಧವಾಗಿ ತನ್ನದೇ ಕಾನೂನು ಕಟ್ಟಲೆಗಳನ್ನು ಪಾಲಿಸುವುದು ತನ್ನ ಜವಾಬ್ದಾರಿಯೆಂದು ಅರಿತುಕೊಳ್ಳುವಂತೆ ಮಾಡುವುದು ಹೇಗೆ ಎಂದು ಪ್ರಶ್ನಿಸಿದ್ದಾರೆ ಖ್ಯಾತ ಆರ್ಥಿಕ ತಜ್ಞೆ ಪ್ರೊ. ಜಯತಿ ಘೋಷ್.



ಕಡಿಮೆ ಅಂದರೂ ಹತ್ತು ರಾಜ್ಯಗಳಲ್ಲಿ ಹಿಂದೆಂದೂ ಕಾಣದ ಬರಗಾಲ ಇದೆ. ಈ ವರ್ಷ ಮುಂಗಾರು ಮಳೆ ಉತ್ತಮವಾಗಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆಯಾದರೂ, ಹಳ್ಳಿಗಳಲ್ಲಿರುವ ಜನರಿಗೆ ಅದರ ಪ್ರಯೋಜನ ದೊರೆಯಲು ಇನ್ನೂ ಎರಡು ತಿಂಗಳು ಕಾಯಬೇಕು. ದೇಶದ ಸುಮಾರು ಮೂವತ್ತು ಕೋಟಿ ಗ್ರಾಮೀಣ ಜನತೆಯ ಪರಿಸ್ಥಿತಿ ಚಿಂತಾಜನಕವಾಗಿದೆ. ಕುಡಿಯುವ ನೀರಿಗೂ ಜನ ಪರದಾಡುತ್ತಿದ್ದಾರೆ. ಜಾನುವಾರುಗಳಿಗೆ ಮೇವಿನ ಕೊರತೆ ತೀವ್ರವಾಗಿದೆ. ಗ್ರಾಮೀಣ ಕೃಷಿ ಕೂಲಿಗಾರರಿಗೆ ಕೆಲಸವಿಲ್ಲ. ಅಂದರೆ, ದುಡಿಮೆ ಇಲ್ಲ. ಪ್ರಾಣ ಉಳಿಸಿಕೊಳ್ಳಲು ಜನ ಒದ್ದಾಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಈ ದಾರುಣ ಪರಿಸ್ಥಿತಿಯು ಅವರನ್ನು ಒಂದು ವಿಪತ್ತಿಗೆ ತಳ್ಳಿರುವುದರ ಜೊತೆಗೆ ದೇಶದ ಅರ್ಥವ್ಯವಸ್ಥೆಯನ್ನೂ ಕುಗ್ಗಿಸುತ್ತದೆ.

ಇಂತಹ ಪರಿಸ್ಥಿತಿಯಲ್ಲಿ, ಬರ ಪೀಡಿತ ಪ್ರದೇಶಗಳಲ್ಲಿ, ಸರ್ಕಾರವು ಸಾರ್ವಜನಿಕ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಹಳ್ಳಿಯ ಜನರಿಗೆ ಕಷ್ಟಕಾಲದಲ್ಲಿ ಒಂದು ಆಸರೆ ಒದಗಿಸಿದಂತಾಗುತ್ತದೆ. ಬ್ರಿಟಿಷರು ದೇಶವನ್ನು ಆಳುತ್ತಿದ್ದ ಕಾಲದಲ್ಲೂ, ಇಂತಹ ಪರಿಸ್ಥಿತಿಗಳಲ್ಲಿ, ಜನರಿಗೆ ಕೂಲಿ ಸಿಗುವಂತಹ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕೆಲಸ ನಡೆದಿತ್ತು.

ಸಮಕಾಲೀನ ಭಾರತದಲ್ಲಿ, ಸರ್ಕಾರವು ಅಂತಹ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅಗತ್ಯವಿಲ್ಲ. ಏಕೆಂದರೆ, ಈಗ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೂ ಕನಿಷ್ಠ ನೂರು ದಿನಗಳ ಉದ್ಯೋಗ ಒದಗಿಸುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಜಾರಿಯಲ್ಲಿದೆ. ಇದೊಂದು ಹಕ್ಕುಗಳ ಮೇಲೆ ಆಧಾರಿತವಾದ ಮತ್ತು ಬೇಡಿಕೆಯ ಮೇಲೆ ಜಾರಿಯಾಗುವ ಕಾನೂನು. ಈ ಕಾಯ್ದೆಯಡಿಯಲ್ಲಿ, ನಿಗದಿಪಡಿಸಿದ ಕನಿಷ್ಠ ಕೂಲಿಗೆ ದುಡಿಯುವ ಇಚ್ಛೆಯುಳ್ಳ ಒಬ್ಬ ವ್ಯಕ್ತಿಯು ಉದ್ಯೋಗದ ಬೇಡಿಕೆ ಮಂಡಿಸಿದ ಹದಿನೈದು ದಿನಗಳೊಳಗೆ ಉದ್ಯೋಗ ಒದಗಿಸದಿದ್ದರೆ, ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಆ ವ್ಯಕ್ತಿಗೆ ಪರಿಹಾರವಾಗಿ ಕೊಡಬೇಕಾಗುತ್ತದೆ. ಇದು ಈಗಿರುವ ಕಾನೂನು.

ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದ್ದಿದ್ದರೆ, ಬರ ಪರಿಸ್ಥಿತಿಯಲ್ಲಿ ನರಳುತ್ತಿರುವವರಿಗೆ ಕೂಲಿ ಕೆಲಸ ಒದಗಿಸುವ ಮೂಲಕ ಅವರ ಕಷ್ಟಗಳನ್ನು ಸ್ವಲ್ಪವಾದರೂ ಪರಿಹರಿಸಿದಂತಾಗುತ್ತಿತ್ತು. ಈ ಕಾರ್ಯಕ್ರಮದಡಿಯಲ್ಲಿ ಕೈಕೊಂಡ ಕೆಲಸವು ಮುಂದಿನ ದಿನಗಳಲ್ಲಿ ನೀರಿನ ಅಭಾವವನ್ನು ಕಡಿಮೆ ಮಾಡುವಲ್ಲಿ ನೆರವಾಗುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಬರ ಪೀಡಿತ ಪ್ರದೇಶಗಳಲ್ಲಿ, ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದೊರೆಯುವ ಕೆಲಸದ ಮಿತಿಯನ್ನು ನೂರರಿಂದ ನೂರೈವತ್ತು ದಿನಗಳಿಗೆ ಹೆಚ್ಚಿಸಲಾಗಿತ್ತು.

ಇದೆಲ್ಲವೂ ಕಾರ್ಯರೂಪಕ್ಕೆ ಇಳಿಯಬೇಕಾದರೆ ಸರ್ಕಾರ ಹಣ ಒದಗಿಸಬೇಕಾಗುತ್ತದೆ ಮತ್ತು ಸರ್ಕಾರ ಇದನ್ನು ನೆರವೇರಿಸುವ ಭರವಸೆ ಕಾನೂನಿನಲ್ಲೂ ಇದೆ. ಆದ್ದರಿಂದ, ಈ ಭರವಸೆಯನ್ನು(ಉದ್ಯೋಗ ಒದಗಿಸುವುದು) ಪಾಲಿಸುವುದು ಕೇಂದ್ರ ಸರ್ಕಾರದ ಕರ್ತವ್ಯವೂ ಆಗಿರುವುದರಿಂದ ಸರ್ಕಾರವು ಬಜೆಟ್‌ನಲ್ಲಿ ಹಣ ನಿಗದಿಪಡಿಸುತ್ತದೆ. ಆದರೆ, ವಾಸ್ತವವಾಗಿ ನಡೆಯುತ್ತಿರುವ ವಿದ್ಯಮಾನಗಳೇ ಬೇರೆ. ಕೇಂದ್ರ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯ ಕಾನೂನನ್ನು ಉಲ್ಲಂಘಿಸುತ್ತಿದೆ. ಈ ಸಂಬಂಧವಾಗಿ ಅದು ತನ್ನ ಮನಸ್ಸಿಗೆ ಬಂದಂತೆ ಕಡಿಮೆ ಹಣ ನಿಗದಿಪಡಿಸುತ್ತಿದೆ. ಕಡಿತ ಮಾಡಿದ ಹಣವನ್ನು ರಾಜ್ಯಗಳಿಗೆ ಬಿಡುಗಡೆಮಾಡಲು ವಿಳಂಬ ಮಾಡುತ್ತದೆ. ಇದರಿಂದಾಗಿ ತೀವ್ರ ಬರ ಪರಿಸ್ಥಿತಿ ಇದ್ದಾಗಲೂ, ಕೆಲಸ ಮತ್ತು ಕೂಲಿಗಾಗಿ ಹಾತೊರೆಯುವ ಬಡ ಜನತೆಗೆ ಉದ್ಯೋಗ ಒದಗಿಸಲು ಮತ್ತು ಅವರು ಮಾಡಿದ ಕೆಲಕ್ಕೆ ಪ್ರತಿಫಲವಾಗಿ ಕೂಲಿ ಹಣ ವಿತರಿಸುವ ಕನಿಷ್ಠ ಕರ್ತವ್ಯವನ್ನೂ ನಿರ್ವಹಿಸುವ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರಗಳಿಲ್ಲ.

ಉದ್ಯೋಗ ಖಾತ್ರಿ ಯೋಜನೆಯ ಸಂಬಂಧವಾಗಿ ಸರ್ಕಾರದ ವರ್ತನೆ ಎಷ್ಟು ತಿರಸ್ಕಾರ ಮತ್ತು ಬೇಜವಾಬ್ದಾರಿತನದಿಂದ ಕೂಡಿದೆ ಎಂಬುದಕ್ಕೆ ಇಂದಿನ ಪರಿಸ್ಥಿತಿ ಒಂದು ಕೈಗನ್ನಡಿಯಾಗಿದೆ. ಈ ಯೋಜನೆಯ ಮೇಲೆ ಕೆಲವು ವರ್ಷಗಳ ಹಿಂದೆ ಸರ್ಕಾರ ಮಾಡಿದ ವೆಚ್ಚ ಜಿಡಿಪಿಯ 0.6% ವರೆಗೂ ಇತ್ತು. ಸರ್ಕಾರ 2015-16ರಲ್ಲಿ ಮಾಡಿರುವ ವೆಚ್ಚವು ಜಿಡಿಪಿಯ ಕೇವಲ 0.26% ಗೆ ಇಳಿದಿದೆ. ಕಾಯ್ದೆಯಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗ ಒದಗಿಸುವ ಭರವಸೆ ಇದೆಯಾದರೂ ಅದು ಈಗ ಮೂವತ್ತು ದಿನಗಳಿಗೆ ಇಳಿದಿದೆ. ಈ ಇಳಿಕೆಯು ಬೇಡಿಕೆಯ ಕೊರತೆಯಿಂದ ಆದದ್ದಲ್ಲ. ಬದಲಿಗೆ, ರಾಜ್ಯ ಸರ್ಕಾರಗಳಿಗೆ ಹಣ ವರ್ಗಾಯಿಸಲು ಕೇಂದ್ರ ಸರ್ಕಾರವು ನಿರಾಕರಿಸುತ್ತಿರುವುದರಿಂದ ಆದದ್ದು. ಕೇಂದ್ರ ಸರ್ಕಾರವು ಬಡ ಜನರಿಗೆ ತಕ್ಷಣ ಕೊಡಬೇಕಾದ ಕೂಲಿ ಹಣದ ಬಾಬ್ತು 12,590 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಬಾಕಿ ಉಳಿಸಿಕೊಂಡಿತ್ತು. ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ನಂತರ ಈ ಹಣ ಬಿಡುಗಡೆ ಮಾಡಿದೆ. ಬಾಕಿ ಉಳಿಸಿಕೊಂಡಿದ್ದ ಬಡ ಜನರ ಕೂಲಿ ಹಣ ಬಿಡುಗಡೆ ಮಾಡಲು ಇಷ್ಟೊಂದು ಸತಾಯಿಸುವ ಸರ್ಕಾರವನ್ನು ಏನೆಂದು ಕರೆಯಬೇಕು?

ಹಣದ ಕೊರತೆ ಎದುರಿಸುತ್ತಿರುವ ರಾಜ್ಯಗಳಲ್ಲಿ ಬರ ಪೀಡಿತ ಹತ್ತು ರಾಜ್ಯಗಳೂ ಸೇರಿವೆ. ಈ ರಾಜ್ಯಗಳು, ಉದ್ಯೋಗ ಖಾತ್ರಿ ಯೋಜನೆಯನ್ನು ನೂರರಿಂದ ನೂರೈವತ್ತು ದಿನಗಳಿಗೆ ವಿಸ್ತರಿಸುವ ತೀರ್ಮಾನವನ್ನು ನಗೆಪಾಟಲಾಗುವಂತೆ ಮಾಡಿವೆ. ಈ ಬರ ಪೀಡಿತ ರಾಜ್ಯಗಳು ವಾಸ್ತವವಾಗಿ ನೂರೈವತ್ತು ದಿನಗಳ ಉದ್ಯೋಗ ಒದಗಿಸಿದ್ದಿದ್ದರೆ 15,500 ಕೋಟಿ ರೂಗಳ ಅಧಿಕ ವೆಚ್ಚವಾಗುತ್ತಿತ್ತು. ಈ ರಾಜ್ಯಗಳಲ್ಲಿ ಕೇವಲ 7% ಮಂದಿಗೆ ನೂರೈವತ್ತು ದಿನಗಳ ಉದ್ಯೋಗ ಪಡೆಯುವುದು ಸಾಧ್ಯವಾಯಿತು ಏಕೆ ಎಂಬುದನ್ನು ಈ ಹಣಕಾಸಿನ ವಿವರಗಳ ಮೂಲಕ ಅರಿಯಬಹುದು.

ಇನ್ನೂ ಮೋಸವೆಂದರೆ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ಸೂಚಿಸಿದ ಲೇಬರ್ ಬಜೆಟನ್ನು ಕಡಿತ ಮಾಡುತ್ತದೆ. ಕೋರ್ಟ್‌ನಿಂದ ವಾಗ್ದಂಡನೆಗೆ ಒಳಗಾಗಿದ್ದರೂ ಸಹ ಕೇಂದ್ರ ಸರ್ಕಾರವು ಬೇರೆ ಬೇರೆ ರಾಜ್ಯಗಳು ನಿಗದಿಪಡಿಸಿರುವ ಕನಿಷ್ಠ ಕೂಲಿಯನ್ನು ಕೊಡಲು ನಿರಾಕರಿಸುತ್ತದೆ. ಈಗ ಅದು ಯೋಜನೆಗೆ ಬಳಸುವ ಪದಾರ್ಥಗಳ ಬೆಲೆಯನ್ನು ತಾನು ಕೊಡುವುದಿಲ್ಲ, ಅದನ್ನು ರಾಜ್ಯಗಳೇ ಹೊಂದಿಸಿಕೊಳ್ಳಬೇಕೆಂದು ಕ್ಯಾತೆ ತೆಗೆಯುತ್ತಿದೆ. ಉದ್ಯೋಗ ಖಾತ್ರಿ ಯೋಜನೆಯ ಪ್ರಸ್ತುತತೆ ಹಿಂದೆಂದಿಗಿಂತಲೂ ಅಧಿಕವಾಗಿರುವ ಬರಗಾಲದ ಸನ್ನಿವೇಶದಲ್ಲೂ ಅದು ಕಾನೂನು ಕಟ್ಟುಪಾಡುಗಳನ್ನು ಉಲ್ಲಂಘಿಸುತ್ತಿದೆ.

ಈ ಎಲ್ಲ ಅಂಶಗಳಿಂದಾಗಿ, ಕೂಲಿ ಹಣದ ವಿತರಣೆಯಲ್ಲಿ ವಿಳಂಬವಾಗುತ್ತಿದೆ. ಅನೇಕ ರಾಜ್ಯಗಳಲ್ಲಿ, ಹಿಂದಿನ ಹಣ-ಕಾಸು ವರ್ಷದ ಕೂಲಿಯ ಬಾಕಿಯನ್ನು ಈಗ ತೀರಿಸುತ್ತಿದ್ದಾರೆ. ಕೂಲಿ ಹಣದ ವಿತರಣೆಯಲ್ಲಿ ವಿಳಂಬಮಾಡಿರುವ ಕಾರಣದಿಂದ ಕೊಡಬೇಕಾಗಿರುವ ಪರಿಹಾರ ಧನದಲ್ಲಿ ಕೇವಲ 1.5% ಮಾತ್ರ ಪಾವತಿಯಾಗಿದೆ. ತಮಗೆ ಸಂದಾಯವಾಗಬೇಕಿರುವ ಕೂಲಿ ಹಣ ಪಡೆಯಲು ಮತ್ತು ತಕ್ಷಣದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೃಷಿ ಕಾರ್ಮಿಕರು ರಣ ರಣ ಬಿಸಿಲಿನಲ್ಲಿ ಬೆನ್ನು-ಮುರಿಯುವ ಕೆಲಸಗಳಲ್ಲಿ ತೊಡಗಿಕೊಳ್ಳುವುದು ಅನಿವಾರ್ಯವಾಗಿದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಗಂಭೀರವಾಗಿ ಅನುಷ್ಠಾನಗೊಳಿಸುವ ಕಾಲ ಈಗಲ್ಲದಿದ್ದರೆ ಯಾವಾಗ ಬರುತ್ತದೆ? ಈಗಿರುವ ಭೀಕರ ಬರ ಪರಿಸ್ಥಿತಿಯಲ್ಲಿ ಗ್ರಾಮೀಣ ಜನತೆಗೆ ಸ್ವಲ್ಪವಾದರೂ ಪರಿಹಾರ ಒದಗಿಸುವುದು ತನ್ನ ಕರ್ತವ್ಯವೆಂದು ತಿಳಿಯುವಂತೆ ಮಾಡಲು ಮತ್ತು ಉದ್ಯೋಗ ಖಾತ್ರಿ ಯೋಜನೆಯ ಸಂಬಂಧವಾಗಿ ತನ್ನದೇ ಕಾನೂನು ಕಟ್ಟಳೆಗಳನ್ನು ಪಾಲಿಸುವುದು ತನ್ನ ಜವಾಬ್ದಾರಿಯೆಂದು ಕೇಂದ್ರ ಸರ್ಕಾರವು ಅರಿತುಕೊಳ್ಳುವಂತೆ ಮಾಡುವುದು ಹೇಗೆ ಎಂಬುದು ಒಂದು ಪ್ರಶ್ನೆಯಾಗಿಯೇ ಉಳಿದಿದೆ.

(ಆಧಾರ: ಪ್ರೊ. ಜಯತಿ ಘೋಷ್ ಲೇಖನ)

ಕುಸಿದು ಬಿದ್ದಿರುವ ಆರೋಗ್ಯ ಸೇವೆಗಳು: ಲಕ್ಷಾಂತರ ಕುಟುಂಬಗಳನ್ನು ನಿರ್ಗತಿಕರಾಗಿಸುತ್ತಿವೆ

ತಮ್ಮ ದಿನ ನಿತ್ಯದ ಬಳಕೆಯ ಖರ್ಚುಗಳಲ್ಲಿ ಜನ ಆರೋಗ್ಯ ಪಾಲನೆಗಾಗಿ ಮಾಡುತ್ತಿರುವ ಖರ್ಚುಗಳಿಗೆ ಸಂಬಂಧಿಸಿದಂತೆ 71ನೇ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಮಾಹಿತಿಯು ದೇಶದ ಆರೋಗ್ಯಪಾಲನೆಯ ವ್ಯವಸ್ಥೆ ಕುಸಿದು ಬಿದ್ದಿರುವುದನ್ನು ಬಯಲು ಮಾಡಿದೆ. ಅದು ರವಾನಿಸುವ ಸಂದೇಶ ಸ್ಪಷ್ಟವಾಗಿದೆ: ಆರೋಗ್ಯ ಪಾಲನೆಗಾಗಿ ಹೆಚ್ಚು ಹೆಚ್ಚು ಮಂದಿ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಅದರಿಂದಾಗಿ, ಅವರು ಭಾರಿ ಖರ್ಚಿನ ಹೊರೆ ಹೊರುವಂತಾಗಿದೆ.

ಸಾಂಪಲ್ ಸರ್ವೆಗಾಗಿ ಮಾಹಿತಿ ಸಂಗ್ರಹಿಸುವ ಕೆಲಸ 2014ರಲ್ಲಿ ನಡೆದಿತ್ತು. ಸರ್ವೆಯ ವರದಿ ಇತ್ತೀಚೆಗೆ ಬಿಡುಗಡೆಯಾಗಿದೆ. ಅದರ ಮುಖ್ಯಾಂಶಗಳು ಹೀಗಿವೆ:

ಜನರು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳ ಮೊರೆಹೋಗುವ ಪ್ರವೃತ್ತಿ ಹೆಚ್ಚುತ್ತಿದೆ. ಪಟ್ಟಣಗಳಲ್ಲಿ 78.8% ಮಂದಿ ಮತ್ತು ಹಳ್ಳಿಗಳಲ್ಲಿ 71.1% ಮಂದಿ ಹೊರ-ರೋಗಿಗಳಾಗಿ ಮತ್ತು ಒಳ-ರೋಗಿ ಕೋಣೆಯಲ್ಲಿ ಚಿಕಿತ್ಸೆಪಡೆಯಲು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ.

ಸರ್ಕಾರ ನಡೆಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆ ಬಹಳ ಕಡಿಮೆ ಇದೆ-ಹಳ್ಳಿಗಳಲ್ಲಿ 11.5%,ನಗರಗಳಲ್ಲಿ 3.9% ಇದೆ.

ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಎಷ್ಟು ಕಳಪೆ ಮಟ್ಟಕ್ಕೆ ಇಳಿದಿವೆ ಎಂಬುದನ್ನು ಈ ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ ಎನ್ನುತ್ತಾರೆ ಜನ ಸ್ವಾಸ್ಥ್ಯ ಅಭಿಯಾನದ ಸಂಚಾಲಕ, ಡಾ. ಅಮಿತ್ ಸೆನ್‌ಗುಪ್ತಾ

ಖಾಸಗಿ ಆಸ್ಪತ್ರೆಗಳು(ಇವು ಸರ್ಕಾರದಿಂದ ಅನೇಕ ರಿಯಾಯ್ತಿಗಳನ್ನು ಪಡೆಯುತ್ತವೆ) ಬಹಳ ವೇಗವಾಗಿ ಬೆಳೆಯುತ್ತಿರುವುದು ಅವುಗಳ ಮೇಲೆ ಜನ ನಂಬಿಕೆ ಇಟ್ಟಿರುವುದನ್ನು ಸೂಚಿಸುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವವರೆಲ್ಲಾ ಶ್ರೀಮಂತರು ಎಂದೇನೂ ಅಲ್ಲ. ಕಡು ಬಡವರ ಪೈಕಿ ಹಳ್ಳಿಗಳಲ್ಲಿ 42.5% ಮಂದಿ ಮತ್ತು ನಗರಗಳಲ್ಲಿ 52% ಮಂದಿ ಲಾಭ ಗಳಿಸುವ ಉದ್ದೇಶದಿಂದ ಆರಂಭಿಸಿದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಮೇಲೆ ಜನರ ಅವಲಂಬನೆ ಹೆಚ್ಚಾಗುತ್ತಿದೆ. ಆರ್ಥಿಕವಾಗಿ ಇದು ಕುಟುಂಬಗಳ ಮೇಲೆ ದೊಡ್ಡ ಹೊರೆಯಾಗುತ್ತಿದೆ ಎಂಬುದು ಆರೋಗ್ಯ ಸೇವೆಗಳ ಕುರಿತ ಈ ಸ್ಯಾಂಪಲ್ ಸರ್ವೆಯಿಂದ ತಿಳಿದು ಬರುತ್ತದೆ ಎನ್ನುತ್ತಾರೆ ಡಾ.ಅಮಿತ್ ಸೆನ್‌ಗುಪ್ತ.

ಸರಾಸರಿ ಲೆಕ್ಕದಲ್ಲಿ, ಚಿಕಿತ್ಸೆಯ ಪ್ರತಿಯೊಂದು ಪ್ರಕರಣದಲ್ಲಿ, ಸರ್ಕಾರಿ ಆಸ್ಪತ್ರೆಯಲ್ಲಿ 6120 ರೂಗಳ ವೆಚ್ಚ ತಗುಲಿದರೆ, ಖಾಸಗಿ ಆಸ್ಪತ್ರೆಗಳಲ್ಲಿ ಅದೇ ಚಿಕಿತ್ಸೆಗೆ 25,850 ರೂಗಳ ವೆಚ್ಚ ತಗುಲುತ್ತದೆ. ಅಂದರೆ, ನಾಲ್ಕು ಪಟ್ಟಿಗೂ ಹೆಚ್ಚು. ಖಾಸಗಿ ಆಸ್ಪತ್ರೆಗಳಲ್ಲಿ, ಕ್ಯಾನ್ಸರ್ ಚಿಕಿತ್ಸೆಯ ಪ್ರತಿ ಪ್ರಕರಣದಲ್ಲಿ, ಸರಾಸರಿ, 78,050 ರೂ ಗಳ ಮತ್ತು ಹೃದಯ ಚಿಕಿತ್ಸೆಗೆ 43,262 ರೂ ಗಳ ವೆಚ್ಚ ತಗುಲುತ್ತದೆ.

ಚಿಕಿತ್ಸೆಯ ವೆಚ್ಚವು ಕಡು ಬಡ ಕುಟುಂಬಗಳಿಗೆ ವಿನಾಶಕಾರಿಯಾಗಿ ಪರಿಣಮಿಸುತ್ತಿದೆ. ಒಂದು ಬಡ ಕುಟುಂಬವು (ಹಳ್ಳಿಗಳಲ್ಲಿ 800ರೂ ಮತ್ತು ಪಟ್ಟಣಗಳಲ್ಲಿ 1,182 ರೂ ಮಾಸಿಕ ಬಳಕೆ ವೆಚ್ಚಮಾಡುವ ಕುಟುಂಬ) ಆಸ್ಪತ್ರೆಯಲ್ಲಿ ಒಳ-ರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದ ಪ್ರತಿ ಪ್ರಕರಣದಲ್ಲೂ, ಗ್ರಾಮೀಣದಲ್ಲಿ 11,805 ರೂ ಮತ್ತು ಪಟ್ಟಣಗಳಲ್ಲಿ 12,516 ರೂಗಳನ್ನು ಖರ್ಚು ಮಾಡಬೇಕಾಗುತ್ತದೆ. ಅಂದರೆ, **ಬಡ ಕುಟುಂಬದ ಸದಸ್ಯರೊಬ್ಬರು ಚಿಕಿತ್ಸೆಗಾಗಿ ಒಂದು ಸಲ ಆಸ್ಪತ್ರೆಗೆ ದಾಖಲಾದರೆ, ಆ ಕುಟುಂಬ ತನ್ನ ಇಡೀ ವರ್ಷದ ಆದಾಯವನ್ನು ಖರ್ಚು ಮಾಡುತ್ತದೆ. ಇದು ಆ ಕುಟುಂಬವನ್ನು ವಿನಾಶದತ್ತ ತಳ್ಳುತ್ತದೆ ಎಂದು ಡಾ. ಸೆನ್‌ಗುಪ್ತ ಹೇಳುತ್ತಾರೆ.**

ವೈದ್ಯಕೀಯ ಚಿಕಿತ್ಸೆಯ ವೆಚ್ಚದಿಂದಾಗಿ ಲಕ್ಷಾಂತರ ಕುಟುಂಬಗಳು ನಿರ್ಗತಿಕರಾಗುತ್ತವೆ. ಅಬ್ಬರದ ಪ್ರಚಾರ ಪಡೆಯುತ್ತಿರುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಪ್ರಯೋಜನ ಪಡೆಯುತ್ತಿರುವವರ ಸಂಖ್ಯೆ ಬಹಳ ಕಡಿಮೆ ಇದೆ. ಸಣ್ಣ ಪ್ರಮಾಣದ ಆರೋಗ್ಯ ವಿಮೆಯ ರಕ್ಷಣೆ ಹೊಂದಿರುವವರ ಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ 14% ಮತ್ತು ಪಟ್ಟಣಗಳಲ್ಲಿ 18% ಇದೆ.

ಈ ಸರ್ವೆಯು ಭಾರತದ ಆರೋಗ್ಯಪಾಲನಾ ವ್ಯವಸ್ಥೆಯ ಬಗ್ಗೆ ಒಂದು ನಿರಾಶಾದಾಯಕವಾದ ಚಿತ್ರವನ್ನು ಮೂಡಿಸುತ್ತದೆ. ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆಯಾದಾಗ ಚಿಕಿತ್ಸೆ ಪಡೆಯಲು ಮಾಡುವ ವೆಚ್ಚವು ಆ ಕುಟುಂಬವನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳುತ್ತದೆ. ಆದ್ದರಿಂದ, ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ. ಆದರೆ, ಸರ್ಕಾರವು ವ್ರತ ಮಾಡುವವರಂತೆ ಆರೋಗ್ಯ ಸೇವೆಗಳ ಮೇಲಿನ ವೆಚ್ಚವನ್ನು ಕಡಿತ ಮಾಡುತ್ತಿರುವುದನ್ನು ಗಮನಿಸಿದರೆ, ಈ ಸರ್ಕಾರ ಅತ್ತ ಗಮನ ಹರಿಸುತ್ತದೆ ಎನ್ನುವಂತಿಲ್ಲ.

ರಾಜ್ಯಗಳ ಸುತ್ತ

ಆರ್. ರಾಮಕೃಷ್ಣ

ಪಶ್ಚಿಮ ಬಂಗಾಳ: ಅವರು ತಂದೆಯನ್ನು ಕೊಂದರು – ಮಗ ಕರ್ತವ್ಯದ ಬಾವುಟ ಎತ್ತಿ ಹಿಡಿದ

ಅದು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಹರೋವಾ ಎಂಬ ಗ್ರಾಮ. ಏಪ್ರಿಲ್ 19, 2016 ರಾತ್ರಿ ಮುಸುಕು ದಾರಿಗಳಾದ 'ಶಂಕಿತ' ತೃಣಮೂಲ ಕಾರ್ಯಕರ್ತರು ನೂರ್ ಆಲಿ ಮಿಸ್ತ್ರಿ ಎಂಬ ಸಿಪಿಐ(ಎಂ) ಕಾರ್ಯಕರ್ತರನ್ನು ನಿರ್ದಯವಾಗಿ ಕೊಂದು ಹಾಕಿದರು. ನೂರ್ ಆಲಿ ಏಪ್ರಿಲ್ 25 ರಂದು ನಡೆಯುವ ಚುನಾವಣೆಯಲ್ಲಿ ಸಿಪಿಐ(ಎಂ) ಏಜೆಂಟ್ ಆಗಿದ್ದು ಚುನಾವಣಾ ಅಕ್ರಮಗಳನ್ನು ತಡೆಯುವ ಉತ್ಸಾಹದಲ್ಲಿದ್ದರು. ತಂದೆಯನ್ನು ಕಳೆದುಕೊಂಡ ನೋವಿನಲ್ಲಿದ್ದರೂ ನೂರ್ ಆಲಿಯಾವರ ಮಗ 22 ವಯಸ್ಸಿನ ರಜಿಬ್ ಮಿಸ್ತ್ರಿ ಏಪ್ರಿಲ್ 25 ರಂದು ಸಿಪಿಐ(ಎಂ)ನ ಪರವಾಗಿ ನಂ–56, ಮಹಿಷಗೋಡಿ ಶಾಲೆಯ ಮತಗಟ್ಟೆಯಲ್ಲಿ ಏಜೆಂಟ್ ಆಗಿ ದುಡಿದು ಚುನಾವಣಾ ಅಕ್ರಮಗಳಿಗೆ ತಡೆ ಒಡ್ಡಿದರು.

ಸಿಪಿಐ(ಎಂ) ರ್‍ಯಾಲಿಗಳು, ಹೋರಾಟಗಳಿಗೆ ಗ್ರಾಮದಿಂದ ಜನರನ್ನು ಸಂಘಟಿಸುತ್ತಿದ್ದ ನೂರ್ ಆಲಿಗೆ ಪ್ರಾಣ ಬೆದರಿಕೆ, ದಾಳಿಗಳು ಹೊಸತೇನಾಗಿರಲಿಲ್ಲ. ಕೂಲಿಕೆಲಸವನ್ನು ನಂಬಿ ಬದುಕು ನಿರ್ವಹಿಸುತ್ತಿದ್ದ ಈ ಕುಟುಂಬವು 2011 ರಲ್ಲಿ ತೃಣಮೂಲ ಕಾಂಗ್ರೆಸ್‌ನ ದಾಳಿಯಿಂದಾಗಿ 2 ವರ್ಷ ಬೇರೆ ಊರಿನಲ್ಲಿ ವಾಸ್ತವ್ಯ ಮಾಡಬೇಕಾಗಿ ಬಂದಿತ್ತು. ನೂರ್ ಆಲಿ ಕುಟುಂಬವು ಗ್ರಾಮದಲ್ಲಿ ವಾಸಿಸಬೇಕೆಂದರೆ ತೃಣಮೂಲ ಮುಖಂಡರದ್ದು ಎರಡು ಷರತ್ತುಗಳಿದ್ದವು. ಊರಿಗೆ ಬಂದ ಮೇಲೆ ಸಿಪಿಐ(ಎಂ) ಅನ್ನು ಬೆಂಬಲಿಸಬಾರದು. ಮತ್ತು ತೃಣಮೂಲ ಕಾಂಗ್ರೆಸಿಗರಿಗೆ 1.5 ಲಕ್ಷ ರೂಪಾಯಿ ದಂಡ ಕೊಡಬೇಕು.

2009 ರ ಲೋಕಸಭಾ ಚುನಾವಣೆ 2011 ರ ವಿಧಾನ ಸಭಾ ಚುನಾವಣೆ ಈ ಎರಡರಲ್ಲೂ ನೂರ್ ಆಲಿ ಕುಟುಂಬಕ್ಕೆ ಮತದಾನ ಮಾಡಲು ತೃಣಮೂಲ ಗೂಂಡಾಗಳು ಅವಕಾಶ ನೀಡಿರಲಿಲ್ಲ.

ಈ ಬಾರಿ ಊರಿನ ಎಲ್ಲರನ್ನೂ ಬಲ್ಲ ತಾನು ಮತಗಟ್ಟೆಯಲ್ಲಿ ಏಜಂಟನಾಗಿದ್ದುಕೊಂಡು ಅಕ್ರಮಗಳನ್ನು ತಡೆಯುವುದು ತಂದೆ ನೂರ್ ಆಲಿಯವರ ಆಶಯವಾಗಿತ್ತು ಎನ್ನುವ 22 ವರ್ಷದ ರಜಿಬ್ ಮಿಸ್ತ್ರಿ ಅವರ ಆಶಯವನ್ನು ಈಡೇರಿಸುವುದು ತನ್ನ ಕರ್ತವ್ಯ ಎನ್ನುತ್ತಾರೆ. ತಂದೆಗೆ ಗೌರವ ಸಲ್ಲಿಸುವ ಆಚರಣೆಗಳನ್ನು 24 ರಂದೇ ಮುಗಿಸಿ ಬೆಳಿಗ್ಗೆಯೇ ಮತಗಟ್ಟೆಗೆ ಹಾಜರಾದ ರಜಿಬ್ ಮಿಸ್ತ್ರಿ ಮಧ್ಯಾಹ್ನ ಚಪಾತಿ ತಿನ್ನುವ ಸಲುವಾಗಿ ಹೊರಗೆ ಹೋಗಿದ್ದು ಬಿಟ್ಟರೆ ಉಳಿದಂತೆ ಸಂಪೂರ್ಣ ಮತದಾನ ಕೇಂದ್ರದಲ್ಲಿದ್ದು ತನ್ನ ಕರ್ತವ್ಯ ನಿರ್ವಹಿಸಿದ್ದಾರೆ. ತಂದೆಯ ಕೊಲೆಗಾರರಲ್ಲಿ ಒಬ್ಬ ಮತ ಹಾಕಲು ಬಂದಾಗ ಆತನನ್ನು ಗುರುತಿಸಿ ಪೋಲಿಸರಿಗೆ ಮಾಹಿತಿಯನ್ನು ಕೂಡ ನೀಡಿದ್ದಾರೆ.



ರಜಿಬ್ ಮಿಸ್ತ್ರಿ

ಇಂತಹ ಧೈರ್ಯ, ಸಾಹಸ, ತತ್ವ ಬದ್ಧತೆ, ತ್ಯಾಗ, ಬಲಿದಾನಗಳೇ ಕಮ್ಯೂನಿಸ್ಟ್ ಚಳುವಳಿಯ ಪ್ರಧಾನ ಆಸ್ತಿ. ಇಂತಹ ಪರಂಪರೆ ತೃಣಮೂಲ ಕಾಂಗ್ರೆಸ್‌ಗೆ ಎಲ್ಲಿಂದ ಸಿಗಬೇಕು.

ರಾಜಕೀಯ ವಿರೋಧಿಗಳು ಇದೆಲ್ಲಾ ಕಟ್ಟುಕತೆ ಅಂತಲೋ ಉತ್ಪ್ರೇಕ್ಷೆ ಎನ್ನಬಹುದು. ಆದರೆ ಈ ಪ್ರಕರಣದ ಈ ಎಲ್ಲ ವಿವರಗಳು 'ಟೆಲಿಗ್ರಾಫ್' ಪತ್ರಿಕೆಯಲ್ಲಿ ಪೂರ್ಣವಾಗಿ ವರದಿಯಾಗಿವೆ.

'ಇಂಚಿಂಚು ಸೇಡು ತೀರಿಸಿಕೊಳ್ಳುವೆ' ಎನ್ನುವ ಮಮತ 'ಅಸಹನೆ'

ತೃಣಮೂಲ ಕಾಂಗ್ರೆಸ್ ವರಿಷ್ಠ ನಾಯಕಿ, ಪಶ್ಚಿಮ ಬಂಗಾಳ ರಾಜ್ಯದ ಮುಖ್ಯಮಂತ್ರಿ ವಿರೋಧ ಪಕ್ಷಗಳ ಮೇಲೆ ಚುನಾವಣೆಗಳ ನಂತರ ಇಂಚಿಂಚು ಸೇಡು ತಿರಿಸಿಕೊಳ್ಳುವೇ ಎಂದು ಹೇಳಿದ್ದಾರೆ. ಚುನಾವಣಾ ಕಣದಲ್ಲಿ ಗೆಲುವು ಸುಲಭದ್ದಲ್ಲ. ಜನತೆ ವಿರೋಧ ಪಕ್ಷಗಳ ಜತೆ ಹೆಚ್ಚೆಚ್ಚು ಅಣಿನೆರೆಯುತ್ತಿದ್ದಾರೆ, ತೃಣಮೂಲದ ವಿರುದ್ಧ ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ ಎಂಬುದನ್ನು ನೋಡಿ ಅವರಿಗೆ ಅದನ್ನು ಸಹಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ಮಮತ ಬ್ಯಾನರ್ಜಿಯವರ ಸರ್ವಾಧಿಕಾರಿ ಮನೋಭಾವ ಮತ್ತು ಧೋರಣೆಯನ್ನು ಪ್ರತಿಬಿಂಬಿಸುವ ಈ ಹೇಳಿಕೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಪಶ್ಚಿಮ ಬಂಗಾಳ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರೂ ಆದ ಡಾ. ಸೂರ್ಯಕಾಂತ ಮಿಶ್ರ ಅವರು ಬಹಿರಂಗ ಸಭೆಗಳಲ್ಲಿ ಪ್ರತಿಕ್ರಿಯೆ ನೀಡಿ "ಜನತೆ ಮೀಟರು, ಕಿಲೋ ಮೀಟರ್ ಅಳತೆಯಲ್ಲಿ ಮುನ್ನಡೆಯುತ್ತಿದ್ದರೆ ಮಮತ ಬ್ಯಾನರ್ಜಿಯವರು ಇನ್ನೂ ಇಂಚುಗಳಲ್ಲಿ ಅಳೆಯುತ್ತಿದ್ದಾರೆ" ಎಂದು ಹೇಳಿದ್ದಾರೆ. "ಪಶ್ಚಿಮ ಬಂಗಾಳದಲ್ಲಿ ಪ್ರಸ್ತುತ ಇತಿಹಾಸದ ಚಕ್ರ ವೇಗವಾಗಿ ತಿರುಗುತ್ತಿದೆ." ಎಂದಿರುವ ಮಿಶ್ರ ರಾಜ್ಯದ ಉತ್ತರ ಭಾಗದಲ್ಲಿ ಸರಣಿ ರ್‍ಯಾಲಿಗಳ ಅಲೆಯ ನಂತರ ಈಗ ಏಪ್ರಿಲ್ 25 ಮತ್ತು 30, 2016 ರ ಚುನಾವಣೆಗೆ ಪೂರ್ವಭಾವಿಯಾಗಿ ನಡೆದ ಮತ್ತು ನಡೆಯುತ್ತಿರುವ ಬಹಿರಂಗ ಸಭೆಗಳಲ್ಲಿ ರಾಜ್ಯದ ದಕ್ಷಿಣ ಭಾಗದಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಜನತೆ ಸೇರುತ್ತಿದ್ದಾರೆ.

ದಕ್ಷಿಣ ಕೋಲ್ಕೊತ್ತಾದಲ್ಲಿ ಏಪ್ರಿಲ್ 19 ರಂದು ನಡೆದ ರ್‍ಯಾಲಿಯಲ್ಲಿ ಈ ಹಿಂದೆಂದೂ ಸೇರದಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದಾರೆ ಎಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ. "ನಮಗೆ ಲಂಚಕೋರರ ಸರಕಾರ ಬೇಕಿಲ್ಲ.." ಎಂಬ ಘೋಷಣೆಗೆ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಬೀದಿಗಳಲ್ಲಿ ಮೆರವಣಿಗೆ ಸಾಗುತ್ತಿರುವಾಗ ಸಾಮಾನ್ಯ ಜನರು ಉತ್ಸಾಹದಿಂದ ಮೆರವಣಿಗೆಯಲ್ಲಿ ಜೊತೆ–ಗೂಡುತ್ತಿದ್ದಾರೆ. ಮನೆಗಳ ಮೇಲೆ, ಬಾಲ್ಕನಿಗಳಲ್ಲಿ ನಿಂತು ಜನತೆ ಎಡರಂಗಕ್ಕೆ ಬೆಂಬಲ ಸೂಚಿಸುತ್ತಿದ್ದಾರೆ. ಜನತೆಯ ಉತ್ಸಾಹ ಈ ರೀತಿಯಲ್ಲಿದ್ದರೆ ಎಂದಿನಂತೆ ತೃಣಮೂಲ ಚುನಾವಣಾ ಅಕ್ರಮಗಳನ್ನು ನಡೆಸುತ್ತಾ, ಎಡರಂಗದ ಬೆಂಬಲಿಗರ ಮೇಲೆ ದಾಳಿ ನಡೆಸುತ್ತಿದೆ. ಬರ್ಧ್ವಾನ್ ಮತ್ತು ಬಿರ್‌ಭೂಮ್ ಜಿಲ್ಲೆಗಳಲ್ಲಿ ಜನತೆ ತೃಣಮೂಲದ ಗೂಂಡಾಗಿರಿಗೆ ಪ್ರತಿರೋಧ ಒಡ್ಡಿದ್ದಾರೆ. ಇಲ್ಲೆಲ್ಲಾ ಕಡೆ ಜನತೆ ದೊಡ್ಡ ಸಂಖ್ಯೆಯಲ್ಲಿ ಜನತೆ ಮತಗಟ್ಟೆ ಬಂದು ಮತ ಚಲಾಯಿಸಿದ್ದಾರೆ. ನಾಡಿಯಾದಲ್ಲಿ ಮಾಜಿ ಸಚಿವ ಬಂಕಿಮ್ ಘೋಷ್ ಅವರ ಮನೆಯ ಮೇಲೆ ತೃಣಮೂಲ ಗೂಂಡಾಗಳು ದಾಳಿ ನಡೆಸಿದ್ದಾರೆ. ಅದಲ್ಲದೇ ಅಕ್ಕಪಕ್ಕ ಹಲವು ಮನೆಗಳಿಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ಶಾಂತಿಪುರದಲ್ಲಿ ಪೋಲಿಸರ ಎದುರೇ ಕಾಂಗ್ರೆಸ್ ಅಭ್ಯರ್ಥಿಯ ಮೇಲೆ ಹಲ್ಲೆ ನಡೆಸಲಾಗಿದೆ. ವಿರೋಧ ಪಕ್ಷಗಳ ಮೇಲೆ ಇಂತಹ ಹಲ್ಲೆ–ದಾಳಿಗಳು ವ್ಯಾಪಕವಾಗಿ ನಡೆಯುತ್ತಿವೆ.

ಕೊನೆಯ ಎರಡು ಹಂತಗಳಲ್ಲಿ ಅಕ್ರಮ ತಡೆಯಲು ಇನ್ನಷ್ಟು ಕ್ರಮಗಳಿಗೆ ಮನವಿ

ಏಪ್ರಿಲ್ 27, 2016 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚೂರಿಯವರು ನವದೆಹಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಪಶ್ಚಿಮ ಬಂಗಾಲದಲ್ಲಿ ಬಾಕಿ ಇರುವ ಎರಡು ಹಂತಗಳ ಚುನಾವಣೆಯಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಅಗತ್ಯವಾದ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲು ಮನವಿ ಮಾಡಿದ್ದಾರೆ. ನಾಲ್ಕನೇ ಹಂತದ ಚುನಾವಣೆಗಳಲ್ಲಿ ಜನರ ಅನುಭವಗಳನ್ನು ಆಧರಿಸಿ ಈ ಮನವಿಯನ್ನು ಸಲ್ಲಿಸಲಾಗಿದೆ. ಚುನಾವಣೆಗೆ ಪೂರ್ವಭಾವಿಯಾಗಿ ಪಶ್ಚಿಮ ಬಂಗಾಳಕ್ಕಿರುವ ಗಡಿಗಳನ್ನು ಮುಚ್ಚುವುದು ಒಂದು ಮುಖ್ಯವಾದ ಸಲಹೆಯಾಗಿದೆ. ಗಡಿ ಎಂದಾಗ ಬಾಂಗ್ಲಾದೇಶದ ಉದ್ದಕ್ಕೂ ಇರುವ ಅಂತರ ರಾಷ್ಟ್ರೀಯ ಗಡಿ ಮತ್ತು ನೆರೆಹೊರೆಯ ರಾಜ್ಯಗಳೊಂದಿಗೆ ಇರುವ ಅಂತರ್ ರಾಜ್ಯ ಗಡಿ ಎರಡೂ ಸಹ ಮುಚ್ಚಲ್ಪಡಬೇಕು ಎಂದು ವಿನಂತಿಸಲಾಗಿದೆ. ಅಪರಾಧಿಗಳು ಚುನಾವಣಾ ಅಕ್ರಮ ಎಸಗಿ ಹೊರರಾಜ್ಯಗಳಿಗೆ ಮತ್ತು ಹೊರ ದೇಶಕ್ಕೆ ತಪ್ಪಿಸಿಕೊಂಡು ಹೋಗುವುದನ್ನು ತಡೆಯಲು ಈ ಕ್ರಮ ಅಗತ್ಯವಾಗಿದೆ.

ಚುನಾವಣಾ ಆಯೋಗವು ತೆಗೆದುಕೊಂಡಿರುವ ಹಲವು ಕ್ರಮಗಳು ಮತದಾನ ಮಾಡಲು ಜನರಲ್ಲಿ ಉತ್ಸಾಹ ಮತ್ತು ಭರವಸೆ ಹುಟ್ಟಿಸಿವೆ ಎಂದಿರುವ ಮನವಿ ಚುನಾವಣಾ ಆಯೋಗದ ಅಧೀನದಲ್ಲಿರುವ ಕೇಂದ್ರ ಮೀಸಲು ಪಡೆ ಮತ್ತು ರಾಜ್ಯ ಪೋಲಿಸ ಬಲವನ್ನು ಚುನಾವಣಾ ಅಕ್ರಮಗಳ ತಡೆಗೆ ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿದ್ದು, ಆ ಬಗೆಗೆ ಗಮನ ನೀಡಬೇಕೆಂದು ವಿನಂತಿಸಿದೆ.

ದೊಡ್ಡ ಬದಲಾವಣೆಯತ್ತ ತಮಿಳು ನಾಡು ರಾಜಕೀಯ ಚಿತ್ರ.

ತಮಿಳುನಾಡಿನ ರಾಜಕೀಯದಲ್ಲಿ ಬಹುದೊಡ್ಡ ಬದಲಾವಣೆ ಕಾಣುವ ಸನ್ನಿವೇಶ ಹತ್ತಿರವಾಗುತ್ತಿದೆ ಎನಿಸುತ್ತಿದೆ. ಸಿಪಿಐ(ಎಂ) ವಿಶೇಷ ಮುತುವರ್ಜಿ ವಹಿಸಿ ದೃಢಗೊಳಿಸಲು ಶ್ರಮಿಸುತ್ತಿರುವ ಮಹಾ ಮೈತ್ರಿಕೂಟವು ದಿನೇ ದಿನೇ ಮಹತ್ವ ಪಡೆದುಕೊಳ್ಳುತ್ತಾ ಬಲಗೊಳ್ಳುತ್ತಾ ಹೊರಟಿದೆ. ಮತ್ತು ಚುನಾವಣಾ ಫಲಿತಾಂಶದ ಮೇಲೆ ಮಹತ್ವದ ಪರಿಣಾಮ ಬೀರುವ ಸಂಭವವೊಂದು ತೆರೆದುಕೊಳ್ಳುತ್ತಿದೆ ಎನಿಸುತ್ತಿದೆ. ಈಗಾಗಲೇ ಈ ಅಂಕಣದಲ್ಲಿ ವರದಿಯಾದಂತೆ 'ಜನತಾ ಕಲ್ಯಾಣ ರಂಗ'(ಪಿಡಬ್ಲ್ಯೂಎಫ್) ಎಂಬ ಮೈತ್ರಿಕೂಟವೊಂದು ರೂಪುಗೊಂಡು ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ ಹಲವು ಸುತ್ತಿನ ತೀವ್ರ ಪ್ರಚಾರಾಂದೋಲನ ನಡೆಸಲಾಗಿದೆ.

ವೈಕೋ ನೇತೃತ್ವದ ಎಂಡಿಎಂಕೆ, ಸಿಪಿಐ(ಎಂ), ಸಿಪಿಐ, ವಿಸಿಕೆ ಪಕ್ಷಗಳು ಸೇರಿ ಮೈತ್ರಿಕೂಟವನ್ನು ರಚಿಸಿಕೊಂಡು ಮುನ್ನಡೆಯುವ ಹಂತದಲ್ಲಿ ಮೈತ್ರಿಕೂಟದ ಜೊತೆ ಕೈಜೋಡಿಸಲು ಕೆಲವು ಪಕ್ಷಗಳು ಮುಂದಾಗಿವೆ. ಖ್ಯಾತ ನಟ ವಿಜಯ್ ಕಾಂತ್ ನೇತೃತ್ವದ ಡಿಎಂಡಿಕೆ ಪಕ್ಷ, ಜಿ.ಕೆ. ವಾಸನ್ ನೇತೃತ್ವದ ತಮಿಳ್ ಮಾನಿಲ ಕಾಂಗ್ರೆಸ್(ಟಿಎಂಸಿ) ಪಕ್ಷಗಳು 'ಜನತಾ ಕಲ್ಯಾಣ ರಂಗ'(ಪಿಡಬ್ಲ್ಯೂಎಫ್) ಜೊತೆ ಮೈತ್ರಿಗೆ ಮುಂದಾಗಿವೆ. ಸಿಪಿಐ(ಎಂ) ತನ್ನ ಮಹಾಧಿವೇಶನದ ತೀರ್ಮಾನದಂತೆ ಜಯಲಲಿತ ನೇತೃತ್ವದ ಜನವಿರೋಧಿ ಎಐಎಡಿಎಂಕೆಯನ್ನು ಅಧಿಕಾರದಿಂದ ಕಿತ್ತೊಗೆಯಬೇಕು. ಭ್ರಷ್ಟ ಡಿಎಂಕೆಯನ್ನು ಹಾಗೂ ಕೋಮುವಾದಿ ಬಿಜೆಪಿ ಮತ್ತು ಜಾತಿವಾದಿ ಪಿಎಂಕೆ ಹಾಗೂ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಎಂಬ ನಿಟ್ಟಿನಲ್ಲಿ ಶ್ರಮಿಸುತ್ತಿದೆ.

ಸೀಟು ಹಂಚಿಕೆ

ಒಟ್ಟು 234 ಸ್ಥಾನಗಳಲ್ಲಿ ಡಿಎಂಡಿಕೆ– 104 ಸ್ಥಾನಗಳಲ್ಲಿ, ಎಂಡಿಎಂಕೆ–29 ಸ್ಥಾನಗಳಲ್ಲಿ, ಟಿಎಂಸಿ 29 ಸ್ಥಾನಗಳಲ್ಲಿ, ಸಿಪಿಐ–25, ಸಿಪಿಐ(ಎಂ)–25, ವಿಸಿಕೆ–25 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಈ ವಾರ ಚರಿತ್ರೆಯಲ್ಲಿ

ಮೇ 1 – 1923

ಚೆನ್ನೈನಲ್ಲಿ ಭಾರತದ ಮೊದಲ ಮೇ ದಿನ

ಭಾರತದ ಮೊದಲ ಮೇ ದಿನವನ್ನು ಚೆನ್ನೈನಲ್ಲಿ 1923ರಲ್ಲಿ ಆಚರಿಸಲಾಯಿತು ಎಂದು ಹೇಳಲಾಗುತ್ತದೆ. ಮದ್ರಾಸ್ ಹೈ ಕೋರ್ಟಿನ ಬೀಚ್ ಮತ್ತು ಟ್ರಿಪ್ಲಿಕೇನ್ ಬೀಚ್ ನಲ್ಲಿ ಎರಡು ಕಡೆ ಹಿಂದುಸ್ತಾನ್ ಲೇಬರ್ ಕಿಸಾನ್ ಪಾರ್ಟಿಯ ನಾಯಕ ಸಿಂಗಾರವೇಲು ಚೆಟ್ಟಿಯಾರ್ ಮೇ ದಿನ ಆಚರಣೆ ಸಂಘಟಿಸಿದರು. ಕಾರ್ಮಿಕರು ಒಂದಾಗಿ ಸ್ವಾತಂತ್ರ್ಯಕ್ಕೆ ಹೋರಾಡಬೇಕೆಂದು ಕರೆ ನೀಡಲಾಯಿತು. ಪಕ್ಷದ ನೀತಿಗಳ ಬಗ್ಗೆ ತಿಳಿ ಹೇಳಲಾಯಿತು ಎಂದು 'ದಿ ಹಿಂದು' ಪತ್ರಿಕೆ ವರದಿ ಮಾಡಿತ್ತು.

ನನಗೆ ಸದ್ಯದಲ್ಲೇ 90 ವರ್ಷಗಳು ತುಂಬಲಿವೆ. ಎಲ್ಲರಂತೆ ನನ್ನ ಸರದಿಯೂ ಸದ್ಯಕ್ಕೆ ಬರಲಿದೆ. ಆದರೆ ಜಗತ್ತಿನ ಜನತೆಗೆ ಬೇಕಾಗುವ ಭೌತಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಉತ್ಪಾದಿಸುವುದು ಸಾಧ್ಯವಿದೆ ಎಂದು ಕ್ಯೂಬನ್ ಕಮ್ಯುನಿಸ್ಟರು ಜಗತ್ತಿಗೆ ತೋರಿಸಿದ ಯೋಚನೆಗಳು ಸಾರ್ವಕಾಲಿಕವಾಗಬೇಕು.

– ಫಿಡೆಲ್ ಕ್ಯಾಸ್ಟ್ರೋ





ಕ್ಯೂಬಾ ಕಮ್ಯುನಿಸ್ಟ್ ಪಕ್ಷದ 7ನೇ ಮಹಾಧಿವೇಶನ

ಕ್ಯೂಬಾ ಕಮ್ಯುನಿಸ್ಟ್ ಪಕ್ಷದ 7ನೇ ಮಹಾಧಿವೇಶನ ಎಪ್ರಿಲ್ 16 ರಿಂದ 19ರ ವರೆಗೆ ನಡೆದು ಸಫಲವಾಗಿ ಕೊನೆಗೊಂಡಿತು. ಎಪ್ರಿಲ್ 16 ಪಕ್ಷದ ಸ್ಥಾಪನಾ ದಿನವೂ 'ಬೆ ಆಫ್ ಪಿಗ್ಸ್' ಎಂದು ಕುಖ್ಯಾತವಾದ ಅಮೇರಿಕದ ಮಿಲಿಟರಿ ಅತಿಕ್ರಮಣ ಫಿಡೆಲ್ ಕ್ಯಾಸ್ಟ್ರೊ ಮಹಾಧಿವೇಶನದ ಸಮಾರೋಪದಲ್ಲಿ ಮಾತನಾಡಿದ್ದು ಸ್ಫೂರ್ತಿದಾಯಕ ಕ್ಷಣವಾಗಿತ್ತು. ಪಕ್ಷದ 54,500 ಶಾಖೆಗಳಲ್ಲಿರುವ 6.7 ಲಕ್ಷ ಸದಸ್ಯರನ್ನು ಪ್ರತಿನಿಧಿಸುವ ಸಾವಿರ ಪ್ರತಿನಿಧಿಗಳು ಹಾಗೂ 280 ಆಹ್ವಾನಿತರು ಮಹಾಧಿವೇಶನದಲ್ಲಿ ಭಾಗವಹಿಸಿದರು. ಪ್ರತಿನಿಧಿಗಳಲ್ಲಿ ಮಹಿಳೆಯರು ಶೇ. 43 ಮತ್ತು ಕರಿಯ/ಮಿಶ್ರ ಜನಾಂಗದವರು ಶೇ. 36ರಷ್ಟು ಇದ್ದರು. ಆದರೆ 35 ವರ್ಷದೊಳಗಿನ ಯುವಜನ ಶೇ. 5.5 ರಷ್ಟು ಇದ್ದರು. ಮಹಾಧಿವೇಶನ ರಾವುಲ್ ಕ್ಯಾಸ್ಟ್ರೊ ಅವರನ್ನು ಪ್ರಧಾನ (ಅಥವಾ ಕ್ಯೂಬಾದ ಹೆಸರಿನಂತೆ ಮೊದಲ) ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಮಹಾಧಿವೇಶನ 142 ಸದಸ್ಯರ ಕೇಂದ್ರ ಸಮಿತಿ ಮತ್ತು 17 ಸದಸ್ಯರ ಪಿ.ಬಿ. (ಪೊಲಿಟ್ ಬ್ಯುರೊ)ವನ್ನು ಚುನಾಯಿಸಿತು. ಹೊಸ ಪಿ.ಬಿ.ಯಲ್ಲಿ 5 ಜನ ಹೊಸ ಸದಸ್ಯರಿದ್ದಾರೆ. 4 ಜನ ಮಹಿಳೆಯರಿದ್ದಾರೆ. 5 ಕರಿಯ/ಮಿಶ್ರ ಜನಾಂಗದವರಿದ್ದಾರೆ. ಕೇಂದ್ರ ಸಮಿತಿಯಲ್ಲಿ ಶೇ. 44.4 ಮಹಿಳೆಯರಿದ್ದಾರೆ. ಶೇ. 36 ಕರಿಯ/ಮಿಶ್ರ ಜನಾಂಗದವರಿದ್ದಾರೆ.

ರಾವುಲ್ ಕ್ಯಾಸ್ಟ್ರೊ ವರದಿ ಅಲ್ಲದೆ ನಾಲ್ಕು ವಿಶೇಷ ದಸ್ತಾವೇಜುಗಳನ್ನು ಮಹಾಧಿವೇಶನದಲ್ಲಿ ಮಂಡಿಸಿದರು. 1. ಕ್ಯೂಬಾದ ಸಾಮಾಜಿಕ–ಆರ್ಥಿಕ ಮಾದರಿಯ ಪರಿಕಲ್ಪನೆ 2. 2030 ವರೆಗಿನ ಅಭಿವೃದ್ಧಿ ಯೋಜನೆ 3. 2011–16 ಅವಧಿಯಲ್ಲಿ ನಿರ್ದೇಶನಗಳ ಜಾರಿ ಮತ್ತು 2016–2021 ಅವಧಿಗೆ ನಿರ್ದೇಶನಗಳು 4. – ಆ ನಾಲ್ಕು ದಸ್ತಾವೇಜುಗಳು. ಇವುಗಳ ಬಗ್ಗೆ ಚರ್ಚೆಗಾಗಿ ಮಹಾದಿವೇಶನವನ್ನು 4 ಕಮಿಶನ್ ಗಳಾಗಿ ವಿಂಗಡಿಸಲಾಯಿತು. ಈ 4 ದಸ್ತಾವೇಜುಗಳ ಮಹತ್ವ ವಿವರಿಸುತ್ತಾ ರಾವುಲ್ ಹೀಗೆಂದರು: "ಕ್ಯೂಬಾದ ಕ್ರಾಂತಿಕಾರಿ ಪ್ರಕ್ರಿಯೆ, ಪಕ್ಷ ಮತ್ತು ಸಮಾಜಗಳ ಭವಿಷ್ಯದತ್ತ ಮತ್ತು ಸಮೃದ್ಧ ಮತ್ತು ಸುಸ್ಥಿರ ಸಮಾಜವಾದ ಕಟ್ಟುವತ್ತ ಹಾದಿಯನ್ನು ಹಾಕಿ ಕೊಡಲು ಈ ದಸ್ತಾವೇಜುಗಳು ಪ್ರಯತ್ನಿಸುತ್ತವೆ." ಇವುಗಳಲ್ಲಿ ಕ್ಯೂಬಾದ ಸಾಮಾಜಿಕ–ಆರ್ಥಿಕ ಮಾದರಿಯ ಪರಿಕಲ್ಪನೆ ಬಗ್ಗೆ ಪಕ್ಷದಲ್ಲಿ ಮೊದಲ ಬಾರಿಗೆ ಸಮಗ್ರ ಚರ್ಚೆಗೆ ಬರುತ್ತಿದೆ ಎಂದರು. 2016–2021 ಅವಧಿಯ ನಿರ್ದೇಶನಗಳ ಬಗ್ಗೆ ವಿವರಿಸುತ್ತಾ, ಆರ್ಥಿಕ ಮಾದರಿ ಬದಲಾಯಿಸುವಾಗ ಸೋವಿಯೆಟ್ ಮತ್ತು ಪೂ. ಯುರೋಪಿನ ದೇಶಗಳು ಅನುಸರಿಸಿದ 'ಶಾಕ್ ಥೆರಪಿ' ಮಾದರಿ ಅನುಸರಿಸುವುದಿಲ್ಲ. ದೇಶದ ಆಸ್ತಿಯನ್ನು ಖಾಸಗೀಕರಿಸುವ; ಆರೋಗ್ಯ, ಶಿಕ್ಷಣ, ಸಾಮಾಜಿಕ ಭದ್ರತೆಯಂತಹ ಸಾಮಾಜಿಕ ಸೇವೆಗಳನ್ನೂ ಎಂದೂ ಖಾಸಗೀಕರಿಸುವುದಿಲ್ಲ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ವಿರುದ್ಧ ಹೋಗುವ ಯಾವುದೇ ಬದಲಾವಣೆಗಳನ್ನು ತರುವುದಿಲ್ಲ. ಅದೇ ರೀತಿ ಮೂಲಭೂತ ಉತ್ಪಾದನಾ ಸಾಧನಗಳು ಜನತೆಯ ಒಡೆತನದಲ್ಲೇ ಇರುತ್ತವೆ ಎಂದು ರಾವುಲ್ ಭರಸವೆ ನೀಡಿದರು.

ಅಮೇರಿಕದ ದಿಗ್ಬಂಧನ ತೆಗೆಯುವ, ಅದರ ಜತೆ ಸಂಬಂಧ ಸಾಮಾನ್ಯೀಕರಿಸುವ ಪ್ರಕ್ರಿಯೆಯಲ್ಲಿ ಅಮೆರಿಕ ಕ್ಯೂಬಾದ 'ಮಾನವ ಹಕ್ಕುಗಳ' ಪ್ರಶ್ನೆಯನ್ನು ಯಾವಾಗಲೂ ಎತ್ತುವುದಕ್ಕೆ ಖಾರವಾಗಿ ಪ್ರತಿಕ್ರಿಯಿಸುತ್ತಾ, ಅಮೆರಿಕದ 'ಮಾನವ ಹಕ್ಕುಗಳ' ನಿರ್ವಚನೆ ಬೇರೆಯೇ. ಕ್ಯೂಬಾದಲ್ಲಿ ಮಾನವ ಹಕ್ಕುಗಳೆಂದರೆ – ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ, ಉಚಿತ ಸಾರ್ವತ್ರಿಕ ಶಿಕ್ಷಣ, ಆರೋಗ್ಯ ಸೇವೆಗಳ ಹಕ್ಕುಗಳು. ಇವ್ಯಾವುವೂ ಅಮೆರಿಕಕ್ಕೆ 'ಮಾನವ ಹಕ್ಕುಗಳು' ಅಲ್ಲ ಎಂದರು. ಅಮೆರಿಕಕ್ಕೆ ಒಂದು ಪಕ್ಷ ಇರುವುದೇ ದೊಡ್ಡ ಸಮಸ್ಯೆಯಾಗಿ ಕಾಣುತ್ತದೆ ಎಂದು ಟೀಕಿಸಿದರು. ಕ್ರಾಂತಿಯ ನಂತರ ಕ್ಯೂಬಾದಲ್ಲಿ 3 ಪಕ್ಷಗಳಿದ್ದವು. ಜುಲಯ 26 ಚಳುವಳಿ, ಪೊಪ್ಯುಲರ್ ಸೋಶಲಿಸ್ಟ್ ಪಕ್ಷ, ಮಾರ್ಚ 13 ಕ್ರಾಂತಿಕಾರಿ ಡೈರೆಕ್ಟೋರೇಟ್. ಈ ಮೂರು ರಾಜಕೀಯ ಪಕ್ಷಗಳು ಸೇರಿ ಕ್ಯೂಬನ್ ಕಮ್ಯುನಿಸ್ಟ್ ಪಕ್ಷ ಅಸ್ತಿತ್ವಕ್ಕೆ ಬಂತು. ಆಗ ದೇಶದ ಐಕ್ಯತೆಗಾಗಿ ಒಂದೇ ರಾಜಕೀಯ ಪಕ್ಷ ಒಳ್ಳೆಯದು ಎಂಬ ಅಭಿಪ್ರಾಯಕ್ಕೆ ಬಂದೆವು. ಆಗ ಇಲ್ಲದ ಬಹುಪಕ್ಷೀಯ ವ್ಯವಸ್ಥೆ ಬೇಕು, ಈಗಿನ ಇನ್ನಷ್ಟು ಸಂಕೀರ್ಣ ಹಾಗೂ ಸವಾಲಿನ ಸಂದರ್ಭದಲ್ಲಿ ಎಂದು ನಮಗೆ ಅನಿಸಿಲ್ಲ. ಪಕ್ಷದೊಳಗೆ ಮತ್ತು ದೇಶದಲ್ಲಿ ಗರಿಷ್ಟ ಪ್ರಜಾಪ್ರಭುತ್ವ ಸಾಧಿಸುವುದು ನಮ್ಮ ಗುರಿ. ಪಕ್ಷಗಳ ಸಂಖ್ಯೆ ಹೆಚ್ಚಿಸುವುದಲ್ಲ ಎಂದು ರಾವುಲ್ ಹೇಳಿದರು.

ಪಕ್ಷದಲ್ಲಿ ಕೆಲವು ಪ್ರಮುಖ ಸಂಘಟನಾ ಬದಲಾವಣೆಗಳನ್ನು ಮಹಾಧಿವೇಶನದಲ್ಲಿ ಪ್ರಸ್ತಾವಿಸಿ ಅಂಗೀಕರಿಸಲಾಯಿತು. ಇವುಗಳಲ್ಲಿ ನಾಯಕತ್ವದಲ್ಲಿ ಯುವಜನರ ಪ್ರಮಾಣ ಹೆಚ್ಚಿಸುವುದು ಪ್ರಮುಖವಾದ್ದು. ಇದರ ಪ್ರಕಾರ ಪ್ರಮುಖ ಹುದ್ದೆಗಳಿಗೆ ಎರಡು ಅವಧಿಗಳನ್ನು ನಿಗದಿಗೊಳಿಸಲಾಗಿದೆ. ಕೇಂದ್ರ ಸಮಿತಿ ಮತ್ತು ಪೊಲಿಟ್ ಬ್ಯುರೊಗೆ ಹೊಸ ಸದಸ್ಯರಾಗಲು ಅನುಕ್ರಮವಾಗಿ ಗರಿಷ್ಟ 60 ಮತ್ತು 70 ವರ್ಷ ನಿಗದಿ ಮಾಡಲಾಗಿದೆ.

ಸಿಗರನಹಳ್ಳಿ ದಲಿತರ ಚಾರಿತ್ರಿಕ ವಿಜಯ........ ಪುಟ 16 ರಿಂದ

ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು, ಸಿಗರನಹಳ್ಳಿಯಲ್ಲಿ ದೇವಾಲಯ, ಸಮುದಾಯ ಭವನ ಪ್ರವೇಶ ಮತ್ತು ಸಾಮೂಹಿಕ ಸಹಪಂಕ್ತಿ ಭೋಜನ ಕಾರ್ಯಕ್ರಮಕ್ಕೆಂದು ಹೊರಟಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲ ಕೃಷ್ಣ ಅರಳಳ್ಳಿ, ಹಿರಿಯ ಜನತಾಮಾಧ್ಯಮ ಪತ್ರಿಕೆಯ ಸಂಪಾದಕರಾದ ಆರ್.ಪಿ.ವೆಂಕಟೇಶ್‌ಮೂರ್ತಿ, ರೈತ ಹೋರಾಟಗಾರ ಮಂಜುನಾಥ್‌ದತ್ತ, ಸಾಹಿತಿಗಳಾದ ಜ.ಹೊ.ನಾರಾಯಣಸ್ವಾಮಿ ತಾಯಮ್ಮ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಸೇರಿದಂತೆ ಸುಮಾರು 40 ಕ್ಕೂ ಹೆಚ್ಚು ಜನರನ್ನು ಹಾಸನದಲ್ಲಿಯೇ ತಡೆದು ಬಂಧಿಸಲಾಯಿತು. ಇದನ್ನು ಖಂಡಿಸಿ ರಾಜ್ಯಾದ್ಯಂತ ನಡೆದ ಹೋರಾಟ; ಹೊಳೆನರಸೀಪುರದಿಂದ ಹಾಸನಕ್ಕೆ ಎಲ್ಲ ದಲಿತ ಸಂಘಟನೆಗಳೊಂದಿಗೆ ಪಾದಯಾತ್ರೆ; ಡಿಸೆಂಬರ್ 2015ರಲ್ಲಿ ದಲಿತ ಹಕ್ಕುಗಳ ಸಮಿತಿಯ ರಾಜ್ಯವ್ಯಾಪಿಯ ಜಾಥಾ – ಹಂತ ಹಂತವಾಗಿ ಚಳುವಳಿಯನ್ನು ಮುಂದಕ್ಕೆ ಒಯ್ದಿತ್ತು. ಸಿಗರನಹಳ್ಳಿ ಘಟನೆ, ಚಾಮರಾಜನಗರ ದಲಿತರ ಕೊಲೆ, ಕೊಪ್ಪಳದ ಗಂಗಾವತಿಯ ದಲಿತ ಯುವಕ ವೀರೇಶಪ್ಪನ ಕೊಲೆ ಮತ್ತು ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳ ಕುರಿತು ರಾಜ್ಯದ ಎರಡು ಭಾಗಗಳಿಂದ ಹೊರಟ ದಲಿತ ಹಕ್ಕುಗಳ ಸಮಿತಿಯ ಪಾದಯಾತ್ರೆ ಮತ್ತು ನಾಲ್ಕು ವಾಹನ ಜಾಥಾಗಳಲ್ಲಿ ಒಂದು ಜಾಥಾ ಹಾಸನಕ್ಕೆ ಆಗಮಿಸಿತ್ತು. ಇದರ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿ ವಹಿಸಿದ್ದರು. ಏಪ್ರಿಲ್ 13 ರಂದು ಸಿಗರನಹಳ್ಳಿ ವಿಚಾರ ಒಳಗೊಂಡಂತೆ ಹಾಸನ ಸೇರಿದಂತೆ ದಲಿತರ ಇತರೆ ಪ್ರಶ್ನೆಗಳ ಮೇಲೆ ರಾಜ್ಯಾದ್ಯಂತ ದಲಿತ ಹಕ್ಕುಗಳ ಸಮಿತಿಯ ನೇತೃತ್ವದಲ್ಲಿ ನಡೆದ ಒಂದು ದಿನದ ಸಮಾನತಾ ಸಂಕಲ್ಪ ದಿನ ಉಪವಾಸ ಧರಣಿ. ಬೆಂಗಳೂರಿನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಸಿಗರನಹಳ್ಳಿ ಚಲೋ ಘೋಷಣೆ ಒತ್ತಡ ಉಂಟು ಮಾಡಿತು. ಗೃಹಸಚಿವರ ಭೇಟಿ, ಸಮಸ್ಯೆ ಬಗೆಹರಿಸದಿದ್ದರೆ ರಾಜ್ಯದ ಎಲ್ಲಾ ಭಾಗಗಳಿಂದ ಜನರನ್ನು ಅಣಿನೆರೆಸಿ ಸಿಗರನಹಳ್ಳಿ ಚಲೋ ನಡೆಸುತ್ತೇವೆಂದು ಘೋಷಿಸಿದ್ದು ಕೊನೆಯ ನಿರ್ಣಾಯಕ ಸಂಗತಿಯಾಗಿತ್ತು. ಆದರೆ ಎಲ್ಲಾ ಹಂತದ ಹೋರಾಟಗಳೂ ಜನರ ನಡುವೆ ಜಾಗೃತಿ ಮೂಡಿಸಿದ್ದಲ್ಲದೆ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ಮೇಲೆ ಒತ್ತಡವನ್ನು ನಿರ್ಮಾಣಮಾಡಿ ಅಂತಿಮವಾಗಿ ದಲಿತರ ಹೋರಾಟಕ್ಕೆ ನ್ಯಾಯ ದೊರಕಿಸುವಂತಾಯಿತು.

ಸಿಗರನಹಳ್ಳಿ ಪ್ರಕರಣವನ್ನು ಬೆಳಕಿಗೆ ತರುವಲ್ಲಿ ಮತ್ತು ಅದರ ನಿರಂತರತೆಯನ್ನು ವರದಿಮಾಡುವಲ್ಲಿ ಪತ್ರಿಕೆಗಳು ತೋರಿದ ಗಮನ ಮತ್ತು ಕೆಲವು ಪತ್ರಿಕೆಗಳು, ಪತ್ರಕರ್ತರು ತೋರಿದ ವಿಶೇಷ ಆಸಕ್ತಿ ಇಂದು ಸಿಗರನಹಳ್ಳಿ ಇಷ್ಟೊಂದು ಸುದ್ದಿಯಾಗಲು ಕಾರಣವಾಗಿದೆ. ಈ ಪ್ರಕರಣವನ್ನು ವರದಿ ಮಾಡಿದ ಅದೇ ಗ್ರಾಮದ ವಿಜಯವಾಣಿ ಪತ್ರಕರ್ತ ವಿಜಯಕುಮಾರ್ ಸಿಗರನಹಳ್ಳಿಯವರನ್ನು ರಾಜಕೀಯ ಪ್ರಭಾವ ಬಳಸಿ ಹಾಸನದಿಂದ ದೂರದ ಕೊಪ್ಪಳಕ್ಕೆ ವರ್ಗಾವಣೆ ಮಾಡಿಸಿ ಅಂತಿಮವಾಗಿ ಅವರು ಕೆಲಸ ಕಳೆದುಕೊಳ್ಳುವಂತೆ ಮಾಡಿದರು. ಈ ಪ್ರಕರಣ ಪ್ರಾರಂಭವಾದಾಗಿನಿಂದ ಮತ್ತು ದಲಿತರ ವಿಚಾರಗಳು ಬಂದಾಗಲೆಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಎರಡು ರೀತಿಯ ಚರ್ಚೆಗಳು ನಡೆದಿರುವುದನ್ನು ಮತ್ತು ಈಗಲೂ ನಡೆಯುತ್ತಿರುವುದನ್ನು ಗಮನಿಸಬಹುದಾಗಿದೆ. ಸಿಗರನಹಳ್ಳಿ ದಲಿತರು ದೇವಾಲಯ ಪ್ರವೇಶ ಮಾಡಿದ ನಂತರ ಒಂದು ವರ್ಗದ ಜನ ದಲಿತರು ದೇವಾಲಯಕ್ಕೆ ಹೋಗುವ ಅವಶ್ಯಕತೆ ಏನಿದೆ, ಅವರನ್ನು ಮತ್ತೆ ಪುರೋಹಿತ ಶಾಹಿಯ ಕಪಿಮುಷ್ಠಿಗೆ ಒಪ್ಪಿಸಲಾಗುತ್ತಿದೆ ಎನ್ನುವ ಚರ್ಚೆಗಳೆಲ್ಲ ಬಂದವು. ಆದರೆ ಒಂದಂತೂ ಸತ್ಯ ದಲಿತರು ದೇವಸ್ಥಾನದ ಪ್ರಶ್ನೆಯನ್ನು ಎತ್ತಿದ್ದು ದೇವರ ಮೇಲಿನ ವಿಶೇಷ ಭಕ್ತಿಯಿಂದಲ್ಲ. ಬದಲಾಗಿ ಅವರನ್ನು ಜಾತಿಯ ಕಾರಣಕ್ಕಾಗಿ ನಿರ್ಭಂಧನ ಹೋಗಿ, ಸಾರ್ವಜನಿಕ ಸ್ಥಳಗಳಿಗೆ ನಮಗೆ ಮುಕ್ತ ಪ್ರವೇಶ ಸಿಗಬೇಕೆನ್ನುವ ಕಾರಣಕ್ಕಾಗಿ. ಅದು ಅವರ ಪ್ರಜಾಸತ್ತಾತ್ಮಕ ಹಕ್ಕು. ಅದನ್ನು ತಡೆಯಲು ಯಾರು ಪ್ರಯತ್ನಿಸಬಾರದು. ಅವರು ದೇವಸ್ಥಾನಕ್ಕೆ ಹೇಗೆ ಪ್ರವೇಶವನ್ನು ಕೇಳಿದರೋ ಅದೇ ರೀತಿ ಸಮುದಾಯ ಭವನಕ್ಕೂ ಪ್ರವೇಶವನ್ನು ಕೇಳಿದ್ದರು. ಅವರು ದೇವಾಲಯವನ್ನು ಪ್ರವೇಶಿಸಿದ ಮೇಲೆ ಒಂದು ಆತ್ಮವಿಶ್ವಾಸ ಮತ್ತು ಹೋರಾಟಗಳ ಮೇಲೆ ನಂಬಿಕೆ ಬಂದಿದೆ. ಈ ನಂಬಿಕೆ ಅವರನ್ನು ದಲಿತರ ಎಲ್ಲಾ ರೀತಿಯ ನೈಜ ಪ್ರಶ್ನೆಗಳನ್ನು ಕೈಗೆತ್ತಿ–ಕೊಂಡು ಹೋರಾಟ ನಡೆಸಬೇಕೆನ್ನುವ ಮಟ್ಟಕ್ಕೆ ತಂದು ನಿಲ್ಲಿಸಿದೆ.

ಮುಂದೇನು?

ದೇವಸ್ಥಾನ ಪ್ರವೇಶವಾಯಿತು ಮುಂದೇನು ಎನ್ನುವ ಪ್ರಶ್ನೆಯನ್ನು ಸಾಕಷ್ಟು ಜನ ಕೇಳುತ್ತಿದ್ದಾರೆ ಈ ಪ್ರಶ್ನೆಗಳಿಗೆ ಉತ್ತರವೆನ್ನುವಂತೆ ಸಿಗರನಹಳ್ಳಿಯ ದಲಿತರು ದೇವಾಲಯ ಪ್ರವೇಶದ ನಂತರ ಊರಿನಲ್ಲೊಂದು ಸಭೆ ನಡೆಸಿ ಈ ಐತಿಹಾಸಿಕ ಹೋರಾಟದಲ್ಲಿ ಜೊತೆಗಿದ್ದ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿ ದಲಿತರು ಸ್ವಾಭಿಮಾನದ ಪ್ರಶ್ನೆಗಳ ಜೊತೆಗೆ ನಮ್ಮ ಬದುಕಿನ ಪ್ರಶ್ನೆಗಳ ಬಗ್ಗೆಯೂ ಹೋರಾಟವನ್ನು ಮುಂದುವರೆಸಬೇಕು. ನಮ್ಮ ಕೂಲಿ, ಭೂಮಿ, ಆರೋಗ್ಯ, ವಸತಿ, ಶಿಕ್ಷಣ, ಸರ್ಕಾರದಿಂದ ಬರುವ ಸವಲತ್ತುಗಳನ್ನು ಪಡೆಯುವ ಆರ್ಥಿಕ ಹೋರಾಟಗಳನ್ನು ನಡೆಸಲು ಬೇಕಾದ ಬಲಿಷ್ಟ ಚಳುವಳಿಯನ್ನು ಕಟ್ಟಲು ಸ್ವತಃ ಸಿಗರನಹಳ್ಳಿಯ ದಲಿತರು ಸುತ್ತಮುತ್ತಲ ಊರುಗಳಿಗೆ ಹೋಗಲು ನಿರ್ಧರಿಸಿದ್ದಾರೆ. "ಎಲ್ಲ ಕಡೆ ನಮ್ಮವರು ಸಂಘ ಮಾಡಿಕೊಳ್ಳದಿದ್ರೆ ನಾವು ನೆಮ್ಮದಿಯಾಗಿ ಬದುಕುವುದು ಕಷ್ಟವಾಗುತ್ತದೆ" ಸಭೆಯಲ್ಲಿದ್ದ ಹಿರಿಯರೊಬ್ಬರು ಹೇಳಿದ ಮಾತು ಇದು. ಹಿರಿಯರ ಈ ಮಾತೇ ಸಿಗರನಹಳ್ಳಿಯ ಐತಿಹಾಸಿಕ ಹೋರಾಟದ ಗೆಲುವಿನಿಂದ ನಾವು ಕಲಿತ ಪಾಠ. ದಲಿತರನ್ನು ಸಂಘಟಿಸುವ ಜೊತೆಜೊತೆ–ಗೆ ಸವರ್ಣೀಯರನ್ನು ಜಾಗೃತರನ್ನಾಗಿಸಿ ಅವರನ್ನು ಜಾತಿಯ ಸಂಕೋಲೆಯಿಂದ ಹೊರತರುವ ಚಾರಿತ್ರಿಕ ಜವಾಬ್ದಾರಿ ನಮ್ಮ ಮೇಲಿದೆ.

ದಲಿತರು ದೇವಾಲಯ ಪ್ರವೇಶ ಮಾಡಿದ ಮೇಲೆ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದ ದೇವೇಗೌಡರ ಈ ಮಾತು ಅವರ ಮನಸ್ಥಿತಿಯನ್ನು ಮತ್ತೊಮ್ಮೆ ಸಾಬೀತು ಪಡಿಸುತ್ತದೆ "ನನಗೀಗ 85 ವರ್ಷ ನನ್ನ 55 ವರ್ಷಗಳ ಸುಧೀರ್ಘ ರಾಜಕೀಯ ಇತಿಹಾಸದಲ್ಲಿ ಈ ರೀತಿ ಎಂದಿಗೂ ಆಗಿರಲಿಲ್ಲ. ಜೀವನದ ಕೊನೆಗಾಲದಲ್ಲಿ ಇಂತಹ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ". ಎಂದು ಹತಾಶರಾಗಿ ಮಾತನ್ನಾಡಿದ್ದಾರೆ. ಇದೇ ದೇವೇಗೌಡರು ಮತ್ತು ರೇವಣ್ಣ ಸಿಗರನಹಳ್ಳಿ ಪ್ರಕರಣ ಪ್ರಾರಂಭದಲ್ಲಿ ಆಡಿದ ಮಾತುಗಳಿಗೂ ಈಗ ಆಡುತ್ತಿರುವ ಮಾತುಗಳನ್ನು ನೋಡಿದರೆ ಅವರ ಹತಾಶೆ ಯಾರಿಗಾದರೂ ಅರ್ಥವಾಗುತ್ತದೆ. ದೇವೇಗೌಡರ ಹತಾಶೆ ದಲಿತ ಚಳುವಳಿಯ ಸಫಲತೆಯ ಉತ್ತಮ ಸೂಚಕ. ಅವರ ಹತಾಶೆ ದಲಿತ ಚಳುವಳಿಗೆ ಅತ್ಯಂತ ಸ್ಫೂರ್ತಿದಾಯಕ !

ಸಿಗರನಹಳ್ಳಿಯ ಹೋರಾಟದ ನಂತರ ಜಿಲ್ಲೆಯ ಹಲವೆಡೆಗಳಲ್ಲಿ ದಲಿತರ ದೌರ್ಜನ್ಯದ ಪ್ರಕರಣಗಳು ಬೆಳಕಿಗೆ ಬಂದಿವೆ. ಇವುಗಳನ್ನು ಒಟ್ಟಿಗೆ ಸೇರಿ ಹೋರಾಟ ನಡೆಸಲು ದಲಿತ ಮತ್ತು ಕಮ್ಯೂನಿಸ್ಟ್ ಚಳುವಳಿಗಳು ನಿರ್ಧರಿಸಿವೆ. ಈ ಹೋರಾಟದ ಜಯ ದಲಿತರಿಗೆ ಮಾತ್ರವಲ್ಲದೆ ಜಿಲ್ಲೆಯ ಎಡ ಪ್ರಜಾಸತ್ತಾತ್ಮಕ ಚಳುವಳಿಗೆ ಹೊಸ ಚೈತನ್ಯವನ್ನು ತಂದಿದೆ.

RNI No. KARKAN /2006/17926 Posted on every Satuarday
Licensed to Post without prepayment License No. WPP-283



ಸಿಗರನಹಳ್ಳಿ ದಲಿತರ ಚಾರಿತ್ರಿಕ ವಿಜಯ

ಹೆಚ್.ಆರ್.ನವೀನ್‌ಕುಮಾರ್
ಹಾಸನ

ಕಳೆದ ಎಂಟು ತಿಂಗಳಿಂದ ಹಂತಹಂತವಾಗಿ ಹೋರಾಟಗಳನ್ನು ನಡೆಸಿದ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಸಿಗರನಹಳ್ಳಿಯ ದಲಿತರು ಕೊನೆಗೂ ದೇವಾಲಯ ಪ್ರವೇಶ ಮಾಡಿ, ಸಮುದಾಯ ಭವನದ ಹೆಸರು ಬದಲಾಯಿಸುವ ಮೂಲಕ ಒಂದು ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದ್ದಾ-ರೆ. ಈ ಮೂಲಕ ದಲಿತರ ಸ್ವಾಭಿಮಾನದ ಪ್ರಶ್ನೆಗೆ ಒಂದು ಹಂತದ ಜಯ ಸಿಕ್ಕಂತಾಗಿದೆ. 2015 ಆಗಸ್ಟ್ 31 ರಂದು ಸಿಗರನಹಳ್ಳಿಯ ದಲಿತ ಮಹಿಳೆಯರು ಅಲ್ಲಿಯ ಬಸವೇಶ್ವರ ದೇವಾಲಯಕ್ಕೆ ಪ್ರವೇಶ ಪಡೆದ ಕಾರಣಕ್ಕಾಗಿ ದಂಡ ಹಾಕಿದ ನಂತರ ದಲಿತರಿಗೆ ಸಾಮಾಜಿಕ ಬಹಿಷ್ಕಾರದಿಂದ ಪ್ರಾರಂಭವಾದ ಈ ಪ್ರಕರಣ ಇಲ್ಲಿಯವರೆಗೂ ಹತ್ತು ಹಲವು ಘಟ್ಟಗಳು, ತಿರುವುಗಳನ್ನು ಪಡೆದು ಅಂತಿಮವಾಗಿ ರಾಜಕೀಯ ಪ್ರವೇಶವೂ ಆಗಿ, ಈಗ ದಲಿತರ ದೃಡ ಹೋರಾಟಕ್ಕೆ ಜಿಲ್ಲಾಡಳಿತ ಮತ್ತು ಸರ್ಕಾರ ಮಣಿದು ದಲಿತರ ಹಕ್ಕುಗಳನ್ನು ಖಾತ್ರಿಪಡಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ಹೋರಾಟಕ್ಕೆ ಜಯ ಸಿಕ್ಕಿದೆ.

ಹಾಸನ ಮೂಲಭೂತವಾಗಿ ಜಮೀನ್ದಾರಿ ಮತ್ತು ಪಾಳೇಗಾರಿಗಳ ಪ್ರಾಬಲ್ಯವಿರುವ ಜಿಲ್ಲೆ ಮತ್ತು ಜಿಲ್ಲೆಯ ರಾಜಕಾರಣ ಇದೇ ಪಾಳೇಗಾರರ ಕೈಯಲ್ಲೆ ಸುಮಾರು 35 ವರ್ಷಗಳಿಂದ ಕೇಂದ್ರೀಕರಿಸಿದೆ. ಇವೆಲ್ಲವುಗಳಿಂದ ದಲಿತರು ತಮ್ಮ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ಅವುಗಳ ವಿರುದ್ಧ ದೊಡ್ಡ ರೀತಿಯಲ್ಲಿ ಧ್ವನಿ ಎತ್ತಲಾಗದೆ ಮತ್ತು ಚಳುವಳಿ ನಡೆಸಲಾಗದೇ ಅವಮಾನ ಮತ್ತು ದೌರ್ಜನ್ಯಗಳನ್ನು ಅನುಭವಿಸಿಕೊಂಡೇ ಬಂದಿದ್ದರು. ಆದರೆ ಸಿಗರನಹಳ್ಳಿಯ ಈ ಘಟನೆ ಜಿಲ್ಲೆಯ ದಲಿತರಿಗೆ ಮಾತ್ರವಲ್ಲದೆ ರಾಜ್ಯದ ದಲಿತರಿಗೂ ಮತ್ತು ದಲಿತ ಪರ ಚಳುವಳಿಗಳಿಗೂ ಹೋರಾಟದ ಸ್ಪೂರ್ತಿಯನ್ನು ತುಂಬುವಲ್ಲಿಯೂ ಯಶಸ್ವಿಯಾಗಿದೆ.

ವಿಜಯಕ್ಕೆ ಕಾರಣರಾದವರು

ಸಿಗರನಹಳ್ಳಿ ದಲಿತರು ಈ ಪ್ರಕರಣದಲ್ಲಿ ತೆ-ೋರಿದ ದೃಢ ಸಂಕಲ್ಪ ಮತ್ತು ಎಂತಹದ್ದೇ ಪರಿಸ್ಥಿತಿ ನಿರ್ಮಾಣವಾದರೂ ನಾವು ನಮ್ಮ ಹಕ್ಕುಗಳಿಗಾಗಿ ಮತ್ತು ಸ್ವಾಭಿಮಾನಕ್ಕಾಗಿ ಹೋರಾಟವನ್ನು ಮುಂದುವರೆಸುತ್ತೇವೆಂದು ನಿಂತಿದ್ದು, ಅದರಲ್ಲೂ ತಮ್ಮ ರಾಜಕೀಯ ಲಾಭಕ್ಕಾಗಿ ಮತ್ತು ಜಾತಿಯ ಕಾರಣಕ್ಕಾಗಿ ಏನು ಬೇಕಾದರೂ ಮಾಡುವ ಇಂತಹ ಪಾಳೇಗಾರಿ ಮನಸ್ಥಿತಿಗಳು ಸುತ್ತಲೂ ಇರುವಾಗಲೂ ತಮ್ಮ ಜೀವಗಳನ್ನು ಕೈಯಲ್ಲಿಟ್ಟುಕೊಂಡೇ ಜೀವನ ಸಾಗಿಸಿ, ಅಂದುಕೊಂಡ ಹಾಗೆ ಸಾಧಿಸಿದ್ದನ್ನು ಎಲ್ಲರೂ ಸ್ಮರಿಸಲೇ ಬೇಕು. ಅದರಲ್ಲೂ ಸಿಗರನಹಳ್ಳಿಯ ತಾಯಮ್ಮ, ಪಧ್ಮಮ್ಮ, ಪತ್ರಕರ್ತ ವಿಜಯಕುಮಾರ್, ರಾಜು ಇವರುಗಳ ಧೈರ್ಯವನ್ನು ಮೆಚ್ಚಲೇಬೇಕು. ಇದಕ್ಕೆ ಕಾರಣವಾದದ್ದು ಇವರ ಬೆನ್ನೆಲುಬಿಗೆ ನಿಂತು ನಿರಂತರ ಮಾರ್ಗದರ್ಶನ ಮಾಡಿದ ಸಂಘಟನೆಗಳು. ಅದರಲ್ಲೂ ಸಿಪಿಐ(ಎಂ), ದಲಿತ ಹಕ್ಕುಗಳ ಸಮಿತಿ, ಜಿಲ್ಲೆಯ ದಲಿತ ಚಳುವಳಿಗಳ ಮುಖಂಡರು ಮತ್ತು ಜನಪರ ಸಂಘಟನೆಗಳು. ಹಂತಹಂತವಾಗಿ ರೂಪಿಸಿದ ಕಾರ್ಯಕ್ರಮಗಳು ಮತ್ತು ಹೋರಾಟಗಳೆ ಸಿಗರನಹಳ್ಳಿಯ ವಿಚಾರ ಈ ರೀತಿ ರಾಷ್ಟ್ರಮಟ್ಟಕ್ಕೆ ಸುದ್ದಿಯಾಗಿ ಅಂತಿಮವಾಗಿ ದಲಿತರು ತಮ್ಮ ಹಕ್ಕುಗಳನ್ನು ಪಡೆಯುವಂತಾಯಿತು. ಇದು ಒಂದು ರೀತಿಯ ಮಾದರಿ ಹೋರಾಟವಾಗಿ ರೂಪಗೊಂಡು ಯಶಸ್ವಿಯಾಗಿದೆ. ಇದರಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕ ಎಂ.ಜಿ.ಪೃಥ್ವಿ, ಹಿರಿಯ ದಲಿತ ಮುಖಂಡರುಗಳಾದ ನಾರಾಯಣದಾಸ್, ಎಚ್.ಕೆ.ಸಂದೇಶ್, ಎಸ್.ಎನ್.ಮಲ್ಲಪ್ಪ, ಸತೀಶ್, ವಿಜಯ್‌ಕುಮಾರ್ ಮತ್ತು ಸಿಪಿಐ(ಎಂ) ರಾಜ್ಯ ಸಮಿತಿಯ ನಿರಂತರ ಮಾರ್ಗದಶನವನ್ನು ನೆನಪಿಸಿಕೊಳ್ಳಬೇಕು.

ಇತ್ತೀಚಿನ ವರ್ಷಗಳಲ್ಲಿ ಸಿಪಿಐ(ಎಂ) ಮತ್ತು ದಲಿತ ಹಕ್ಕುಗಳ ಸಮಿತಿ ದಲಿತ ಸಂಘಟನೆಗಳ ಜೊತೆ-ಗೂಡಿ ದೇಶಾದ್ಯಂತ ಮತ್ತು ರಾಜ್ಯದಲ್ಲಿ ಎತ್ತುತ್ತಿರುವ ದಲಿತರ ಪ್ರಶ್ನೆಗಳು ಅತ್ಯಂತ ನ್ಯಾಯ ಸಮ್ಮತವಾಗಿದ್ದು ಮತ್ತು ಈ ಹೋರಾಟಗಳೆಲ್ಲವೂ ಒಂದು ತಾರ್ಕಿಕ ಹಂತದ ಯಶಸ್ಸು ಗಳಿಸುತ್ತಿರುವತ್ತ ಸಾಗುತ್ತಿವೆ. ಇದು ದಲಿತರ ನಡುವೆ ವಿಶ್ವಾಸ, ಮತ್ತು ಈ ಸಂಘಟನೆಗಳು ಜಾತಿ, ಅಸ್ಪೃಶ್ಯತೆ ಮತ್ತು ದಲಿತ ದೌರ್ಜನ್ಯದ ವಿರುದ್ದ ರಾಜಿ ಇಲ್ಲದ ಹೋರಾಟ ನಡೆಸುತ್ತವೆ ಎನ್ನುವ ಭಾವನೆಯನ್ನು ಮೂಡಿಸಿದೆ. ದೇಶಾದ್ಯಂತ ದಲಿತ ಚಳುವಳಿಗಳು ಮತ್ತು ಕಮ್ಯೂನಿಸ್ಟ್ ಚಳುವಳಿಗಳು ಒಟ್ಟಿಗೆ ವಿಷಯಾಧಾರಿತವಾಗಿ ನಡೆಸುತ್ತಿರುವ ಚಳುವಳಿಗಳು ಆಶಾಕಿರಣವನ್ನು ಮೂಡಿಸುತ್ತದೆ. ಆದ್ದರಿಂದಲೇ ದೇಶದೆಲ್ಲಡೆ ಜೈ ಭೀಮ್, ಲಾಲ್ ಸಲಾಂ ಘೋಷಣೆಗಳು ಒಟ್ಟೊಟ್ಟಿಗೆ ಮೊಳಗುತ್ತಿವೆ. ಇವೆ ಈ ದೇಶದ ದಲಿತ, ಶ್ರಮ ಜೀವಿ, ಶೋಷಿತರ ಪರ್ಯಾಯ.

ಅನ್ಯಾಯ ಮಾಡುತ್ತಿರುವವರ 'ನ್ಯಾಯಕ್ಕಾಗಿ ಹೋರಾಟ'

ಸಿಗರನಹಳ್ಳಿಯ ಈ ಪ್ರಕರಣವನ್ನು ಮುಚ್ಚಿಹಾಕಲು ಮತ್ತು ದಾರಿ ತಪ್ಪಿಸಲು "ಜಾತ್ಯಾತೀತ" ಜನತಾದಳದ ಎಲ್ಲ ಹಂತದ ಮುಖಂಡರೂ ನೇರ ಕಾರ್ಯಾಚರಣೆಗೆ ಇಳಿದರು. ಎಷ್ಟರ ಮಟ್ಟಿಗೆ ಎಂದ-ರೆ ಸ್ವತಃ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರೇ ಮೂರು ಭಾರಿ ಪತ್ರಿಕಾಗೋಷ್ಠಿ ನಡೆಸಿ ನಾವು ಒಕ್ಕಲಿಗರ ಪರವಾಗಿರುವವರು ಎಂಬುದನ್ನು ಸಾಬೀತು ಮಾಡಲು ಪ್ರಯತ್ನಿಸಿದರು. ದಲಿತರು ಎತ್ತಿರುವ ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸುವ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡಲಾಯಿತು. ಏಪ್ರಿಲ್ 1 ರಂದು ಸಿಗರನಹಳ್ಳಿಯಲ್ಲಿ ಸವರ್ಣಿಯರು ಎಸಿ, ಎಎಸ್‌ಪಿ, ತಹಸಿಲ್ದಾರವರನ್ನು ದಿಗ್ಬಂದನದಲ್ಲಿಟ್ಟು ಪೋಲೀಸರ ಮೇಲೆ ನಡೆಸಿದ ಕಲ್ಲು ತೂರಾಟ, ಹಲ್ಲೆ ಪೋಲೀಸ್ ವರಿಷ್ಟಾಧಿಕಾರಿ ಸೇರಿ 8 ಜನ ಪೋಲೀಸರಿಗೆ ಗಾಯಗಳು ಆದವು. ಇದಕ್ಕೆ ಪ್ರತಿಯಾಗಿ ಇದರಲ್ಲಿ ಭಾಗಿಯಾದ ಸುಮಾರು 30 ಜನರನ್ನು ಪೋಲೀಸರು ಬಂಧಿಸಿದಾಗ ಸ್ವತಃ ಮಾಜಿ ಮಂತ್ರಿ ಹೊಳೆನರಸೀಪುರ ಕ್ಷೇತ್ರದ ಹಾಲಿ ಶಾಸಕ ದೇವೇಗೌಡರ ಪುತ್ರ ಎಚ್.ಡಿ.ರೇವಣ್ಣನವರ ನೇತೃತ್ವದಲ್ಲಿ "ಜಾತ್ಯಾತೀತ" ಜನತಾದಳದ ಕೆಲವು ಶಾಸಕರು ಮತ್ತು ಸ್ಥಳಿಯ ಸಂಸ್ಥೆಯ ಚುನಾಯಿತ ಪ್ರತಿನಿಧಿಗಳನ್ನಿಟ್ಟುಕೊಂಡು ಹಾಸನ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಧರಣಿ ನಡೆಸಿ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದರು. ಇಲ್ಲಿ ಒಂದು ತಮಾಷೆಯ ವಿಚಾರವೆಂದರೆ ಯಾರು ದಲಿತರ ಹಕ್ಕುಗಳನ್ನು ನಿರಾಕರಿಸಿ ದಲಿತರ ಮೇಲಿನ ದೌರ್ಜನ್ಯಕ್ಕೆ ನೇರವಾಗಿ ಕುಮ್ಮಕ್ಕು ನೀಡಿದ್ದರೋ ಅವರೇ ಪ್ರತಿಭಟನೆ ನಡೆಸಿ "ನ್ಯಾಯ"ಕ್ಕಾಗಿ ಆಗ್ರಹಿಸುವ ಪರಿಸ್ಥಿತಿಗೆ ಏನನ್ನಬೇಕೋ ಗೊತ್ತಾಗುತ್ತಿಲ್ಲ. ಮಾತ್ರವಲ್ಲ ಇವರ್‍ಯಾರು ಇಷ್ಟು ವರ್ಷಗಳ ಅವರ ರಾಜಕೀಯ ಜೀವನದಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗಾಗಿ ಎಂದೂ ಬೀದಿಗಿಳಿದು ಹೋರಾಟ ಮಾಡಿದವರಲ್ಲ.

ಈ ಪ್ರಕರಣ ಬೆಳಕಿಗೆ ಬಂದ ಮೇಲೆ ಸಿಗರನಹಳ್ಳಿಯಲ್ಲೆ ಎರಡು ಸುತ್ತಿನ ಶಾಂತಿ ಸಭೆಯನ್ನು ನಡೆಸಲಾಗಿದೆ. ಈ ಶಾಂತಿ ಸಬೆಯಲ್ಲಿ ಭಾಗವಹಿಸಿದ್ದ ಸ್ಥಳೀಯ ಶಾಸಕ ರೇವಣ್ಣನವರು ಯಾರಿಗೂ ಮಾತನಾಡಲು ಅವಕಾಶ ಮಾಡಿಕೊಡದೆ, ಅಧಿಕಾರಿಗಳು ಸಭೆಯ ನಡಾವಳಿಗಳನ್ನು ಧಾಖಲು ಮಾಡದಂತೆ ಮತ್ತು ಪತ್ರಕರ್ತರಿಗೆ ಸುದ್ದಿಮಾಡಲು ಬಿಡದೆ "ಹಿಂದೆ ಹೇಗೆ ಇದ್ರೊ ಅದೇ ರೀತಿ ನಡೆದುಕೊಂಡು ಹೋಗಿ" ಎಂದು ಫರ್ಮಾನು ಹೊರಡಿಸಿ ಹೋದವರು. ನೇರವಾಗಿ ದಲಿತರನ್ನು ನೀವು ದೇವಸ್ಥಾನವಾಗಲಿ ಸಮುದಾಯ ಭವನವನ್ನಾಗಲಿ ಪ್ರವೇಶ ಕೇಳಬೇಡಿ. ಇಂದು ದೇವಾಲಯಕ್ಕೆ ಪ್ರವೇಶ ಕೇಳಿದವರು ನಾಳೆ ನಮ್ಮ ಮನೆಯ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡಿ ಎಂದು ಬರುತ್ತೀರಿ. ಅದ-ಕ್ಕೆ ಅವಕಾಶ ಮಾಡಿಕೊಡಲಾಗುತ್ತದೆಯೇ ಎಂದು ಮಾತನಾಡಿದರು. ಇದರಿಂದಾಗಿ ಯಾವುದೇ ಕಾರಣಕ್ಕೂ ನ್ಯಾಯ ಸಿಗುವುದಿಲ್ಲ. ಬದಲಾಗಿ ಸಂವಿಧಾನದ ಕಾನೂನುಗಳ ಜಾರಿ ಮಾತ್ರವೇ ನಮಗೆ ನ್ಯಾಯವನ್ನು ಒದಗಿಸಬಲ್ಲದೆಂದು ದಲಿತರು ತಿಳಿದು ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದರು.

ಇಷ್ಟೆಲ್ಲ ನಡೆಯುತ್ತಿದ್ದರೂ ಜಿಲ್ಲಾಡಳಿತ ಯಾವುದೇ ರೀತಿಯ ಗಂಭೀರ ಕ್ರಮವಹಿಸಿ ದಲಿತರಿಗೆ ನ್ಯಾಯ ಕೊಡಿಸಲು ಮುಂದಾಗಲಿಲ್ಲ. ಮತ್ತು ರಾಜ್ಯದ ಕಾಂಗ್ರೆಸ್‌ನ ಅಹಿಂದ ಸರ್ಕಾರ ಇದಕ್ಕೂ ನಮಗೂ ಯಾವುದೇ ಸಂಬಂದವಿಲ್ಲ ಎನ್ನುವಂತೆ ವರ್ತಿಸಿತು. ಎಷ್ಟರ ಮಟ್ಟಿಗೆಂದರೆ ಹಿಂದೆ ಇದ್ದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಸ್ವತಃ ದಲಿತರೇ ಆಗಿದ್ದರೂ ಒಮ್ಮೆಯೂ ಸಿಗರನಹಳ್ಳಿಗೆ ಭೇಟಿ ನೀಡಲಿಲ್ಲ. ರಾಜ್ಯದ ಗೃಹ ಸಚಿವ ಜಿ.ಪರಮೇಶ್ವರ್ ದಲಿತರಾಗಿದ್ದರೂ ಹಾಸನ ಜಿಲ್ಲೆಗೆ ಭೇಟಿ ನೀಡಿದ್ದರೂ ಸಿಗರನಹಳ್ಳಿ ಪ್ರಕರಣದ ಕುರಿತು ಮಾತನಾಡಲಿಲ್ಲ. ಇತ್ತೀಚೆಗೆ ಜಿಲ್ಲೆಯವರೇ ಆದ ಎ.ಮಂಜು ಉಸ್ತುವಾರಿ ಸಚಿವರಾದ ಮೇಲೂ ಸಿಗರನಹಳ್ಳಿಗೆ ಭೇಟಿ ನೀಡಲಿಲ್ಲ. ಏಪ್ರಿಲ್ 13 ರಂದು ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಿಗರನಹಳ್ಳಿ ಪ್ರಕರಣ ಕುರಿತು ನಡೆದ ಸಭೆಯಲ್ಲಿ ಸಚಿವರು ನಾನು ಸಿಗರನಹಳ್ಳಿಗೆ ಭೇಟಿ ನೀಡಿದರೆ ಅದಕ್ಕೆ ರಾಜಕೀಯ ಬಣ್ಣ ಕಟ್ಟುತ್ತಾರೆ ಎಂದು ಬೇಜವಾಬ್ದಾರಿತನದ ಮಾತುಗಳನ್ನಾಡಿದ್ದಾರೆ. ಇದರಿಂದ ಕಾಂಗ್ರೆಸ್ ಕೂಡ ತಮ್ಮ ರಾಜಕೀಯ ಮತ ಬ್ಯಾಂಕುಗಳಿಗೆ ಎಲ್ಲಿ ಮೇಲ್ಜಾತಿಯವರಿಂದ ತೊಂದ-ರೆಯಾಗುತ್ತದೆಯೋ ಎಂಬಂತೆ ವರ್ತಿಸಿ ದಲಿತರ ಪ್ರಶ್ನೆಗಳಿಗೆ ಗಂಭೀರ ಗಮನ ನೀಡಲಿಲ್ಲ.

ಹಂತ ಹಂತದ ನಿರಂತರ ಹೋರಾಟ

ಈ ಪ್ರಕರಣವನ್ನು ಬಗೆಹರಿಸಲು ಜಿಲ್ಲಾಡಳಿತ ಗಂಭೀರವಾಗಿ ಕ್ರಮ ಕೈಗೊಳ್ಳಬೇಕೆಂದು ಮತ್ತು

ಪುಟ 15 ಕ್ಕೆ



ಏಪ್ರಿಲ್ 7,2016



ಏಪ್ರಿಲ್ 13, 2016



ಸೆಪ್ಟೆಂಬರ್ 2015

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**